# ಜ್ಞಾನಸುಧಾ

'ಕಾವ್ಯಾನಂದ' ವಿಶೇಷ ಸಂಚಿಕೆ



ದಿವಂಗತ ಶ್ರೀ ಸಿದ್ದಯ್ಯ ಪುರಾಣಿಕರು

ಜ್ಞಾನಜ್ಯೋತಿ ಕಲಾಮಂದಿರ (ರಿ.)
ನಂ. 31ಬಿ, ನಾಲ್ಕನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560 010

# ಜ್ಞಾನಸುಧಾ

ತ್ರೈಮಾಸಿಕ

[ಕಲೆ, ವಿಜ್ಞಾನ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಮೀಸಲು]

ಸಂಚಿಕೆ : 1

ಸಂಪುಟ : 23 ಜನವರಿ 1996

## 'ಕಾವ್ಯಾನಂದ' ವಿಶೇಷ ಸಂಚಿಕೆ



ದಿವಂಗತ ಶ್ರೀ ಸಿದ್ಧಯ್ಯ ಪುರಾಣಿಕರು

ಜ್ಞಾನಜ್ಯೋತಿ ಕಲಾಮಂದಿರ [ರಿ.]

ನಂ. 31-ಬಿ. 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 10

ಸಂಪಾದಕ ಮಂಡಲಿ ಅಧ್ಯಕ್ಷರು :

**ಡಿ. ಮಾಧವಮೂರ್ತಿ**

ಅಧ್ಯಕ್ಷರು, "ಜ್ಞಾನಜ್ಯೋತಿ" ಕಲಾಮಂದಿರ

ಪ್ರಧಾನ ಸಂಪಾದಕರು :

**ಹೆಚ್. ಜಿ. ರಾಮಚಂದ್ರ ರಾವ್**

ಬಿ.ಎ.,ಬಿ.ಎಲ್.,ಆರ್.ಬಿ.ವಿ.ಡಿ.ಎಸ್.ಡಬ್ಲ್ಯು. [ಕಲ್ಕತ್ತ]

ಸಹ ಸಂಚಾಲಕರು :

**ಜಿಂಜೋಳಿ ಪ್ರಹ್ಲಾದಾಚಾರ್ಯ**

**ಟಿ. ಎಸ್. ರಾಮರಾವ್**

**ಬಿ. ಎನ್. ವೆಂಕಟೇಶ್**

ಕಾರ್ಯಾಲಯ :

ನಂ. 3432, 6ನೇ ಕ್ರಾಸ್, ಗಾಯಿತ್ರಿನಗರ

ಬೆಂಗಳೂರು–560 021

Phone : 3327389/3327640

ಪ್ರಕಾಶಕರು :

**ಜ್ಞಾನಜ್ಯೋತಿ ಕಲಾಮಂದಿರ (ರಿ)**

ರಿ. ಆಫೀಸ್ ನಂ 31–ಬಿ, 4ನೇ ಬ್ಲಾಕ್

ರಾಜಾಜಿನಗರ, ಬೆಂಗಳೂರು–560 010

Phone : 3350924

ಮುದ್ರಕರು :

**ಎನ್. ಡಿ. ರಾಮಮೂರ್ತಿ**

ಶ್ರೀ ಪವರ್ ಪ್ರೆಸ್,

ನಂ. 577, ಓ.ಟಿ.ಸಿ. ರೋಡ್

ಬೆಂಗಳೂರು–560 053

## ಈ ಸಂಚಿಕೆಯಲ್ಲಿ

| ಲೇಖನ | ಲೇಖಕರು | ಪುಟ |
|---|---|---|
| ಮಾನವತೆಯ ಮಕರಂದ | —ಶ್ರೀಮತಿ ಚಂದ್ರಿಕಾ ಪುರಾಣಿಕ | 9 |
| ಸಮ್ಮೇಳನಾಧ್ಯಕ್ಷರಾದ ಕಾವ್ಯಾನಂದರ ಪರಿಚಯ | —ಶ್ರೀ ಹಿ. ಚಿ. ಶಾಂತವೀರಯ್ಯ | 12 |
| ಡಾ॥ ಸಿದ್ಧಯ್ಯ ಪುರಾಣಿಕರು ಮತ್ತು ಮಕ್ಕಳ ಸಾಹಿತ್ಯ | —ಶ್ರೀ ಎಸ್. ವಿ. ಶ್ರೀನಿವಾಸರಾವ್ | 16 |
| ದಾ. ರಾ. ಬೇಂದ್ರೆ-ನೀ ಪೂಜಿತನಾದೆ ಅನುಗಾಲ | —ಶ್ರೀ ಎಂ. ಕೆ. ತಿಮ್ಮೇಶಪ್ರಭು | 20 |
| ಮೊದಲು ಮಾನವನಾಗು | —ಡಾ॥ ಹಾ. ಮಾ. ನಾಯಕ್ | 25 |
| ಕನ್ನಡದ ಕನಸು ಕಂಡ ಕವಿ | —ಶ್ರೀ ಬಿ. ಎನ್. ವೆಂಕಟೇಶ್ | 29 |
| ಡಾ॥ ಸಿದ್ಧಯ್ಯ ಪುರಾಣಿಕರು | —ಡಾ॥ ಕೆ. ಮುದ್ದಣ್ಣ (ಸತ್ಯಾನಂದ) | 32 |
| ವಚನೋದ್ಯಾನ–ಒಂದು ಪರಿಚಯ | – ಶ್ರೀ ಟಿ. ಆರ್. ಮಹಾದೇವಯ್ಯ | 33 |
| ಕಾವ್ಯಾನಂದ ಒಂದು ನೆನಪು | —ಶ್ರೀಮತಿ ಎಸ್. ಕೆ. ರಮಾದೇವಮ್ಮ | 36 |
| ನೈಜ ಮಾನವತಾವಾದಿ | —ಶ್ರೀ ಕೆ. ಪಿ. ಶಿವಲಿಂಗಯ್ಯ | 37 |
| ಡಾ॥ ಸಿದ್ಧಯ್ಯ ಪುರಾಣಿಕರ ಕನ್ನಡ ನಿಘಂಟು ಸೇವೆ | —ಶ್ರೀ ಎನ್. ಬಸವಾರಾಧ್ಯ | 40 |
| ಶುದ್ಧ ಹೃದಯದ ಸ್ನೇಹ ಜೀವಿ | —ಶ್ರೀ ಎನ್. ಕೆ. ಕುಲಕರ್ಣಿ | 40 |
| ಡಾ॥ ಸಿದ್ಧಯ್ಯ ಪುರಾಣಿಕರ ಒಂದು ನೆನಪು | — ಶ್ರೀ ಜಿ. ಎಸ್. ಸಿದ್ಧಲಿಂಗಯ್ಯ | 44 |
| ಕವಿ ಮತ್ತು ದಾರ್ಶನಿಕ | —ಶ್ರೀ ಸಾ. ಶಿ. ಮರುಳಯ್ಯ | 55 |
| ಮಾನವ ಪಾರಮ್ಯದ ಕವಿ, ಹೋರಾಟಗಾರ ಸಿದ್ಧಯ್ಯ ಪುರಾಣಿಕ | —ಶ್ರೀ ಬಸವರಾಜ್ ಪುರಾಣಿಕ | 57 |
| ವಚನೋದ್ಯಾನ ಕುರಿತು | —ಡಾ॥ ಎಂ. ಚಿದಾನಂದಮೂರ್ತಿ | — |

# ಸಂಪಾದಕೀಯ....

ಆಡಳಿತ ದಕ್ಷತೆ ಮತ್ತು ಸಾಹಿತ್ಯಾಸಕ್ತಿಯ ರಸಿಕತೆ ಒಂದೆಡೆ ಸೇರುವುದು ಅಪೂರ್ವ ಯೋಗಾಯೋಗ. ಕೇವಲ ವ್ಯಕ್ತಿಯಾಗಿ ಮಾತ್ರವಲ್ಲ, ಕನ್ನಡ ನಾಡಿನ ಮಹಾಶಕ್ತಿಯಾಗಿ ನಾಡು, ನುಡಿ ಮತ್ತು ಭಾರತೀಯ ಸಂಸ್ಕೃತಿಯ ಪ್ರಚಾರ ಕೈಂಕರ್ಯದ ದೀಕ್ಷೆಯನ್ನು ತೊಟ್ಟ ಡಾ॥ ಸಿದ್ಧಯ್ಯ ಪುರಾಣಿಕರ ಬದುಕೇ ಒಂದು ಸುಂದರ ಕಾವ್ಯ.

ಕನ್ನಡ, ಸಂಸ್ಕೃತ, ಉರ್ದು, ಆಂಗ್ಲ ಭಾಷೆಗಳಲ್ಲಿ ಅನರೊಬ್ಬ ಉದ್ದಾಮ ವಿದ್ವಾಂಸರು. ನುರಿತ ವಾಗ್ಮಿಗಳು ವೃತ್ತಿಯಲ್ಲಿ ಜನಾನುರಾಗ ಗಳಿಸಿ ಉದಯೋನ್ಮುಖರಾಗಿ ಬೆಳಗಿದ ದಿವ್ಯ ಚೇತನ, ಇಂತಹ ಮಹಾನ್ ವ್ಯಕ್ತಿ ಸರಕಾರದ ನಾನಾ ಇಲಾಖೆಗಳಲ್ಲಿ ಕನ್ನಡದ ಬಗ್ಗೆ ಎಚ್ಚರವಾಗಿ ನಿರ್ವಹಿಸಿದ ಪಾತ್ರ ಮಹತ್ತರವಾದುದು. ನಾನಾ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಜನಪ್ರಿಯರಾದುದು ಕನ್ನಡಿಗರ ಭಾಗ್ಯವೆಂದು ಹೇಳಬೇಕು.

ಕರ್ನಾಟಕ ಏಕೀಕರಣ, ಕನ್ನಡದ ಏಳಿಗೆಗೆ ನಡೆಯುವ ಯಾವುದೇ ಸಮಾರಂಭದಲ್ಲಿ ಅವರ ಮಹತ್ವಪೂರ್ಣ ಭಾಷಣಗಳು, ಕನ್ನಡ ನಿಘಂಟಿನ ಕೆಲಸ, ಇತ್ತೀಚಿನ ದಿನಗಳಲ್ಲಿ ವಿಕಾಸವೇದಿಕೆಯ ಕಾರ್ಯಭಾರ ನಡೆಸಿ ಕರ್ನಾಟಕದ ಜನಮನದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾರೆ. ಉತ್ತಮ ಸಾಹಿತ್ಯ ನಿರ್ಮಾಣ, ದಕ್ಷ ಆಡಳಿತ ಮತ್ತು ಜನಾನುರಾಗದ ಗುಣಗಳಿಂದ ಅವರ ಬಾಳುವೆಯು ಚಿರಕಾಲ ಜನಮನದಲ್ಲಿ ಉಳಿಯುವಂತಾಗಿದೆ.

ಬಸವಾಭಿಮಾನಿಗಳಾಗಿ, ಬಸವ ಭಕ್ತರಾಗಿ ಕನ್ನಡಿಗರ ಹೆಮ್ಮೆಯ ಸಾಹಿತಿಯಾಗಿ ಭಾರತದ ಸುಪುತ್ರರಾಗಿ ಸೇವೆ ಸಲ್ಲಿಸಿದ ಡಾ॥ ಸಿದ್ಧಯ್ಯ ಪುರಾಣಿಕರ ಬಗ್ಗೆ ಅವರ ಬಹುಮುಖ ಸೇವಾ ಕಾರ್ಯಗಳ ಬಗ್ಗೆ ಜನತೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"ಕಾವ್ಯಾನಂದ"ರೆಂದು ಖ್ಯಾತರಾದ ಶ್ರೀಯುತರ ಚಿರನೆನಪಿಗಾಗಿ "ಜ್ಞಾನಸುಧಾ" ಈ ವಿಶೇಷ ಸಂಚಿಕೆಯನ್ನು ಹೊರತಂದು ಕನ್ನಡದ ಈ ಹೆಮ್ಮೆಯ ಪುತ್ರನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

ಈ ಸ್ಮರಣೆ ಸಂಚಿಕೆಯನ್ನು ಹೊರತರಲು ಡಾ॥ ಸಿದ್ಧಯ್ಯ ಪುರಾಣಿಕರವರ ಮಕ್ಕಳು, ಶ್ರೀ ನಂದೀಶ್ವರ ದಂಪತಿಗಳು ಹಲವಾರು ವಿಧದಲ್ಲಿ ಸಹಾಯ ಸಹಕಾರಗಳನ್ನು ನೀಡಿರುವುದನ್ನು ಈ ಸಂದರ್ಭದಲ್ಲಿ ನಮ್ಮ ಮಂದಿರದ ಸಮಿತಿ ಹಾಗೂ ಸಂಪಾದಕ ಮಂಡಲಿ ಅಭಿನಂದಿಸುತ್ತದೆ. ಓದುಗರ ಸಲಹೆಗಳಿಗೆ ಎಂದಿನಂತೆ ಸುಸ್ವಾಗತ.

**ಹೆಚ್. ಜಿ. ರಾಮಚಂದ್ರರಾವ್**
ಪ್ರಧಾನ ಸಂಪಾದಕರು

# ನಾವು ಕಂಡ ದೇವಾಲಯ

"ನೋಡಣ್ಣ ನೋಡು ಒಳ್ಳೆಯದನ್ನು ನೋಡು, ಮಾಡಣ್ಣ ಮಾಡು ಒಳ್ಳೆಯ ಕೆಲಸ ಮಾಡು'' ಎಂಬಂತೆ ಇದೇ ತಾಲ್ಲೂಕಿನ ಅತ್ತಿಬೆಲೆ ಹೋಬಳಿ ಬಿದರಗುಪ್ಪೆ ಗ್ರಾಮದಲ್ಲಿ ಒಂದು ಸುಂದರವಾದ ರಥಾರೂಢ ಗಾಯತ್ರಿ ದೇವಸ್ಥಾನವು ರೂಪುಗೊಂಡಿದ್ದು, ನಮ್ಮ ಕರ್ನಾಟಕಕ್ಕೆ ಹೆಮ್ಮೆಯಾಗಿದೆ. ಈ ಕಾರ್ಯದ ಕೇಂದ್ರ ಬಿಂದು ಶ್ರೀಯುತ ವಿ. ಶ್ರೀಕಂಠಸ್ವಾಮಿ ದೀಕ್ಷಿತರನ್ನು ನಿಜವಾಗಿಯೂ ಮೆಚ್ಚತಕ್ಕದ್ದೇ ಆಗಿದೆ. ಶ್ರೀಯುತರು ಇದೇ ಗ್ರಾಮದ ದಿ॥ ವೆಂಕಟೇಶ ದೀಕ್ಷಿತರ ಪುತ್ರರು. ದೇವಾಲಯವನ್ನು ನೋಡಿದರೆ ಅದರ ಮಹತ್ವ ತಿಳಿಯುವುದು. ಊರಿನ ಯುವ ಶಕ್ತಿಯೊಂದಿಗೆ ಶ್ರೀಯುತರು ಬೆರೆತು ಈ ಮಹತ್ಕಾರ್ಯ ಸಾಧಿಸಿರುವರು. ತಮ್ಮ ಕಾವ್ಯ ಶಕ್ತಿಯನ್ನು ಈ ರಥದಲ್ಲಿ ರೂಪಿಸಿದ್ದಾರೆ. ಎದ್ದು ಕಾಣುವ 4 ಚಕ್ರಗಳು ಅಷ್ಟ ಲಕ್ಷ್ಮಿಗಳು ಧ್ವಜಗಳು ತೂಗುದಿಂಬುಗಳು, ಪಂಚವಾದ್ಯಗಳು ತೇರನ್ನು ಎಳೆದೊಯ್ಯುತ್ತಿರುವಂತೆ ಕಾಣುವ ಗರುಡ, ಹಂಸ, ವೃಷಭಗಳು.

ಮಹಾದ್ವಾರದಲ್ಲಿ ಎದ್ದುಕಾಣುವ ಎರಡು ಸಿಂಹಗಳು ಭಕ್ತರನ್ನು ಬರಮಾಡಿಕೊಳ್ಳುತ್ತಿರುವಂತಿದೆ. ದೇವಾಲಯದ ಸುತ್ತಲೂ ಗಾಯತ್ರಿಯ ಬಗ್ಗೆ ಶ್ಲೋಕಗಳು, ಇವುಗಳನ್ನೆಲಾ ನೋಡಿದಾಗ ನಿಜಕ್ಕೂ ತಲೆದೂಗುವ ಕೆಲಸವೇ ಎಂಬುದರಲ್ಲಿ ಸಂಶಯವಿಲ್ಲ. ಶ್ರೀ ಆದಿಶಕ್ತಿ ಗಾಯತ್ರಿಯ ಪ್ರೇರಣೆಯೇ ಈ ಒಂದು ಮಹತ್ಕಾರ್ಯಕ್ಕೆ ಅಡಿಪಾಯವಾಗಿದೆ. ಆ ದೇವಿಯೇ ಎಂಜಿನಿಯರ್ ಆಗಿ ಪ್ರೇರಣೆ ಕೊಟ್ಟು ಈ ಕೆಲಸಗಳನ್ನು ಮಾಡಿಸಿಕೊಂಡಿರುವಳು. ಇದೊಂದು ಪವಾಡವೇ ಆಗಿದೆ. "ಬಂದು ನೋಡಿ ಮಾತಾಡು'' ಎಂಬಂತೆ, ತಾವೇ ಬಂದು ಕಣ್ಣಾರೆ ನೋಡಿ. ಶ್ರೀಯುತರು, ಎಲ್ಲಾ ರೀತಿಯ ಸಮಾಜ ಸೇವೆಗಳನ್ನೂ ಶ್ರೀ ಗಾಯತ್ರಿ ಸೇವಾ ಸಮಿತಿಯ ಹೆಸರಿನಲ್ಲಿ ನಡೆಸುತ್ತಿರುವರು. ಉತ್ತಮ ಶಿಕ್ಷಕರಿಗೆ ಸಮಿತಿಯಿಂದ ಪ್ರಶಸ್ತಿ ಪ್ರದಾನ ಮತ್ತು ಕ್ರೀಡೆಗಳಲ್ಲಿ ವಿಜಯಿಯಾದವರಿಗೆ ಬಹುಮಾನ ವಿತರಣೆ ಇತ್ಯಾದಿ. ಇದು ಮೆಚ್ಚುವ ವಿಷಯವೇ ಆಗಿದೆ. ಶ್ರೀಯುತ ದೀಕ್ಷಿತರನ್ನು "ಕಲಾರತ್ನ" ಎಂದು ಕರೆದರೆ ತಪ್ಪಾಗಲಾರದು.

ಇಂತಹ ಅಪೂರ್ವ ಕಲಾ ದೇಗುಲವನ್ನು ನಮ್ಮ ಕರ್ನಾಟಕಕ್ಕೆ ಕೊಡುಗೆಯಾಗಿ ಕೊಟ್ಟ ಬಿದರಗುಪ್ಪೆ ಗ್ರಾಮಸ್ಥರಿಗೂ ಯುವಕರಿಗೂ ಶ್ರೀಯುತ ವಿ॥ ಶ್ರೀಕಂಠಸ್ವಾಮಿ ದೀಕ್ಷಿತರಿಗೂ ನಮ್ಮ ಸಂಸ್ಥೆಯ ಅಭಿನಂದನೆಗಳು.

**D. Manjunatha** B.Sc., B.L.
MINISTER FOR HIGHER
EDUCATION

Telephone : Office : 2252475
Resi : 3334771
VIDHANA SOUDHA,
BANGALORE-1

MHE/DO/265/95

Date 28-02-95

## ಶುಭ ಸಂದೇಶ

ಜ್ಞಾನಜ್ಯೋತಿ ಕಲಾ ಮಂದಿರ (ರಿ), ರಾಜಾಜಿನಗರ, ಬೆಂಗಳೂರು ಇವರು ಡಾ॥ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ರವರ ಸ್ಮಾರಕ ಜ್ಞಾನಸುಧಾ ಎಂಬ ತ್ರೈಮಾಸಿಕ ಸಂಚಿಕೆಯನ್ನು ಹೊರತರುತ್ತಿರುವುದು ಸಂತೋಷದ ವಿಷಯ.

ಸದರಿ ಸಂಚಿಕೆಯಲ್ಲಿ ಉತ್ತಮ ಸಾಹಿತ್ಯ, ಕೃತಿ, ದರ್ಶನಗಳನ್ನೊಳಗೊಂಡ ಲೇಖನಗಳೊಂದಿಗೆ ಹೊರ ಬರಲಿ ಎಂದು ಶುಭ ಹಾರೈಸುತ್ತೇನೆ.

(ಡಿ. ಮಂಜುನಾಥ್)

ಅಧ್ಯಕ್ಷರು,
ಜ್ಞಾನಸುಧಾ ಸಂಪಾದಕ ಮಂಡಲಿ,
ಜ್ಞಾನಜ್ಯೋತಿ ಕಲಾಮಂದಿರ (ರಿ)
31-ಬಿ, 4ನೇ ಬ್ಲಾಕ್,

---

**T. Ramesh U. Pai**

"CITRAKALA"
MANIPAL - 576 119
KARNATAKA, INDIA
Tel : 70222 Fax : 20222

ಫೆಬ್ರವರಿ 23, 1995

ಪ್ರೀತಿಯ ಶ್ರೀ ಮಾಧವಮೂರ್ತಿಯವರಿಗೆ,

ನೀವು ಡಾ॥ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ರವರ ಸ್ಮಾರಕ ಜ್ಞಾನಸುಧಾ ತ್ರೈಮಾಸಿಕ ಸಂಚಿಕೆಯನ್ನು ಪ್ರಕಟಿಸುವುದು ನನಗೆ ಬಹಳಷ್ಟು ಸಂತೋಷವನ್ನು ತಂದಿದೆ. ಕನ್ನಡನಾಡು ನುಡಿಗಳಿಗೆ, ಸಾಹಿತ್ಯಕ್ಕೆ ಅವರು ಅಪಾರ ಸೇವೆಯನ್ನು ಸಲ್ಲಿಸಿ, ಕೀರ್ತಿ ಶೇಷರಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ಸ್ಮರಣೆ ಮಾಡುವುದು ಮುಂದಿನ ಪೀಳಿಗೆಗೆ ನೀವು ಹಾಕಿಕೊಡುವ ಸತ್‌ಸಂಪ್ರದಾಯ ಹಾಗೂ "ಜ್ಞಾನ ಸುಧಾ" ತ್ರೈಮಾಸಿಕಕ್ಕೆ ಒಂದು ಗೌರವ. ಈ ಸ್ಮರಣ ಸಂಚಿಕೆಯು ಅತ್ಯಂತ ಯಶಸ್ವಿಯಾಗಿ ಪ್ರಕಟವಾಗುವಂತಾಗಲಿ ಎಂದು ಹಾರೈಸಿ ನನ್ನ ಶುಭಾಶಯಗಳನ್ನು ಕಳುಹಿಸಿದ್ದೇನೆ.

ವಂದನೆಗಳೊಂದಿಗೆ,
ಇತಿ ತಮ್ಮ ವಿಶ್ವಾಸಿ
(ರಮೇಶ್ ಪೈ)

ಶ್ರೀ ಡಿ. ಮಾಧವಮೂರ್ತಿ
ಅಧ್ಯಕ್ಷರು, ಜ್ಞಾನ ಸುಧಾ ಸಂಪಾದಕ ಮಂಡಳಿ
31-ಬಿ. ನಾಲ್ಕನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560 010.

ಐ. ಕೆ. ಅಮಿತ
ಸೀನಿಯರ್ ವೈಸ್ ಪ್ರೆಸಿಡೆಂಟ್
ಟೈಟಾನ್ಸ್ ವಾಚ್ ಇಂಡಸ್ಟ್ರೀಸ್

ಬೆಂಗಳೂರು
ದಿನಾಂಕ 28-7-1995

## ಶುಭ ಸಂದೇಶ

ಗೆಳೆಯ ಶ್ರೀ ಮಾಧವಮೂರ್ತಿಗಳವರಿಗೆ,

ತಮ್ಮ ಪತ್ರ ತಲುಪಿತು ಡಾ॥ ಸಿದ್ದಯ್ಯ ಪುರಾಣಿಕರ ಬಗ್ಗೆ ಹೇಳುವುದಾದರೆ ಕನ್ನಡದ ಖ್ಯಾತ ಕವಿ. ಇವರು ಐ.ಎ.ಎಸ್. ಪದವಿ ಕೇವಲ ಪರೀಕ್ಷೆಗಾಗಿ ಅವರ ಅವಕಾಶದ ಪರಿಶ್ರಮ, ಅಕ್ಷರಗಳು, ಭಾಷಾ ಲಾಲಿತ್ಯ, ಕಾವ್ಯವೇ ಅವರ ಜೀವನದ ಉಸಿರಾಗಿತ್ತು.

ಕೆಲಸ ಕಾರ್ಯದಲ್ಲಿ ದಕ್ಷತೆ, ಆಸಕ್ತಿ, ಶ್ರದ್ಧೆ ಅಪಾರ. ಇಂತಹ ಮಹಾ ಪುರುಷರು ಜನ ಸಾಮಾನ್ಯರಲ್ಲಿ ಇದ್ದ ಆತ್ಮೀಯತೆ ಎಂದೂ ಮರೆಯುವಂತಿಲ್ಲ.

ಇನ್ನು ತಾವು ಪ್ರಕಟಿಸುತ್ತಿರುವ ಜ್ಞಾನಸುಧಾ ಧಾರ್ಮಿಕ, ಕನ್ನಡ ಸಾಹಿತ್ಯ, ಸಂಸ್ಕೃತಿ ಕಲೆಗಳ ಅಭಿವೃದ್ಧಿಗಾಗಿ ವಿಶಾಲವಾಗಿರುವ ಜ್ಞಾನಸುಧಾ ಕನ್ನಡಿಗರಿಗೆ ಜ್ಞಾನಸುಧೆಯನ್ನು ಹರಿಸಲೆಂದು ಹಾರೈಸುತ್ತೇನೆ. ಶ್ರೀ ಡಿ. ಮಾಧವ ಮೂರ್ತಿಗಳು ಏರ್ಪಡಿಸಿದ ಹಲವಾರು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿ ಸಂತೋಷ ಪಟ್ಟಿದ್ದೇನೆ.

ಈಗ ಪ್ರಕಟಿಸುತ್ತಿರುವ ಡಾ॥ ಸಿದ್ದಯ್ಯ ಪುರಾಣಿಕ (ಕಾವ್ಯಾನಂದರ) ಸ್ಮಾರಕ ಸಂಚಿಕೆಯು ಸ್ಮರಣೀಯವಾಗಿ ನಿಲ್ಲುವಂತಾಗಲಿ.

ಇತಿ ತಮ್ಮ ವಿಶ್ವಾಸಿ,
(ಐ. ಕೆ. ಅಮಿತ)
ಸೀನಿಯರ್ ವೈಸ್ ಪ್ರೆಸಿಡೆಂಟ್
ಟೈಟಾನ್ಸ್ ವಾಚ್ ಇಂಡಸ್ಟ್ರೀಸ್

ಗೆ,
ಶ್ರೀ ಡಿ. ಮಾಧವ ಮೂರ್ತಿ
ಅಧ್ಯಕ್ಷರು,
ಜ್ಞಾನಸುಧಾ ಸಂಪಾದಕ ಮಂಡಳಿ,
ನಂ. 31-ಬಿ. 8ನೇ ಮುಖ್ಯರಸ್ತೆ,
4ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560 010.

ಬಿ. ಟಿ. ಲಲಿತಾನಾಯಕ್
ಕನ್ನಡ ಮತ್ತು ಸಂಸ್ಕೃತಿ,
ಮಹಿಳಾ ಮತ್ತು ಮಕ್ಕಳ ಕಲ್ಯಾಣ
ರಾಜ್ಯ ಸಚಿವರು

ದೂರವಾಣಿ : ಕಛೇರಿ : 2253650
ನಿವಾಸ : 3334015

ವಿಧಾನ ಸೌಧ, ಬೆಂಗಳೂರು–560 001

ದಿನಾಂಕ.........................

ಮಾನ್ಯರೇ,

ಡಾ॥ ಸಿದ್ಧಯ್ಯ ಪುರಾಣಿಕರವರು ಕನ್ನಡ ನಾಡಿನ ಖ್ಯಾತ ಸಾಹಿತಿಯೊಬ್ಬರು ಕಾವ್ಯಾನಂದ ಎಂಬ ಕಾವ್ಯನಾಮದಲ್ಲಿ ಅನೇಕ ಕವನಗಳನ್ನು ರಚಿಸಿರುವರು. ಅವರ ವಚನೋಧ್ಯಾನ ಕೃತಿ ಆಧುನಿಕ ವಚನ ರಚನೆಯಲ್ಲಿ ವಿಶೇಷ ಸ್ಥಾನವನ್ನು ಗಳಿಸಿದೆ. ಕನ್ನಡ ನಾಡು ನುಡಿಯ ಬಗ್ಗೆ ಅವರ ಕಳಕಳಿ ಅನನ್ಯವಾದುದು ಕನ್ನಡಕ್ಕಾಗಿ ಅನೇಕ ಹೋರಾಟಗಳನ್ನು ಕೂಡ ನಡೆಸಿದ್ದಾರೆ. ಅವರ ಜ್ಞಾಪಕಾರ್ಥ ತರುತ್ತಿರುವ ಜ್ಞಾನ ಸುಧಾ ತ್ರೈಮಾಸಿಕ ಪತ್ರಿಕೆ ಅವರ ಆದರ್ಶಗಳನ್ನು ಕನ್ನಡದ ಜನತೆಗೆ ಮುಟ್ಟುವಂತಾಗಲೆಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
(ಬಿ. ಟಿ. ಲಲಿತಾನಾಯಕ್)

ಗೆ,
ಶ್ರೀ ಡಿ. ಮಾಧವಮೂರ್ತಿ
ಅಧ್ಯಕ್ಷರು, ಸಂಪಾದಕ ಮಂಡಳಿ,
ಜ್ಞಾನಜ್ಯೋತಿ ಕಲಾಮಂದಿರ (ರಿ.)
31–ಬಿ. 4ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು–560 050.

---

## Dr. M. C. Modi Touring Free Eye Hospital

M. P. Layout
Bangalore–86
(KARNATAKA) INDIA
Phone : 3322233
3325622

Camp
Date

ಸಂಪಾದಕ ಮಂಡಲಿ
ಪ್ರಕಾಶಕರು "ಜ್ಞಾನ ಸುಧಾ"
ರಾಜಾಜಿನಗರ, ಬೆಂಗಳೂರು–10

ಶ್ರೀಯುತರೇ,

ಸಿದ್ಧಯ್ಯ ಪುರಾಣಿಕರ ಬಗ್ಗೆ ಹೇಳುವುದಾದರೆ, ಪೂರ್ಣ ವಿದ್ಯಾವಂತರು ಐ.ಎ.ಎಸ್. ಪದವಿ ಕೇವಲ ಪರೀಕ್ಷೆಗಾಗಿ, ಅವರ ಆಳವಾದ ಪರಿಶ್ರಮ, ಅಕ್ಷರಗಳು, ಭಾಷಾ, ಆನಂದ, ಕಾವ್ಯವೇ ಅವರ ಜೀವನದ ಉಸಿರು, ಬಹುಶಃ ಡಾ॥ ಡಿ. ವಿ. ಗುಂಡಪ್ಪನವರ ನಂತರ (ಮಂಕುತಿಮ್ಮನ ಕಗ್ಗದ) ವಚನ ಸಾಹಿತ್ಯದ ದಾರಿಯಲ್ಲಿ ಶ್ರೀ ಪುರಾಣಿಕರ ಕೃತಿ ನಿಲ್ಲುತ್ತದೆ. ಕೆಲಸ ಕಾರ್ಯದಲ್ಲಿ ದಕ್ಷತೆ, ಆಸಕ್ತಿ, ಶ್ರದ್ಧೆ, ಅಪಾರ, ಆದರೆ ಸದಾ ಅವರಿಗೆ ಗಡಿಯಾರದ ಮೇಲೆಯೇ ಎಡಗಣ್ಣು, ಆ ದಿನದ ಕೆಲಸ ಮುಗಿಸುವ ಹೊಣೆಗಾರಿಕೆ, ಜನಸಾಮಾನ್ಯರಲ್ಲಿ ಸ್ಪಂದನೆ, ಆತ್ಮೀಯತೆ, ಇದು ನಾವಿಬ್ಬರೂ ಕಲೆತಾಗ ವಿನಿಮಯದ ವಿಷಯ, ಸದಾ ಅವರ ನಡೆ, ನುಡಿ, ನೆನಪಿನ ಅಂಗಳದಲ್ಲಿ ಗುರ್‌ಗುಟ್ಟುತ್ತದೆ.

ಇತಿ ನಿಮ್ಮವನಾದ
ಡಾ॥ ಎಂ. ಸಿ. ಮೋದಿ ಅವರ ಪರವಾಗಿ

" ಕಾಯಕವೇ ಕೈಲಾಸ "


## ಡಾ|| ಶ್ರೀ ಶ್ರೀ ಶಿವಕುಮಾರಸ್ವಾಮಿಗಳು

ದೂರವಾಣಿ : 3409
3411

ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ-572104

ಕರ್ನಾಟಕ ರಾಜ್ಯ


ದಿನಾಂಕ

ಕ್ರ. ಸಂಖ್ಯೆ

### —: ಸಂದೇಶ :—

ಡಾ|| ಸಿದ್ಧಯ್ಯ ಪುರಾಣಿಕರು ಕನ್ನಡ ಸಾಹಿತ್ಯವನ್ನು ಆಧರಿಸಿದ ವಿನಮ್ರ ವಿದ್ವಾಂಸರು ಶ್ರೇಷ್ಠ ರುಚಿಯ ಕೃತಿಗಳನ್ನು ರಚಿಸಿ ಕನ್ನಡಿಗರ ಪ್ರೀತಿ ವಿಶ್ವಾಸಗಳನ್ನು ಗಳಿಸಿದವರು. ಉನ್ನತ ದರ್ಜೆಯ ಅಧಿಕಾರ ಸ್ಥಾನಗಳಲ್ಲಿದ್ದು ನಿಸ್ಪೃಹ ಪ್ರಾಮಾಣಿಕ ಸೇವೆ ಸಲ್ಲಿಸಿದ ಯಶಸ್ಸು ಅವರದ್ದು. ದಕ್ಷತೆ, ಕಾರ್ಯ ಕ್ಷಮತೆ, ವಿನಯ ಸೌಜನ್ಯಗಳು ಅಧಿಕಾರ ಸ್ಥಾನದಲ್ಲಿರುವವರಿಗೆ ಬೇಕಾಗುವ ಸದ್ಗುಣಗಳೆಂಬುದನ್ನು ತೋರಿಸಿ ಕೊಟ್ಟವರು.

"ಕಾವ್ಯಾನಂದ" ಶ್ರೀ ಪುರಾಣಿಕರ ಕಾವ್ಯನಾಮ "ಶರಣ ಚರಿತಾಮೃತ" ಪುರಾಣಿಕರು ಜನ ಸಾಮಾನ್ಯರಿಗೆ ನೀಡಿದ ಮಂಗಳ ಗ್ರಂಥ. "ವಚನೋದ್ಯಾನ" "ವಚನ ನಂದನ" ಪ್ರಶಸ್ತಿ ಪುರಸ್ಕೃತ ಕೃತಿಗಳು. ವಚನ ಸಾಹಿತ್ಯ ಪರಂಪರೆಯಲ್ಲಿ ಅರಳಿದ ಪುಷ್ಪಗಳು. ಬಸವಣ್ಣನವರನ್ನು ಕುರಿತು ಬರೆದ ಅವರ ವಿಮರ್ಶಾ ಗ್ರಂಥ ಹೊಸ ವಿಚಾರಧಾರೆಯ ಕೃತಿ. ಗುರು — ಲಿಂಗ — ಜಂಗಮ ಪ್ರೇಮಿಗಳಾದ ಪುರಾಣಿಕರು "ಬಸವಾಯತ್ತ"ದೆಂದು ತಮ್ಮನ್ನು ಗುರುತಿಸಿಕೊಳ್ಳುವಲ್ಲಿ ಸಂತೋಷಿಸುತ್ತಿದ್ದರು. ಅಸ್ಖಲಿತ ವಾಗ್ಮಿಗಳು, ಕಿರಿಯರನ್ನು ಬೆನ್ನು ತಟ್ಟಿ ಉತ್ಸಾಹ ತುಂಬುತ್ತಿದ್ದ ವಾತ್ಸಲ್ಯಮಯಿ.

ಶ್ರೀ ಮಠದ ಹೆಮ್ಮೆಯ ಪ್ರಕಟಣೆಯಾದ "ಸಿದ್ಧಗಂಗಾ ಶ್ರೀ" ಅಭಿನಂದನಾ ಬೃಹತ್ ಗ್ರಂಥದ ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದುದನ್ನು ಸ್ಮರಿಸುತ್ತೇವೆ.

ಜ್ಞಾನ ಜ್ಯೋತಿ ಕಲಾ ಮಂದಿರದವರು "ಜ್ಞಾನ ಸುಧಾ" ತ್ರೈಮಾಸಿಕದ ವಿಶೇಷ ಸಂಚಿಕೆಯ ಪ್ರಕಟಣೆಯ ಯೋಜನೆ ಶ್ಲಾಘನೀಯ. ಉದ್ದೇಶಿತ ಸ್ಮಾರಕ ಸಂಚಿಕೆ ಸರ್ವಾಂಗ ಸುಂದರವಾಗಿ ಪ್ರಕಟಣೆಯಾಗಲೆಂದು ಹಾರೈಸುತ್ತೇವೆ.

ಶ್ರೀ ಶಿವಕುಮಾರ ಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠ

ಎಲ್. ಎಸ್. ಶೇಷಗಿರಿರಾವ್
ಮಾಜಿ ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಕರ್ನಾಟಕ ಸರಕಾರ

ದೂರವಾಣಿ : ಕಛೇರಿ ; 6603812
ನಿವಾಸ ; 6632373
ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು–560018.

ದಿನಾಂಕ 28–2–1995

ಕಪುಪ್ರಾ / ಅಧ್ಯಪ / 7 / 94–95

ಶ್ರೀ ಡಿ. ಮಾಧವಮೂರ್ತಿ
ಅಧ್ಯಕ್ಷರು, ಜ್ಞಾನಸುಧಾ ಸಂಪಾದಕ ಮಂಡಲಿ
ಜ್ಞಾನಜ್ಯೋತಿ ಕಲಾ ಮಂದಿರ
31–ಬಿ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10.

ಮಾನ್ಯರೇ,

ನಮಸ್ಕಾರಗಳು,

ಜ್ಞಾನಸುಧಾ ಪತ್ರಿಕೆಯು ಡಾ॥ ಸಿದ್ಧಯ್ಯ ಪುರಾಣಿಕರ ನೆನಪಿಗೆ ಮುಡಿಪಾದ ಸಂಚಿಕೆಯನ್ನು ಹೊರತರಲು ತೀರ್ಮಾನಿಸಿರುವ ಸಂಗತಿ ಅಭಿನಂದನೀಯವಾದುದು. ಡಾ॥ ಸಿದ್ಧಯ್ಯ ಪುರಾಣಿಕರು ನಮ್ಮ ಸಮಕಾಲೀನ ಶ್ರೇಷ್ಠ ಸೃಜನಶೀಲ ಸಾಹಿತಿಗಳಲ್ಲಿ ಒಬ್ಬರು. ನಿಷ್ಠ ಕನ್ನಡ ಸೇವಕರಲ್ಲಿ ಒಬ್ಬರು. ಮತ್ತು ಬಹು ಸೌಜನ್ಯದ ವಿದ್ವಾಂಸರು. ಡಾ॥ ಸಿದ್ಧಯ್ಯ ಪುರಾಣಿಕರನ್ನು ಹತ್ತಿರ ಹತ್ತಿರ ಅರ್ಧಶತಮಾನ ಕಾಲ ಕಂಡಿದ್ದೆ, ಮೊದಲಿನಿಂದ ನನ್ನ ಮನಸ್ಸನ್ನು ಅವರ ಸೌಜನ್ಯ. ಉನ್ನತ ಅಧಿಕಾರದಲ್ಲಿದ್ದರೂ ಅವರು ಸೌಜನ್ಯದ ಮೂರ್ತಿಯಾಗಿದ್ದರು. ಹಾಗೆಂದು ಸ್ವಂತ ಅಭಿಪ್ರಾಯವನ್ನು ದಿಟ್ಟವಾಗಿ ಪ್ರತಿಪಾದಿಸಲು ಹಿಂದೆಗೆಯುತ್ತಿದ್ದರು ಎಂದಲ್ಲ. ಅವರ ಕೋಪ ಸಾತ್ವಿಕ ಕೋಪ. ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವನ್ನು ದಿಟ್ಟವಾಗಿ ಪ್ರತಿಭಟಿಸಿ ಹೋರಾಡಿದವರಲ್ಲಿ ಒಬ್ಬರು. ಅವರ ಇಳಿವಯಸ್ಸಿನಲ್ಲಿ ಅವರ ಶ್ರೀಮತಿಯವರ ಮತ್ತು ಅವರ ಆರೋಗ್ಯ ಕುಂದಿದ್ದರೂ ಕಡೆಯ ಉಸಿರಿನ ತನಕ ಕನ್ನಡ ಪರ ಕೆಲಸ ಕಾರ್ಯಗಳಲ್ಲಿ ಮತ್ತು ಹೋರಾಟಗಳಲ್ಲಿ ತೊಡಗಿಸಿಕೊಂಡರು ಡಾ॥ ಸಿದ್ಧಯ್ಯ ಪುರಾಣಿಕರು. ಗೋಕಾಕ್ ವರದಿಯ ಅನುಷ್ಠಾನಕ್ಕಾಗಿ ನಡೆದ ಹೋರಾಟ, ಕಾವೇರಿಯ ನೀರಿನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ನ್ಯಾಯ ಸಲ್ಲಬೇಕೆಂದು ನಡೆದ ಹೋರಾಟ ಇಂತಹ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಅವರು.

"ಕಾವ್ಯಾನಂದ" ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಸುಪರಿಚಿತರಾದ ಡಾ॥ ಪುರಾಣಿಕರು, ಮನಸ್ಸನ್ನು ಮುಟ್ಟುವ ಹೃದಯವನ್ನು ತಟ್ಟುವ ಕವನಗಳನ್ನು ಬರೆದಿದ್ದಾರೆ. ಕಲಾತ್ಮಕ ಸಂಯಮಕ್ಕೆ ಒಳಗಾದ ಭಾವದೊಡನೆ ಚಿಂತನೆಯನ್ನು ಬೆರೆಸಿದ ಕವಿಗಳು ಅವರು. ಈ ಯುಗದಲ್ಲಿ ವಚನ ಮಾಧ್ಯಮವನ್ನು ಸಮರ್ಥವಾಗಿ ಬೆಳೆಸಿಕೊಂಡವರು ಪುರಾಣಿಕರು. ಕಾವ್ಯದ ಮನೋಧರ್ಮವನ್ನು ಪ್ರಕಟಿಸುವ ಕಾವ್ಯ ರೂಪ ವಚನದ ಸತ್ವವನ್ನೂ ಸ್ವರೂಪವನ್ನೂ ಅವರು ಅರ್ಥಮಾಡಿಕೊಂಡಿದ್ದಾರೆ. ಒಳ್ಳೆಯ ನಾಟಕಗಳನ್ನು ಬರೆದಿದ್ದಾರೆ. ದೊಡ್ಡವರ ಮನಸ್ಸಿಗೆ ಸಂತೋಷವನ್ನು ಕೊಟ್ಟು ಚಿಂತನೆಯನ್ನು ಪ್ರಚೋದಿಸುವ ಸಾಹಿತ್ಯವನ್ನು ಬರೆದ ಪುರಾಣಿಕರೇ ಮಕ್ಕಳಿಗೆ ಖುಷಿ ಕೊಡುವ ಕವನಗಳನ್ನೂ ಬರೆದಿದ್ದಾರೆ. ಅವರ ಸಾಹಿತ್ಯ ಸಾಧನೆಯ ವಿಸ್ತಾರ, ವೈವಿಧ್ಯ ಮತ್ತು ಸತ್ವ ಬೆರಗುಗೊಳಿಸುವಂತಹದ್ದು.

ಡಾ॥ ಸಿದ್ಧಯ್ಯ ಪುರಾಣಿಕರು ಕನ್ನಡ ಜನತೆಯ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡ ನುಡಿ ಸೇವಕರು. ಕನ್ನಡ ಜನ ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ತಮ್ಮ ಪ್ರೀತಿ ಗೌರವಗಳನ್ನು ತೋರಿಸಿದರು. ಈ ಹಿರಿಯರ ಸಾಹಿತ್ಯ ಇಂದೂ ನಮಗೆ ಸಂತೋಷವನ್ನು ಕೊಡುವಂತೆ ಅವರ ಕನ್ನಡ ನಿಷ್ಠೆ ನಮಗೆ ಸ್ಫೂರ್ತಿಯಾಗಿರಲಿ ಎಂದು ಹಾರೈಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
ಎಲ್. ಎಸ್. ಶೇಷಗಿರಿರಾವ್
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

**ಎಸ್. ನಿಜಲಿಂಗಪ್ಪ**

ದೂರವಾಣಿ : 08194/2550
47, "ವಿನಯ"
ವಿ. ಪಿ. ಬಡಾವಣೆ
ಚಿತ್ರದುರ್ಗ-577501
15-7-1995

## —: ಸಂದೇಶ :—

ಶ್ರೀ ಮಾಧವಮೂರ್ತಿಯವರಿಗೆ,

ನಮಸ್ಕಾರಗಳು.

ತಮ್ಮ ಪರವಾಗಿ ಶ್ರೀ ವೆಂಕಟೇಶ್ ಅವರು ತಾ|| 13-7-95 ರಂದು ಬರೆದಿರುವ ಕಾಗದ ತಲುಪಿದೆ.

ತಮ್ಮ ಜ್ಞಾನಜ್ಯೋತಿ ಕಲಾಮಂದಿರವು ಶ್ರೀ ಸಿದ್ದಯ್ಯ ಪುರಾಣಿಕ್ (ಕಾವ್ಯಾನಂದ) ಅವರ ಸ್ಮಾರಕಾರ್ಥವಾಗಿ ತಮ್ಮ ಜ್ಞಾನಸುಧಾ ತ್ರೈಮಾಸಿಕ ಪತ್ರಿಕೆಯು ವಿಶೇಷ ಸಂಚಿಕೆಯನ್ನು ಹೊರತರುವುದಾಗಿ ತಿಳಿದು ಅತ್ಯಂತ ಸಂತೋಷವಾಯಿತು. ಈ ಪ್ರಯತ್ನಕ್ಕಾಗಿ ತಮ್ಮನ್ನು ಮೆಚ್ಚುತ್ತೇನೆ, ಅಭಿನಂದಿಸುತ್ತೇನೆ.

ದಿವಂಗತ ಕಾವ್ಯಾನಂದರು ಕರ್ನಾಟಕದಲ್ಲಿ ತಮ್ಮ ನಾನಾ ಮುಖದ ಸಾಹಿತ್ಯದಿಂದಾಗಿ ಮನೆ ಮನೆಯ ಮಾತಾಗಿದ್ದಾರೆ. ಕನ್ನಡಿಗರು ಎಲ್ಲಿದ್ದರೂ ಅದನ್ನು ಮೆಚ್ಚುತ್ತಾರೆ, ಹೊಗಳುತ್ತಾರೆ, ಗೌರವಿಸುತ್ತಾರೆ. ಅವರು ಇಂಡಿಯನ್ ಅಡ್ಮಿನಿಸ್ಟ್ರೇಟ್ ಸರ್ವಿಸ್‌ನ ಅಧಿಕಾರಿಯಾಗಿ, ನಾನು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಕೆಲಸ ಮಾಡಿರುತ್ತಾರೆ. ಅವರ ದಕ್ಷತೆ, ನಿಷ್ಠೆ, ಪ್ರಾಮಾಣಿಕತೆ, ಘನತೆಗಳು ನನ್ನ ಪೂರ್ಣ ಮೆಚ್ಚಿಗೆಗೆ ಪಾತ್ರವಾಗಿದ್ದವು. ಅವರ ಪ್ರತಿಭೆ, ಸಾಹಿತ್ಯದ ನಾನಾ ಮುಖದ ಮೇಲ್ಮೆ, ಅವರನ್ನು ಕನ್ನಡ ಭಾಷೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ನಿಜವಾಗಿ ಗೌರವಕ್ಕೆ ಪಾತ್ರರಾಗಿರುವಂತೆ ಮಾಡಿವೆ.

ನಾನು ಅವರ ರಚನೆಗಳನ್ನೂ, ಸಾಹಿತ್ಯವನ್ನೂ, ಸಾಹಿತ್ಯದ ಬಗ್ಗೆ ಅವರು ಬರೆಯುತ್ತಿದ್ದ ಲೇಖನವನ್ನು-ಕೆಲವನ್ನು ಓದಿದ್ದೇನೆ, ಮೆಚ್ಚಿದ್ದೇನೆ. ನೀವು ಅವರ ಸಾಹಿತ್ಯ ಸೇವೆಯನ್ನು, ಅವರ ಸಾಹಿತ್ಯದ ಔನ್ನತ್ಯವನ್ನು ಗೌರವಿಸಿ, ಅದರ ಪರಿಣಾಮವಾಗಿ, ಅವರ ಸ್ಮಾರಕ ಸಂಚಿಕೆಯನ್ನು, ಹೊರತರುತ್ತಿರುವ ಯೋಗ್ಯ ಪ್ರಯತ್ನವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ತಮ್ಮ ವಿಶ್ವಾಸಿ,
**ನಿಜಲಿಂಗಪ್ಪ**

ಶ್ರೀ ಮಾಧವಮೂರ್ತಿಗಳು,
ಅಧ್ಯಕ್ಷರು, ಸಂಪಾದಕ ಮಂಡಳಿ,
ಜ್ಞಾನಜ್ಯೋತಿ ಕಲಾಮಂದಿರ,
ರಾಜಾಜಿನಗರ,
ಬೆಂಗಳೂರು.

॥ ಆದಿಜಗದ್ಗುರು ಶ್ರೀ ಶಿವರಾತ್ರಿಸ್ವಾಮಿನೇ ನಮಃ ॥

ದೂರವಾಣಿ ಆಫೀಸ್ : 22931
ಮಠ : 20092

# ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಎಂ.ಎ.,

ಶ್ರೀ ವೀರಸಿಂಹಾಸನ ಮಠ, ಸುತ್ತೂರು ಸಂಸ್ಥಾನ
ನಂಜನಗೂಡು ತಾಲ್ಲೂಕ್

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಠ,
ಮೈಸೂರು-570 004

ಕ್ರಮ ಸಂಖ್ಯೆ :

ತಾ॥..............................

## ಶುಭ ಸಂದೇಶ

ಕಾವ್ಯಾನಂದ ನಾಮಾಂಕಿತರಾದ ಡಾ॥ ಸಿದ್ಧಯ್ಯ ಪುರಾಣಿಕರ ಹೆಸರು ಕನ್ನಡಿಗರಿಗೆ ಚಿರಪರಿಚಿತವಾದುದು. ಅವರು ಕನ್ನಡ ನಾಡು-ನುಡಿಗೆ ಅಪಾರವಾದ ಕೊಡುಗೆ ನೀಡುವುದು ಮನನೀಯ. ಸನ್ಮಾನ್ಯರ ಸಾಹಿತ್ಯ ಕೃತಿ, ದರ್ಶನಗಳ ಮೂಲಕ ಅವರ ಸ್ಮರಣೆ ಕೈಗೊಂಡಿರುವ "ಜ್ಞಾನಸುಧಾ" ಸಂಪಾದಕ ಮಂಡಲಿಯ ನಿರ್ಧಾರ ಪ್ರಶಂಸನೀಯ. ಪ್ರಸ್ತುತ ಸಂಚಿಕೆಯು ಕನ್ನಡ ನಾಡಿನ ಸುಪುತ್ರರೊಬ್ಬರನ್ನು ಸ್ಮರಿಸಿಕೊಳ್ಳುತ್ತಿರುವ ಕಾರ್ಯ ಹಾಗೂ ಅನೇಕ ಸಾಹಿತಿಗಳು ಕಲಾವಿದರು ತಮ್ಮ ಲೇಖನಗಳ ಮೂಲಕ ಗೌರವ ಸೂಚಿಸುತ್ತಿರುವ ಈ ಸಂದರ್ಭ ಶ್ಲಾಘನೀಯವಾದುದು.

"ಜ್ಞಾನಸುಧಾ"ದ ಈ ಯತ್ನ ಯಶಸ್ವಿಯಾಗಿ ಜರುಗಿ, ಹೆಸರಾಂತ ಕಾವ್ಯಾನಂದರ ಪರಿಚಯ ಪರಿಪೂರ್ಣವಾಗಿ ಕನ್ನಡ ಜನತೆಗೆ ಲಭ್ಯವಾಗಲೆಂದು ಹಾಗೂ ಈ ನಿಟ್ಟಿನಲ್ಲಿ ಶ್ರಮಿಸಿರುವ 'ಜ್ಞಾನಸುಧಾ' ಯತ್ನವನ್ನು ಕನ್ನಡ ಜನತೆ ಪ್ರೋತ್ಸಾಹಿಸಲೆಂದು ಹಾರೈಸುತ್ತೇವೆ.

ಇತ್ಯಾಶಿಷ
ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಗೆ :
ಅಧ್ಯಕ್ಷರು
ಜ್ಞಾನಸುಧಾ ಸಂಪಾದಕ ಮಂಡಲಿ
ಜ್ಞಾನಜ್ಯೋತಿ ಕಲಾ ಮಂದಿರ (ರಿ.)
31-ಬಿ, 4ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560 050.

ಅನ್ನದಾನಯ್ಯ ಪುರಾಣಿಕ, "ಸಾಹಿತ್ಯ ರತ್ನ"
ಬಿ.ಕಾಂ.,ಎಲ್.ಎಲ್.ಬಿ.,
ಅಡ್ವೋಕೇಟ್, ಕರ್ನಾಟಕ ಹೈಕೋರ್ಟ್,
ವಚನಕಾರ, ಸ್ವಾತಂತ್ರ್ಯ ಹೋರಾಟಗಾರ,
ಮಾಜಿ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು,
ಟ್ರಸ್ಟೀ ಬಸವ ಸಮಿತಿ, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ರಿ.

ದೂರವಾಣಿ : 641260
"ಶ್ರೀಮೃತ್ಯುಂಜಯ ಕೃಪಾ"5
19, 9-ಎ ಮೆಯಿನ್, 38ನೇ ಕ್ರಾಸ್,
5ನೇ ಬ್ಲಾಕ್, ಜಯನಗರ,
ಬೆಂಗಳೂರು
ದಿನಾಂಕ : 17-7-1995

## ಶುಭ ಸಂದೇಶ

ಮಾನ್ಯರೆ,

ನಿಮ್ಮ ದಿನಾಂಕ : 15-7-1995ರ ಪತ್ರ

ಕನ್ನಡ ಕಂದ 'ಕಾವ್ಯಾನಂದ'ರ ನೆನಪಿಗಾಗಿ, 'ಜ್ಞಾನಸುಧಾ' ವಿಶೇಷ ಸಂಚಿಕೆಯನ್ನು ನೀವು ಪ್ರಕಟಿಸುತ್ತಲಿರುವುದು ತುಂಬ ಸ್ತುತ್ಯಾರ್ಹವಾದುದು.

ವಿದ್ಯೆ, ವಿನಯ-ವಿವೇಕಗಳ ಸಂಗಮವೆಂತಿದ್ದ ಲಿಂ॥ ಡಾಕ್ಟರ್ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ)ರು ನನಗೆ ಕೇವಲ ಅಣ್ಣಂದಿರರಾಗಿರಲಿಲ್ಲ; ಎನಗೆ ಗುರುವಾಗಿದ್ದರು; ಸನ್ಮಾರ್ಗದರ್ಶಿಗಳಾಗಿದ್ದರು. ಬಸವಾದಿ ಪ್ರಮಥರು ಅರಿತು ಆಚರಿಸಿದ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದ ಶ್ರೀ ಪುರಾಣಿಕರ ಬರಹ, ಭಾಷಣಗಳಲ್ಲಿ, ನಡೆ ನುಡಿಗಳಲ್ಲಿ, ಶರಣ ಸಂಸ್ಕೃತಿ ಸೂಸುತ್ತಲಿದ್ದಿತು. "ಸಂಸ್ಕೃತಿಗೆ ಮತ್ತೊಂದು ಹೆಸರು ಪುರಾಣಿಕರ ಮನೆತನ" ಎಂಬುದಕ್ಕೆ ಇವರು ನಿದರ್ಶನವಾಗಿದ್ದರು. ನಾವು ನಮ್ಮ ಪೂಜ್ಯ ಮಾತಾಪಿತರಿಂದ ಪಡೆದ ಶೀಲ ಸಂಪತ್ತನ್ನು, ಹೃದಯ ಶ್ರೀಮಂತಿಕೆಯನ್ನು ಹಾಗೂ ಮಾನವೀಯ ಮೌಲ್ಯಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಆಚರಿಸುವಂತೆ ನನಗೆ ಪ್ರೇರಣೆ ನೀಡಿದರು ಪೂಜ್ಯ ಅಣ್ಣಂದಿರು ಪ್ರಮುಖರು. ನಮ್ಮದು ಶರಣಪಥ; ಸಮಷ್ಟಿ ಹಿತ !

"ಕಾವ್ಯಾನಂದ"ರು ಚಿರಂಜೀವಿ "ಕಾವ್ಯಾನಂದ"ರು ವಿಶ್ವಪ್ರೇಮಿ, ಅವರಿಂದ ಸೃಷ್ಟಿತವಾಗಿರುವ ಸಾಹಿತ್ಯ ಶಿಸು ಸಾಹಿತ್ಯ ! ಅದಕ್ಕೆ ಅಳಿವಿಲ್ಲ.

ಡಾ॥ ಸಿದ್ಧಯ್ಯ ಪುರಾಣಿಕರು ಸಮರ್ಥ ಆಡಳಿತಗಾರರು ಆಗಿದ್ದಂತೆ ಸಿದ್ಧ ಸಂಘಟಗಾರರೂ ಆಗಿದ್ದರು. ಅನೇಕ ಸಂಘ ಸಂಸ್ಥೆಗಳಿಗೆ ಅವರು ಜೀವನಾಡಿಯಾಗಿದ್ದರು. ಕೇಂದ್ರ ಬಸವ ಸಮಿತಿಯ ಹುಟ್ಟು ಬೆಳವಣಿಗೆಗೆ ಶ್ರೀ ಪುರಾಣಿಕರು ನೀಡಿದ ಅಮೂಲ್ಯ ಕಾಣಿಕೆ ಚಿರಸ್ಮರಣೀಯವಾದುದು. "ನಾವಿಬ್ಬರು ಅಣ್ಣತಮ್ಮಂದಿರ ಅನುಪಮ ತ್ಯಾಗ, ಸತತ ಶ್ರಮ ಹಾಗೂ ನಿರಾಪೇಕ್ಷ ಸೇವೆಯ ಸಂಕೇತವಾಗಿ ಇಂದು ಕಂಗೊಳಿಸುತ್ತಲಿದೆ ಬಸವ ಸಮಿತಿ"ಎಂದು ಬಸವ ಭಕ್ತರು ಹೇಳುತ್ತಾರೆ. ಕನ್ನಡವು ಶ್ರೀ ಪುರಾಣಿಕರ ನಿತ್ಯ ಪಂಚಾಕ್ಷರಿಯಾಗಿತ್ತು; ಮಾನವತೆ ಅವರ ಧರ್ಮವಾಗಿತ್ತು. ಇಂಥ ಅಣ್ಣಂದಿರನ್ನು ಕಳೆದುಕೊಂಡು ನಾನು ಅನಾಥನಾಗಿರುವೆ. ಅವರ ದಿವ್ಯ ಚೇತನವು ನನಗಿಂದು ದಾರಿ ದೀಪ !

'ಜ್ಞಾನಸುಧಾ' ವಿಶೇಷ ಸಂಚಿಕೆಯು ನಾಡಿನ ಹಲವಾರು ಹಿರಿಯ ಚೇತನರ ನುಡಿನಮನಗಳನ್ನು ಒಳಗೊಂಡು ಸರ್ವಾಂಗ ಸುಂದರವಾಗಿ ಬೇಗ ಹೊರಬೀಳಲಿ, ಎಂದು ಹೃದಯಾರೆ ಹಾರೈಸುತ್ತೇನೆ.

ಇತಿ, ವಂದನೆಗಳೊಂದಿಗೆ,
ತಮ್ಮವ,
**ಅನ್ನದಾನಯ್ಯ ಪುರಾಣಿಕ**
17-7-1995

ಗೆ,
ಮಾನ್ಯಶ್ರೀ ಡಿ. ಮಾಧವಮೂರ್ತಿಯವರು,
ಅಧ್ಯಕ್ಷರು, ಜ್ಞಾನಜ್ಯೋತಿ ಕಲಾಮಂದಿರ,
ಬೆಂಗಳೂರು_೫೦.

ವಿ. ಸೋಮಣ್ಣ
ಶಾಸಕರು
ಬಿನ್ನಿಪೇಟೆ ಕ್ಷೇತ್ರ

ತಾ॥ 18-07-95

# “ಸಂದೇಶ”

ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಕಣ್ಮಣಿ, ಕಾವ್ಯಾನಂದರೆಂದೇ ಪ್ರಸಿದ್ಧರಾಗಿರುವ ಡಾ॥ ಸಿದ್ಧಯ್ಯ ಪುರಾಣಿಕರ ಬಗ್ಗೆ ತಮ್ಮ “ಜ್ಞಾನಸುಧಾ” ಕನ್ನಡ ತ್ರೈಮಾಸಿಕ ಪತ್ರಿಕೆಯಲ್ಲಿ ‘ವಿಶೇಷ ಸಂಚಿಕೆ’ಯನ್ನು ಹೊರತರುತ್ತಿರುವುದು ಅಭಿನಂದನಾರ್ಹ. ಕನ್ನಡ ನಾಡು-ನುಡಿಯ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದ, ಶ್ರೀಯುತರಿಂದ ಕನ್ನಡ ಸಾರಸ್ವತ ಲೋಕವು ಬಹಳ ಮಟ್ಟಿಗೆ ಅಭಿವೃದ್ಧಿಯನ್ನು ಹೊಂದಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇಂತಹ ಮಹಾನೀಯರ ಬಗ್ಗೆ “ಸ್ಮರಣ ಸಂಚಿಕೆ”ಯನ್ನು ಹೊರತರುತ್ತಿರುವುದಕ್ಕೆ ತಮ್ಮ ಪತ್ರಿಕಾ ಬಳಗಕ್ಕೆ ನನ್ನ ತುಂಬು ಹೃದಯದ ಅಭಿನಂದನೆಗಳು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ವಿ. ಸೋಮಣ್ಣ

ಗೆ,
ಸಂಪಾದಕರು,
ಜ್ಞಾನಸುಧಾ ಕನ್ನಡ ತ್ರೈಮಾಸಿಕ ಪತ್ರಿಕೆ.
ರಾಜಾಜಿನಗರ, 4ನೇ ಬ್ಲಾಕ್,
ಬೆಂಗಳೂರು-560 010.

# ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.

ಅಂಚೆ ಪೆಟ್ಟಿಗೆ ಸಂಖ್ಯೆ 1836

ಸ್ಥಾಪನೆ : 1915 ದೂರವಾಣಿ : 602991

ಕ್ರಮಸಂಖ್ಯೆ : ಕಸಾಪ/ದಾಖಲಿ : 95-96/1640 ದಿನಾಂಕ : 11-8-1995

ಶ್ರೀ ಡಿ. ಮಾಧವಮೂರ್ತಿ
ಅಧ್ಯಕ್ಷರು
ಸಂಪಾದಕ ಮಂಡಳಿ
ಜ್ಞಾನ ಜ್ಯೋತಿ ಕಲಾ ಮಂದಿರ (ರಿ)
31-ಬಿ, 4ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560 010.

ಮಾನ್ಯರೆ,

ನಾಡಿನ ಹಿರಿಯ ಚೇತನ ಡಾ॥ ಸಿದ್ಧಯ್ಯ ಪುರಾಣಿಕರ ಸ್ಮರಣಾರ್ಥವಾಗಿ "ಜ್ಞಾನಸುಧಾ" ವಿಶೇಷ ಸಂಚಿಕೆಯನ್ನು ತಾವು ಹೊರತರುತ್ತಿರುವುದನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾರ್ದಿಕವಾಗಿ ಸ್ವಾಗತಿಸುತ್ತದೆ. ನಾಡು ನುಡಿಗಾಗಿ ದುಡಿದ ಹಿರಿಯರಿಗೆ ಇಂತಹ ಒಂದು ಗೌರವ ಕಾಣಿಕೆ ತುಂಬಾ ಶ್ಲಾಘನೀಯ. ತಾವು ನಿಜಕ್ಕೂ ಪ್ರಶಂಸಾರ್ಹರು. ಪತ್ರಿಕೆ ಸುಂದರವಾಗಿ ಪ್ರಕಟವಾಗಲೆಂದು ಪರಿಷತ್ತಿನ ಪರವಾಗಿ ಹಾರೈಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
(ಡಾ॥ ಸಾ. ಶಿ. ಮರುಳಯ್ಯ)
ಅಧ್ಯಕ್ಷ



50ನೇ ವರ್ಷದ ದಾಂಪತ್ಯದ ಅಭಿನಂದನಾ ಸಂದರ್ಭದಲ್ಲಿ
ಶ್ರೀ/ಶ್ರೀಮತಿ ಡಾ॥ ಸಿದ್ದಯ್ಯ ಪುರಾಣಿಕ್ ದಂಪತಿಗಳು




ಗುಲ್ಬರ್ಗದಲ್ಲಿ ಬೀಳ್ಕೊಡುಗೆ ಸಮಾರಂಭದಲ್ಲಿ ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ರಾಮಕೃಷ್ಣ ಹೆಗಡೆ,
ಶ್ರೀ ನಂದೀಶ್ವರ್‌ರವರೊಡನೆ ಡಾ॥ ಸಿದ್ದಯ್ಯಪುರಾಣಿಕ್




ಮೌಲಾನಾ ಅಬ್ದುಲ್ ಕಲಾಮ್ ಆಜಾದ್‌ರವರನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲ್‌ರವರು
ಸತ್ಕರಿಸುತ್ತಿದ್ದಾಗ ವಾರ್ತಾಧಿಕಾರಿ ಡಾ॥ ಸಿದ್ಧಯ್ಯಪುರಾಣಿಕರು






ಅಮೇರಿಕಾದಲ್ಲಿ 2ನೇ ಮಗಳು ಶಿವಗೀತಾ ಅಳಿಯ ಶ್ರೀ ಗಂಗಾಧರ್ ಪೂಜಾರಿ
ಮತ್ತು ಅವರ ಮಕ್ಕಳೊಡನೆ



ರಾಷ್ಟ್ರಕವಿ ಕುವೆಂಪುರವರೊಡನೆ ಡಾ॥ ಸಿದ್ಧಯ್ಯಪುರಾಣಿಕ್ ಹಾಗೂ ಹಾ. ಮಾ. ನಾಯಕ್



ಶ್ರೀಮತಿ ವಿಜಯಲಕ್ಷ್ಮೀ ನಂದೀಶ್ವರ್‌ರವರ ವಿವಾಹ ಸಂದರ್ಭದಲ್ಲಿ ರಾಜ್ಯಪಾಲ
ಶ್ರೀ ವಿ. ವಿ. ಗಿರಿಯವರ ಸಂದರ್ಶನ



1976ರಲ್ಲಿ ಡಾ॥ ಸಿದ್ಧಯ್ಯಪುರಾಣಿಕ್‌ರವರು ಕರ್ನಾಟಕ ವಿಶ್ವವಿದ್ಯಾಲಯದ
ಗೌರವ ಡಾಕ್ಟರೇಟ್‌ನ್ನು ಪಡೆಯುತ್ತಿರುವುದು



ರಾಜಾಜಿನಗರ ಶೈಕ್ಷಣಿಕ ಸಾಹಿತ್ಯ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಿದ್ದ
ಮಾಜಿ ಸಚಿವ ಶ್ರೀ ಪೆರಿಕಾಲ್ ಮಲ್ಲಪ್ಪ, ಶ್ರೀ ಎಸ್. ಮಂಚಯ್ಯ,
ಶ್ರೀ ಎಸ್. ಆರ್. ರ್ಬ್ಳೋಡೇಕರ, ಪ್ರೊ॥ ಜಿ. ಎಸ್. ಸಿದ್ದಲಿಂಗಯ್ಯ
ಅವರೊಡನೆ ಡಾ॥ ಸಿದ್ಧಯ್ಯ ಪುರಾಣಿಕರನ್ನು ಕಾಣಬಹುದು.



ಱಾಜಾಜಿನಗರ ಶೈಕ್ಷಣಿಕ ಸಾಹಿತ್ಯ ವಿಚಾರ ಸಂಕೀರ್ಣದಲ್ಲಿ ಕೊನೆಯ
ಸಮಾರಂಭದಲ್ಲಿ ಪ್ರೊ॥ ಜಿ. ಎಸ್. ಸಿದ್ದಲಿಂಗಯ್ಯನವರಿಗೆ
ಡಾ॥ ಸಿದ್ಧಯ್ಯ ಪುರಾಣಿಕರಿಂದ ಕೊಡುಗೆಯನ್ನು ನೀಡುತ್ತಿರುವುದು

# ಶ್ರದ್ಧಾಂಜಲಿ



ಜನನ :

7-8-1924

ನಿಧನ ;

22-9-1995

## ಶ್ರೀಮತಿ ಗಿರಿಜಾದೇವಿ ಪುರಾಣಿಕರವರು

ಡಾ॥ ಸಿದ್ಧಯ್ಯ ಪುರಾಣಿಕರವರ ಧರ್ಮಪತ್ನಿ ಶ್ರೀಮತಿ ಗಿರಿಜಾದೇವಿ
ಪುರಾಣಿಕರವರು ದಿನಾಂಕ 22-9-1995ರಂದು ಲಿಂಗೈಕ್ಯರಾದರು.
ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು
ಭಗವಂತನನ್ನು ಕೋರುತ್ತೇವೆ.

ಜ್ಞಾನಜ್ಯೋತಿ ಕಲಾ ಮಂದಿರ
ಮತ್ತು
ಜ್ಞಾನಸುಧಾ ಸಂಪಾದಕ ಮಂಡಲಿ

# ‘ಮಾನವತೆಯ ಮಕರಂದ-ಕಾವ್ಯಾನಂದ’

ಲೇಖಕರು : ಶ್ರೀಮತಿ ಚಂದ್ರಿಕಾ ಪುರಾಣಿಕ, ಬೆಂಗಳೂರು–41

‘ಕನ್ನಡದ ವಿಖ್ಯಾತ ಕವಿ, ಸಾಹಿತಿ, ವಿಮರ್ಶಕ, ದಾರ್ಶನಿಕ, ಉಜ್ವಲವಾಗ್ಮಿ, ದಕ್ಷ ಹಿರಿಯ ಸ್ನೇಹಪರ ಆಡಳಿತಾಧಿಕಾರಿ, ಕನ್ನಡದ ಕಟ್ಟಾಳು–ಎನ್ನಬಹುದಾದ ಅಪೂರ್ವ ವ್ಯಕ್ತಿತ್ವ ಕನ್ನಡದ ಕಂದ ಕಾವ್ಯಾನಂದ ಡಾ॥ ಸಿದ್ಧಯ್ಯ ಪುರಾಣಿಕರದು ಆಗಿತ್ತು.

ಇವೆಲ್ಲಕ್ಕಿಂತ ಮಿಗಿಲಾಗಿ ಇಂದು ನನಗೆ ಅವರು ಹಿರಿಯ ಆಶಾವಾದಿ ಚೇತನರಾಗಿ, ಮಾನವ ಪಾರಮ್ಯದ ಹರಿಕಾರರಾಗಿ ಕಂಡು ಬರುತ್ತಾರೆ.

ಪ್ರತಿಸಲದ ಅವರ ದಿವ್ಯಸ್ಮರಣೆಯು ನಮ್ಮಲ್ಲಿ ಅದ್ಭುತ ಶಕ್ತಿಯ, ಉತ್ಸಾಹಗಳ ಮಿಂಚಿನ ಸಂಚಾರವನ್ನುಂಟು ಮಾಡುತ್ತದೆ.

ಅವರು ನಮಗೆ ವಿನಯ, ಸೌಜನ್ಯ, ಪ್ರತಿಭೆ–ಸೃಜನಶೀಲತೆಗಳ ಸಿಂಧುವಾಗಿದ್ದರು. ಅಸೀಮ ಚೈತನ್ಯ ಧೈರ್ಯ, ಆತ್ಮಸ್ಥೈರ್ಯಗಳ ಮೇರುಗಿರಿ ಆಗಿದ್ದರು, ಮಿಗಿಲಾಗಿ ನನಗೆ ಅವರು ಅಭಿಮಾನ–ಅಕ್ಕರೆಗಳ, ಆತ್ಮೀಯ ದೊಡ್ಡಪ್ಪಾಜಿಯೂ ಆಗಿದ್ದರು ಎಂಬುದು ವಿಶೇಷ ಸಂಗತಿ. ಎಲ್ಲರ ಭಾವ–ಬುದ್ಧಿ–ಮನಗಳ ಪುಷ್ಟಿವರ್ಧನೆಗೆ ಒಳ್ಳೆಯ ಟಾನಿಕ್ ಆಗಿದ್ದರು ಕಾವ್ಯಾನಂದರು.

‘... ಏನಾದರೂ ಆಗು ಮೊದಲು ಮಾನವನಾಗು’ ಎಂಬುದು ಕಾವ್ಯಾನಂದರ ಜೀವನದ ಶ್ರೀಸೂತ್ರವಾಗಿತ್ತು !

ದೈವನಿಷ್ಠೆಯ ಜೊತೆಗೆ, ಶರಣ ಸಂಸ್ಕೃತಿಯನ್ನು ಅರಗಿಸಿಕೊಂಡ ಕೌಟುಂಬಿಕ ಪರಿಸರದ ಪ್ರಭಾವವನ್ನು, ತಮ್ಮ ಸತತ ಸಾಹಸ ಪ್ರಯತ್ನಗಳನ್ನು ಬೆಸೆದುಕೊಂಡು ಬೃಹದಾಕಾರವಾಗಿ ಬೆಳೆದ ಪರಿಪೂರ್ಣ ವ್ಯಕ್ತಿತ್ವ ಅವರದು. ಪ್ರತಿಭೆ, ದೈವಬಲ, ಅದೃಷ್ಟಗಳು ಬದುಕಿನಲ್ಲಿ ಅವರ ಸಂಗಾತಿಗಳಾಗಿದ್ದವು !

ಅವರ ಸದಾ ಸ್ಮಿತವದನ, ಆತ್ಮೀಯತೆ–ಅಕ್ಕರೆಯನ್ನು ಹೊರಸೂಸುವ ಹಿತಮಿತ ಮೃದುವಚನಗಳ ಮೋಹಕ ವ್ಯಕ್ತಿತ್ವವನ್ನು ನಾವು ಮರೆಯುವಂತಿಲ್ಲ. ಮಕ್ಕಳೊಂದಿಗೆ ಮಗುವಾಗಿ ಬೆರೆಯುತ್ತಿದ್ದರು. ಹದಿವಯಸ್ಕರಿಗೆ ಸನ್ಮಿತ್ರರಾಗಿದ್ದರು. ಹಿರಿಯರೊಂದಿಗೆ ಹಿರಿಯರಾಗುತ್ತಿದ್ದರು. ಒಟ್ಟಿನಲ್ಲಿ, ಎಲ್ಲರೊಳಗೆ ಒಂದಾಗಿ ಯಾರನ್ನೂ ವೈರಿ ಎನ್ನದ ಕಾವ್ಯಾನಂದರು ವಿಶ್ವ ಬಂಧುತ್ವದ ಪ್ರತಿರೂಪರಾಗಿದ್ದರು.

ಡಾ॥ ಸಿದ್ಧಯ್ಯ ಪುರಾಣಿಕರದು ಮೂಲತಃ ಕವಿ ಮನಸು. ಪರರ ದುಃಖಕ್ಕೆ ಅವರು ಮಿಡುಕಿದರು. ಅವರ ಸುಖವನ್ನು ಕಂಡು ಆನಂದಿಸಿದರು. ‘ಪರರ ಏಳ್ಗೆಗೆ ಇನಿಸು ನೆರವಾಗುವುದನು’ ನಾವು ಅವರಿಂದ ಕಲಿಯಬೇಕಾಗಿದೆ. ಈ ಬಾಳಬುತ್ತಿಯಲ್ಲಿ ನಮ್ಮ ಜೊತೆ ಅವರು ಉಂಡಿದ್ದು ಕೇವಲ ಸಿಹಿಯ ಪಾಲು ಮಾತ್ರ ! ನೋವು, ವಿಷಾದ, ನಿರಾಸೆ, ದುಮ್ಮಾನಗಳನ್ನೆಲ್ಲಾ ತಾವು ಒಬ್ಬರೇ ಕೊನೆವರೆಗೂ ಮೌನವಾಗಿ ಸೇವಿಸಿ ಜೀರ್ಣಿಸಿಕೊಂಡರು. ಲೌಕಿಕದಲ್ಲಿ ಲಾಭ–ಹಾನಿ ಏನೇ ಬಂದರೂ ಸ್ಥಿತಪ್ರಜ್ಞರಾಗಿ ಅನುಭವಿಸಿದರು. ನಮ್ಮ ಏನೇ ಸಮಸ್ಯೆಗೂ ಅವರ ಲೋಕಾನುಭವದ ಅಕ್ಷಯ ನಿಧಿಯಲ್ಲಿ ‘ಪರಿಹಾರ ಸದಾ ಸಿಗುತ್ತಿತ್ತು.

ಅನ್ಯಾಯ, ಅನೀತಿ, ಶೋಷಣೆ, ದೌಜನ್ಯಗಳ ವಿರುದ್ಧ ಸಿಡಿದೇಳುವುದು ಅವರ ಸ್ವಭಾವ ಆಗಿತ್ತು. ತಮ್ಮ ವೃತ್ತಿ–ಪ್ರವೃತ್ತಿಗಳಲ್ಲಿ ‘ಕೊಡಬೇಕು ನ್ಯಾಯವನ್ನು ಕರುಣೆಯಲಿ ಮೃದುಗೊಳಿಸಿ ಕೆಡುಕಿರಲಿ, ಒಳಿತಿರಲಿ’ ಎಂಬುದನ್ನು ಅವರು ಪ್ರತಿಪಾದಿಸಿದ್ದರು.

ಕಾವ್ಯಾನಂದರು ‘ಕವಿ–ವ್ಯಕ್ತಿ’ ಎರಡೂ ಒಬ್ಬರೇ ಆಗಿದ್ದುದು ಇಲ್ಲಿನ ಗಮನಾರ್ಹ ಸಂಗತಿ. ಅವರಿಗೆ

'ಕಾವ್ಯ-ಜೀವನ' ಎರಡೂ ಒಂದೇ ಆಗಿತ್ತು. ನಮ್ಮ ದೊಡ್ಡಮ್ಮನ ಅನಾರೋಗ್ಯ, ಬಸವ ಸಮಿತಿಯ ಹಿರಿಯರಿಂದಾದ ವಿಶ್ವಾಸದ್ರೋಹ, ನಂಬಿದವರಿಂದಾದ ವಂಚನೆ ಅವರ ಮನಸವನ್ನು ಕೀಟವಾಗಿ ಕೊರೆಯುತ್ತಿದ್ದವು. ಇಂದಿನ ಹದಗೆಟ್ಟ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳಿಂದ ಅವರು ಬಹು ನೊಂದಿದ್ದರು. ಎಂಥಾ ಕಡುವೈರಿಯನ್ನು ಸಾತ್ವಿಕನನ್ನಾಗಿ, ಸನ್ಮಿತ್ರನನ್ನಾಗಿ ಪರಿವರ್ತಿಸುವ ಜಾದೂಗಾರರು ಅವರಾಗಿದ್ದರು. 'ಜೀವನವು ಇತ್ತುವನೆ ಜೀವಿಗಳಿಗರ್ಪಿಸುವುದರಲ್ಲಿ ನನ್ನದೇನು ಹೆಚ್ಚುಗಾರಿಕೆ' ಎಂಬುದು ಅವರ ಹಿರಿಯತನಕ್ಕೆ ಸಾಕ್ಷಿ ಆಗಿದೆ. ಸಮಯದ ಸದುಪಯೋಗವನ್ನು ಸಕಲ ಶ್ರೇಯೋಭಿವೃದ್ಧಿಗೆ ಮಾಡಿ ಸಂತೋಷಪಟ್ಟರು. ಹೀಗೆ ಕಾಲದ ಸೆರಗಿನಲ್ಲಿ ಮಾಗುತ್ತಾ, ಮಿಂಚುತ್ತಾ ಬಂದರು ತಮ್ಮ ಪೂರ್ವಜರಂತೆ !

ನನಗೆ ಬಹುಪ್ರಿಯವಾದ ಈ ವಚನಗಳು ಕಾವ್ಯಾನಂದರ 'ಜೀವನ-ದರ್ಶನ'ವನ್ನು ಅಭಿವ್ಯಕ್ತಿಸುವ ಮುಕ್ತಕಗಳಾಗಿವೆ !

"ಮಾನವನೆ ಮಾನವನ ಭವಿತವ್ಯ, ಗಂತವ್ಯ
ಮಾನವೀಯತೆಯೊಂದೆ ನಿಜಧರ್ಮವು
ಮಾನವರು ಕೆಟ್ಟರೂ ಮಾನವತೆ ಉಳಿಯುವುದು
ಮಾನವರ ಮೇಲೆತ್ತಿ-ಮರುಳಸಿದ್ಧ"

"ಹಿಗ್ಗುವುದೆ ಜೀವನವು, ಕುಗ್ಗುವುದೆ ಮರಣವು
ಹಿಗ್ಗದಿಹ ಜೀವಿಯೋ ಶವಕೆ ಸಮನಲ್ತೆ ?
ಲಗ್ಗೆಯಿಡು ಹಿಗ್ಗಿಗೆ, ಜೀವನದ ಸುಗ್ಗಿಗೆ
ಹಿಗ್ಗು, ಹಿಗ್ಗಿಸು; ಬಾಳು-ಮರುಳಸಿದ್ಧ"

"ಎಲ್ಲ ಯಾತ್ರೆಗಳಲಿ ಜೀವನಯಾತ್ರೆ ಘನ
ಎಲ್ಲ ಕ್ಷೇತ್ರಗಳಲಿ ಹೃದಯ ಕ್ಷೇತ್ರ
ಅಲ್ಲಿಗೊಯ್ಯುವ ದಾರಿ ಪ್ರೀತಿ ವಿಶ್ವಾಸಗಳು
ಕಲ್ಲುಮಣ್ಣುಗಳಲ್ಲ-ಮರುಳಸಿದ್ಧ,"-ಹೌದು,' ಜೀವನದ ಸಫಲತೆಗೆ ಮನುಷ್ಯನು ದೈವವೋ, ಜೀವಿತವೋ, ಸದ್ಗುಣವೋ ಆದರ್ಶವೋ-ಯಾವುದೋ ಒಂದನ್ನು ನಂಬುವುದು ಅಗತ್ಯ' ಎಂದು ಆಗಾಗ ಹೇಳುತ್ತಿದ್ದರು. ತಮ್ಮ ಆಳವಾದ ಅನುಭಾವದ ಹದದಿಂದ ತಮ್ಮ 'ಕಾವ್ಯ ಜೀವನ'ವನ್ನು ವೈಜ್ಞಾನಿಕತೆಯ ಎಳೆಗಳಿಂದ ವಿಚಾರವಂತಿಕೆಯ ಸುಮಗಳಿಂದ ಸಿಂಗರಿಸಿದರು; ನೋಡಿ ಆನಂದಿಸಿದರು.

'ಶಿಸ್ತಿನ ಸಿಪಾಯಿ'ಆಗಿದ್ದ ಡಾ॥ ಸಿದ್ಧಯ್ಯ ಪುರಾಣಿಕರು ಎಂದೂ ಯಾರ ಮೇಲೂ ಏನನ್ನೂ ಹೇರಲಿಲ್ಲ. ಕಡ್ಡಾಯಗೊಳಿಸಲಿಲ್ಲ ! ಪ್ರೀತಿ, ಸಮತೆ, ಗೌರವ; ಶಾಂತಿಗಳನ್ನಿತ್ತು ಅವನ್ನು ತಾವೂ ಪ್ರತಿಯಾಗಿ ಪಡೆದರು, ಬದುಕಿನ ಅರ್ಥವನ್ನು ಅವರು ತಮ್ಮ ಸರಳ ಸಹಜ ನೇರ ನುಡಿಗಳಿಂದ ಕಂಡುಕೊಂಡರು ಕಾವ್ಯಾನಂದರು.

ಕೇವಲ 'ಮನುಜ ಮತ'ದ ಪ್ರತಿಪಾದಕರಾಗಿದ್ದ ಡಾ॥ ಪುರಾಣಿಕರು ತಮಗೆ ಬೇಡಾದುದನು ಯಾವತ್ತೋ ಬೇರೆಯವರಿಗೆ ಬಯಸಲಿಲ್ಲ ಎಂಬುದು ಇಲ್ಲಿನ ವಿಶೇಷ ಸಂಗತಿ. ಲೋಕದಲ್ಲಿ ಅತ್ಯಂತ ಗಣ್ಯರಾಗುವುದು ಅವರಿಗೆ ಬೇಕಿರಲಿಲ್ಲ. 'ಕೇವಲ ಅತಿಥಿಗಳಂತೆ ಬಂದಿಲ್ಲಿ ಕೆಲದಿನ ಇದ್ದು ಹೋಗುವ ನಾವು ಪರರಿಗೆ ಲೇಸೆಸಗಿ ಧನ್ಯರಾಗುವುದೇ ಜೀವನದ ಗುರಿ' ಎಂಬುದು ಕಾವ್ಯಾನಂದರ ಅಭಿಪ್ರಾಯವಾಗಿತ್ತು.

ಡಾ॥ ಸಿದ್ಧಯ್ಯ ಪುರಾಣಿಕರು ತಮ್ಮ ಅಧಿಕಾರದ ಅವಧಿಯಲ್ಲಿನ ವಿವಿಧ ಹಂತಗಳಲ್ಲಿ ಕನ್ನಡಿಗರಿಗಾಗಿ, ಕನ್ನಡದ ಪ್ರಭುತ್ವಕ್ಕಾಗಿ ಅಹರ್ನಿಶಿ ಕಳಕಳಿಯಿಂದ, ನಿರ್ಭೀತರಾಗಿ ಶ್ರಮಿಸಿದರು, ಸಾಧಿಸಿದರು. ಬೆಳಗಾಂನಂಥ ಗಡಿಭಾಗದಲ್ಲಿ ಜಿಲ್ಲಾಧಿಕಾರಿ ಆಗಿದ್ದಾಗ ಅವರಿಂದ ಈ ನಾಡು-ನುಡಿಗಾದ ಅಮೂಲ್ಯ ಸೇವೆಯನ್ನು ಯಾವ ಕನ್ನಡಿಗನೂ ಎಂದೂ ಮರೆಯುವಂತಿಲ್ಲ ! ಮರೆತಲ್ಲಿ ಅವನು ಕೃತಘ್ನನೇ ಸರಿ !

ಕನ್ನಡದ ಕೆಲಸಕ್ಕಾಗಿ ಕರೆ ಎಲ್ಲಿಂದ, ಯಾವಾಗ ಬಂದರೂ ಸಿದ್ಧರಾಗಿ ಹೊರಡುವುದು ಈ 'ಕನ್ನಡದ ಕಟ್ಟಾಳು'ವಿನ ವಿಶೇಷತೆ ಆಗಿತ್ತು ! ಗೋಕಾಕ ವರದಿ, ಸರೋಜಿನಿ ಮಹಿಷಿ ವರದಿಗಳ ಅನುಷ್ಠಾನದಲ್ಲಿ ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ, ಶಕ್ತಿಮೀರಿ ಸಕ್ರಿಯವಾಗಿ ಹೋರಾಡಿದರು.

ಇತ್ತೀಚಿನ 3-4 ವರ್ಷಗಳಲ್ಲಿ ಕಟುವಾಸ್ತವ ಬದುಕಿನ ಏರಿಳಿತಗಳು ಸಾಕಷ್ಟು ಕಾವ್ಯಾನಂದರನ್ನು ಪರಿಪಕ್ವಗೊಳಿಸಿದ್ದವು. ಪುರಾಣಿಕ ಕುಟುಂಬವನ್ನು

ಪ್ರೀತಿ-ನಿಶ್ವಾಸದಿಂದ ಬೆಸೆದು, ಅದನ್ನು ಒಂದು ಆದರ್ಶ, ಸಾರ್ಥಕ ಮನೆತನವನ್ನಾಗಿ ಮಾಡುವ ಹೆಬ್ಬಯಕೆ ಅವರಲ್ಲಿತ್ತು! ಅವರ ಅಭಿಮಾನದ ತಮ್ಮಂದಿರಾದ ಶ್ರೀ ಅನ್ನದಾನಯ್ಯ ಪುರಾಣಿಕ ಮತ್ತು ಪ್ರೊ॥ ಬಸವರಾಜ ಪುರಾಣಿಕರನ್ನು ಮತ್ತು ಇನ್ನಿತರ ಸದಸ್ಯರನ್ನು ಅತ್ಯಂತ ಆತ್ಮೀಯತೆ, ಕಳಕಳಿಯಿಂದ ಅವರು ಕಾಣತೊಡಗಿದ್ದರು. ಅವರ ಶ್ರೇಯೋಭಿವೃದ್ಧಿಗಾಗಿ ಚಿಂತಿಸುತ್ತಿದ್ದರು. ನನ್ನ ಆರೋಗ್ಯದ ಬಗ್ಗೆಯಂತೂ, ನನಗಿಂತಲೂ ಅವರಿಗೇ ಹೆಚ್ಚು ಚಿಂತೆ ಕಾಳಜಿ ಇದ್ದವು. ಹೀಗೆ, ಕೇವಲ ಕೌಟುಂಬಿಕ ನೆಲೆಗಷ್ಟೇ ಸೀಮಿತವಾಗಿದ್ದ ಅವರ ಬಾಂಧವ್ಯದ ಎಲ್ಲೆಗಳು ಕೊನೆಗೆ ಎಲ್ಲರೆಡೆಗೂ ವ್ಯಾಪಿಸುತ್ತಾ ಬಂದವು, ಅನುಭವಾಮೃತವನ್ನು ಹಂಚಿದವು.

ಆದರೆ, ನಮ್ಮೆಲ್ಲರ ದುರ್ದೈವ! ಕಾಲನ ಕರೆ ಕಾವ್ಯಾನಂದರಿಗೆ ಈಗಲೇ ಬರಬೇಕೆ? ಈ 'ಪ್ರಯತ್ನ-ಸಿದ್ಧಿ'ಯು ಅಪೂರ್ಣವಾಗಿಯೇ ಉಳಿಯಿತು.

'ಮತ್ತೆ ಈ ಲೋಕಕ್ಕೆ ಬರುವಿಯೋ, ಇಲ್ಲವೋ
ಕರ್ತವ್ಯವಾವುದನು ಉಳಿಸಬೇಡ!
ಸುಪ್ತಶಕ್ತಿಯ ಬೆಳೆಸು, ಲೋಕ ಸೇವೆಗೆ ಬಳಸು
ತೃಪ್ತ ಪಯಣವ ಬೆಳೆಸು-ಮರುಳಸಿದ್ಧ'

ಈ ವಚನನೆನಪಾದಾಗಲೆಲ್ಲ ನನಗೆ ಅನ್ನಿಸುವುದು ಇಷ್ಟು-'ಇನ್ನೂ ಕೆಲವು ಕಾಲ ಬಹುಶಃ ಕಾವ್ಯಾನಂದರು ಜೀವಿಸಿದ್ದಿದ್ದರೆ ಖಚಿತಾ ಅವರಿಂದ ಒಂದು ಮಹತ್ಕೃತಿ ಇಲ್ಲವೇ ಒಂದು ಘನಕಾರ್ಯ ಈ ಲೋಕದಲ್ಲಿ ದಾಖಲಾಗುತ್ತಿದ್ದುವು' ಎಂದು. ಆದರೆ ವಿಧಾತನು ನಮ್ಮ ಈ ಆಸೆಗೆಲ್ಲಾ ತೆರೆಯನ್ನು ಎಳೆದ!

"....ಕನ್ನಡ ನಾಡಿಗೆ ನಾಲ್ಕು ದಶಕಗಳಿಂದಲೂ ಹೆಚ್ಚಿನ ಕಾಲ ಉತ್ತಮ ಸಾಹಿತ್ಯವನ್ನು ಸಂಸ್ಕೃತಿಯ ಆದರ್ಶವನ್ನು ಶ್ರೀ ಸಿದ್ಧಯ್ಯ ಪುರಾಣಿಕರು ನೀಡಿದ್ದಾರೆ. ಜೊತೆಗೆ ದಕ್ಷ ಆಡಳಿತಗಾರರೆಂದು ಪ್ರಖ್ಯಾತಿಯನ್ನು ಪಡೆದಿದ್ದಾರೆ. ಆಡಳಿತದಲ್ಲಿ ದಕ್ಷತೆಯ ಜೊತೆಗೆ ಸ್ವಚ್ಛತೆಯನ್ನು ಬೆರೆಸುವುದು ಸಾಧ್ಯ ಎಂಬುದಕ್ಕೆ ಶ್ರೀ ಪುರಾಣಿಕರು ಉತ್ತಮ ನಿದರ್ಶನವಾಗಿದ್ದಾರೆ. ಅವರ ಶುಭ್ರ ಜೀವನವನ್ನು ಅನುಸರಿಸಿದರೆ ನಮ್ಮ ಸಾರ್ವಜನಿಕ ಜೀವನವು ಉನ್ನತ ಮಟ್ಟಕ್ಕೆ ಏರುವುದರಲ್ಲಿ ಯಾವ ಸಂದೇಹವೂ ಇಲ್ಲ...."— ಎಂಬ ರಸಋಷಿ ಡಾ॥ ಕುವೆಂಪು ಅವರ ಈ ಆಶೀರ್ವಚನವೇ ಸಾಕಲ್ಲವೇ ಕಾವ್ಯಾನಂದರ ವ್ಯಕ್ತಿತ್ವಕ್ಕೆ?

ಕನ್ನಡ ಸಾಹಿತ್ಯಾಕಾಶದಲ್ಲಿ ಕಾವ್ಯಾನಂದರ, "ಶರಣಚರಿತಾಮೃತ, ಪದ್ಯರತ್ನಾಕರ, ತುಪ್ಪಾರೊಟ್ಟಿ ಗೇಗೇಗೇ, ಮಾನಸ ಸರೋವರ, ವಚನೋದ್ಯಾನ, ಗಿರಿಜಾ ಕಲ್ಯಾಣ, ಮಿರ್ಜಾ ಗಾಲಿಬ್, ಮರುಳ ಸಿದ್ಧನ ಕಂತೆ"ಗಳು ಮಿನುಗುವವರೆಗೆ 'ಮಾನವತೆಯ ಮಕರಂದ'ವನ್ನು ಸರ್ವರಿಗೂ ಅವು ಉಣಬಡಿಸುತ್ತವೆ. ಸಂತೃಪ್ತ, ಸಾರ್ಥಕ 76 ವಸಂತಗಳನ್ನು ಕಂಡಿದ್ದ ಈ ಚಿರಸ್ಮರಣೀಯ ಚೇತನಕ್ಕೆ ಭಕ್ತಿಪೂರ್ವಕ ಶ್ರದ್ಧಾಂಜಲಿ ಈ ಪುಟ್ಟ ಲೇಖನ!

## 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಕಾವ್ಯಾನಂದ

# ಡಾ॥ ಸಿದ್ಧಯ್ಯ ಪುರಾಣಿಕ ಅವರ ಪರಿಚಯ

–ಶ್ರೀ ಹೀ. ಚಿ. ಶಾಂತವೀರಯ್ಯ ಎಂ.ಎ.ಬಿ.ಇಡಿ.

"ಫಲವಿತ್ತ ರೆಂಬೆ ಬಾಗುತ್ತದೆ, ಗೊನೆ ಹೊತ್ತ ಬಾಳೆ ಬಾಗುತ್ತದೆ. ತೆನೆ ಹೆತ್ತ ದಂಟು ಬಾಗುತ್ತದೆ, ಏನೇನೂ ಇಲ್ಲದುದು ಬೀಗುತ್ತದೆ ನೋಡಾ ಸ್ವತಂತ್ರ ಧೀರ ಸಿದ್ಧೇಶ್ವರಾ" ಇದು ಡಾ॥ ಸಿದ್ದಯ್ಯ ಪುರಾಣಿಕ ವಚನ. ಪುರಾಣಿಕರು ಪ್ರತಿಭೆಯಿಂದ ಬಾಗಿದವರು, ಅನುಭಾವದಿಂದ ಬಾಗಿದವರು, ಕಾವ್ಯ ಪ್ರಚಯ ಪರಿಚಯದಿಂದ ಬಾಗಿದವರು, ಸತತ ಅಭ್ಯಾಸ ಪ್ರಯತ್ನದಿಂದ ಬಾಗಿದವರು, ವೃದ್ಧಸೇವಾನುರಾಗದಿಂದ ಬಾಗಿದವರು– ಹೀಗಾಗಿ ಬಾಗಿದ ತಲೆ, ಮುಗಿದ ಕೈ ಮತ್ತು ತುಂಬಿದ ಹೃದಯದವರು ಡಾ॥ ಸಿದ್ದಯ್ಯ ಪುರಾಣಿಕರು ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನ ಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ. ಇದಕ್ಕೆ ಅಪರೂಪವಾಗಿ ಸಿಂತ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ. ಶ್ರೀ ಪುರಾಣಿಕರು ಎಂದು ಕುವೆಂಪುರವರು ಆಶೀರ್ವದಿಸಿದ್ದಾರೆ.

ಡಾ॥ ಸಿದ್ದಯ್ಯ ಪುರಾಣಿಕರ ವಂಶವೇ ಕವಿಗಳ ಮತ್ತು ಪುರಾಣಿಕರ ವಂಶ. ದ್ಯಾಂಪುರದ ಕವಿರತ್ನ ಚನ್ನಪ್ಪ ಕವಿಗಳು ಇವರ ಅಜ್ಜಂದಿರು ಪ್ರಸಿದ್ಧ ಪುರಾಣಿಕರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ಇವರ ತಂದೆ ದ್ಯಾಂಪುರ ರಾಯಚೂರು ಜಿಲ್ಲೆಯ ಎಲಬುರ್ಗಿ ತಾಲ್ಲೂಕಿನ ಒಂದು ಸಣ್ಣ ಹಳ್ಳಿ, ಸುಮಾರು ನೂರು ಕುಟುಂಬಗಳಿರುವ ಊರು. ಅದು ಸುಸಂಸ್ಕೃತರ ಊರಾಗಿ ಆ ಊರಿನ ಅನುಭಾವಿಗಳು ಸುತ್ತೆಲ್ಲರಿಗೂ ಗುರುಗಳಾಗಿ ಶಿಕ್ಷಣ ಪ್ರಸಾರ ಮಾಡುತ್ತಿದ್ದರು, ಸಿದ್ದಯ್ಯ ತುಂಬು ಸಂಸಾರದಲ್ಲಿ ಹುಟ್ಟಿದವರು. ಇಬ್ಬರು ತಮ್ಮಂದಿರು, ಇಬ್ಬರು ತಂಗಿಯರು ಆಗರ್ಭ ಶ್ರೀಮಂತರೇನೂ ಅಲ್ಲ, ಆದರೆ ಹೊನ್ನಿನೊಳಗೊಂದು ಒರೆಯು, ವಸ್ತ್ರದೊಳಗೊಂದೆಳೆಯು, ಅನ್ನದೊಳಗೊಂದಗುಳ ಇಂದಿಂಗೆ, ನಾಳಿಂಗೆ ಎಂದು ಬಚ್ಚಿಟ್ಟವರಲ್ಲ. ಕಲ್ಲಿನಾಥ ಶಾಸ್ತ್ರಿಗಳು ಮಹಾ ಪಂಡಿತರಾಗಿದ್ದು ವೈದ್ಯವನ್ನೂ ಕಲಿತು ಕನ್ನಡ ಕಾವ್ಯಗಳನ್ನು ಲೀಲಾಜಾಲವಾಗಿ ಪ್ರವಚನ ಮಾಡಿ ಪುರಾಣಿಕರಾಗಿದ್ದರು, ಜನಪ್ರಿಯರಾಗಿದ್ದರು.

ಸಿದ್ದಯ್ಯ ದ್ಯಾಂಪುರದಲ್ಲಿ ಹಳ್ಳಿ ಶಾಲೆಯನ್ನು ಮುಗಿಸಿ, ದೂರದ ಕುಕ್ಕನೂರಿಗೆ ನಡೆದುಕೊಂಡೇ ಹೋಗಿ ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಮಾಡಿದರು. ಒಮ್ಮೆ ಗುರುಗಳು ಎಲ್ಲಾ ವಿದ್ಯಾರ್ಥಿಗಳಿಗೂ ತಮಗೇನು ಬೇಕು ಎಂಬುದನ್ನು ಪಾಟಿಯಲ್ಲಿ ಬರೆದು ತೋರಿಸಿ ಎಂದಾಗ; ಕೆಲವರು ಪುಸ್ತಕ ಬೇಕು, ಪೆನ್ಸಿಲ್ ಬೇಕು. ಚೆಂಡು ಬೇಕು, ತಿಂಡಿ ಬೇಕು ಎಂದು ಬರೆದಿದ್ದರಂತೆ. ಆದರೆ ಸಿದ್ದಯ್ಯ ಮಾತ್ರ "ವಿದ್ಯೆ" ಬೇಕೆಂದು ಬರೆದಿದ್ದರಂತೆ. ಬೆಳೆಯುವ ಕುಡಿ ಮೊಳಕೆಯಲ್ಲಿಯೇ ಎಂಬಂತೆ ಬಾಲ್ಯದಲ್ಲಿಯೇ ವಿದ್ಯೆಗೆ ಹಾತೊರೆಯುತ್ತಿದ್ದರು. ಏಳನೆಯ ತರಗತಿಯನ್ನು ಮುಗಿಸಿ ಕಲ್ಬುರ್ಗಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಂದು ಹಲವಾರು ಕಷ್ಟ–ನಷ್ಟಗಳನ್ನು ಅನುಭವಿಸಿ ತರಗತಿಯಲ್ಲಿ ಮೊದಲನೆಯ ಪದವಿ ಅಭ್ಯಾಸ ಮಾಡಿ, ಹೈದರಾ

ಬಾದಿಗೆ ಹೋಗಿ ಬಿ.ಎ., ಎಲ್.ಎಲ್.ಬಿ. ಪದವೀಧರರಾಗಿ ಜೀವನದಲ್ಲಿ ಒಂದು ಘಟ್ಟ ಮುಟ್ಟಿದರು.

ಸಿದ್ಧಯ್ಯ ಪುರಾಣಿಕರ ಜೀವನದ ಮೇಲೆ ಪ್ರಭಾವ ಬೀರಿದ ಮಹಾನುಭಾವರೆಂದರೆ–ಮಕ್ಕಳ ಸಾಹಿತ್ಯದ, ರತ್ನನ ಪದಗಳ, ಬೌದ್ಧ ಸಾಹಿತ್ಯದ ತ್ರಿವಿಕ್ರಮ ಜಿ. ಪಿ. ರಾಜರತ್ನಂ, ಬಹುಭಾಷಾ ಪರಿಣತಿಯ, ಅಸೀಮ ಪಾಂಡಿತ್ಯದ, ಸರಳ ಸಜ್ಜನಿಕೆಯ ಪ್ರೊ. ತೀ. ನಂ. ಶ್ರೀಕಂಠಯ್ಯ, ಹೊಸಗನ್ನಡ ಸಾಹಿತ್ಯದ ಆಚಾರ್ಯ ಪುರಂಷ ಬಿ. ಎಂ. ಶ್ರೀಕಂಠಯ್ಯ, ಮಹಾಕವಿ ಕುವೆಂಪು, ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪುರವರ ಕವನವನ್ನು ಕೇಳಿ ಕವಿಯಾಗಬೇಕೆಂಬ ಗುಂಗು ಅವರ ತಲೆಗೆ ಹತ್ತಿತ್ತು, ಹೈದರಾಬಾದಿನಲ್ಲಿ ನಡೆದ ಕವಿ ಸಮ್ಮೇಳನದಲ್ಲಿ "ಎರಡು ಚಿತ್ರಗಳು" ಮತ್ತು "ಮನ್ನಿಸೆನ್ನನ್ನು ಚೆನ್ನ" ಎಂಬ ಕವನಗಳನ್ನು ಮೊದಲ ಬಾರಿಗೆ ಓದಿದಾಗ ಕಾಲು ನಡುಗುತ್ತಿತ್ತು, ನಾಲಿಗೆ ತೊದಲುತ್ತಿತ್ತು. ಅಂದು ಉಪಸ್ಥಿತರಿದ್ದ ಮಾಸ್ತಿ, ಗೋಕಾಕ್ ಮೊದಲಾದ ಹಿರಿಯರು ಬೆನ್ನು ತಟ್ಟಿ ಕವಿತ್ವಕ್ಕೆ ನೀರೆರೆದರು. ತಂದೆಯವರಾದರೋ ಅಧಿಕಾರಿಯಾಗು ಇಲ್ಲಿ ವಕೀಲನಾಗು ಎಂದು ಹೇಳುತ್ತಿದ್ದರು. ಆದರೆ ಸಿದ್ಧಯ್ಯ ಇಂಗ್ಲೀಷ್, ಸಂಸ್ಕೃತ ಮತ್ತು ಕನ್ನಡ ಅಭ್ಯಾಸ ಮಾಡಿ ಇಡೀ ವಿಶ್ವವಿದ್ಯಾನಿಲಯದಲ್ಲೇ ಮೊದಲನೆಯವರಾಗಿ ಉತ್ತೀರ್ಣರಾಗಿದ್ದರು. ಈ ಮಧ್ಯೆ ಅನೇಕ ಅಹಿತ ಘಟನೆಗಳು ಪುರಾಣಿಕರನ್ನು ಜರ್ಜರಿತಗೊಳಿಸಿದ್ದರೂ ಅಧೀರರಾಗದೆ, ಎದೆಗುಂದದೆ ಗುರಿ ಮುಟ್ಟಲು ಛಲ ತೊಟ್ಟರು.

ಸಿದ್ಧಯ್ಯನವರಿಗೆ ತಹಶೀಲ್ದಾರ್ ಹುದ್ದೆ ಬಂದುದೇ ಒಂದು ಪವಾಡ ಅಂದಿನ ಕಾಲದಲ್ಲಿ ಎಲ್ಲರ ಮನವನ್ನು ಸೆಳೆದಿದ್ದ ಹುದ್ದೆ ದೊರೆತುದುದು ಇವರ ನಿಷ್ಠೆ ಶ್ರದ್ಧೆ ಮತ್ತು ಶಿಸ್ತುಗಳಿಂದ ಅಧಿಕಾರಿಗಳಾದ ಮೇಲೆ ಪುರಾಣಿಕರು ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಬಾಳಸಂಗಾತಿಯಾಗಿ ಗಿರಿಜಾದೇವಿಯನ್ನು ಪೊಂದಿದ ಮೇಲೆ ಕವಿ ಪುರಾಣಿಕರಿಗೆ ಪ್ರೇರಣೆ ಸಿಕ್ಕಿತು. ಸಾಹಿತ್ಯ ರಚನೆಗೆ ಪ್ರಾರಂಭ ಮಾಡಿ ಹಲವಾರು ಗ್ರಂಥಗಳನ್ನು ರಚಿಸಿದರು. ಸುಬೋಧ ಸಾರ (1939), ಆತ್ಮಾರ್ಪಣೆ (1942), ಶ್ರೀಕಾರ ಮತ್ತು ಪ್ರಬಂಧ ಮಾಲೆ (1952), ಜಲಪಾತ (1953), ಕರುಣಾ ಶ್ರಾವಣ (1953). ತುಷಾರ ಹಾರ (1956), ಪದ್ಯ ರತ್ನಾಕರ (1956), ಮಾನಸ ಸರೋವರ (1956), ಭಾರತವೀರ (1963), ಚರಿತ ವೃತ (1964), ಮಹಾತ್ಮ ಕಾಳಿದಾಸ ಪ್ರಶಸ್ತಿ (1961 , ರಜತರೇಖೆ (1965), ಕಲ್ಪಲ ಮಾಲೆ (1968), ಶರಣ ಪ್ರಸಾದ (1969), ಮೊದಲು ಮಾನವನಾಗು (1969), ತುಪ್ಪ ರೊಟ್ಟಿಗೇಗೇಗೇ (1974), ಸಿದ್ಧರಾಮ (1974), ನಿರ್ಬಂಧನ (1974), ತ್ರಿಭುವನ ಮಲ್ಲ (1974), ಬಸವಣ್ಣನವರ ಜೀವನ ಹಾಗೂ ಸಂದೇಶ (1977), ವಚನೋದ್ಯಾನ (1977), ನಜೀರ್ ಅಕ್ಬರಾಬಾದಿ (1978), ಗಿಲ್ ಗಿಲ್ ಗಿಲಗಟ್ಟಿ (1978), ಹರ್ಡೇಕರ್ ಮಂಜಪ್ಪನವರು (1978), ಮಿರ್ಜಾಗಾಲಿಬ್ (1979), ವಚನ ನಂದನ (1983)—ಹೀಗೆ ಸುಮಾರು ಮೂವತ್ತಕ್ಕೂ ಹೆಚ್ಚು ಕವನ, ಸಂಪಾದನೆ, ಕಿರುಗತೆ, ನಾಟಕ, ಜೀವನ ಚರಿತ್ರೆ ಮತ್ತು ಮಕ್ಕಳ ಪದಗಳನ್ನು ರಚಿಸಿದ್ದಾರೆ,

ತಹಶೀಲ್ದಾರರಾಗಿ ಸೇವೆಯನ್ನು ಪ್ರಾರಂಭಿಸಿದ ಪುರಾಣಿಕರು ಕರ್ನಾಟಕ ಏಕೀಕರಣವಾಗುವವರೆಗೂ ಹೈದರಾಬಾದ್ ಸಂಸ್ಥಾನದಲ್ಲಿ ಡೆಪ್ಯುಟಿ ಕಲೆಕ್ಟರಾಗಿದ್ದರು. ಇಲ್ಲಿಗೆ ಬಂದ ಮೇಲೆ ವಿದ್ಯೆ, ವಾರ್ತಾ ಮತ್ತು ಪ್ರವಾಸೋದ್ಯಮ, ಅರ್ಥ, ಸಾರಿಗೆ ಮತ್ತು ಕಾರ್ಮಿಕ ಇಲಾಖೆಗಳಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿ ಜನಪ್ರಿಯರಾದರು. ದಕ್ಷ ಆಡಳಿತಗಾರರೂ ನಿಷ್ಠಾವಂತ ವ್ಯಕ್ತಿಗಳೂ ಶಿಸ್ತಿನ ಸಿಪಾಯಿಗಳೂ ಆದ ಸಿದ್ಧಯ್ಯನವರು ಒಳ್ಳೆಯದಕ್ಕೆ ಯಾವಾಗಲೂ ಸಿದ್ಧರಾಗಿರುತ್ತಿದ್ದರು. ನಿಜವಲ್ಲದ್ದನ್ನು ಖಂಡಿಸಿ, ಇದ್ದದ್ದನ್ನು ಇದ್ದಹಾಗೆ ಹೇಳುವ ಸಿದ್ಧರಾಮನ ಪರಮ ಭಕ್ತರು.

ಡಾ॥ ಸಿದ್ಧಯ್ಯ ಪುರಾಣಿಕರಿಗೆ ಅರಮನೆ, ಗುರುಮನೆ ಮತ್ತು ಜನಮನೆಗಳಿಂದ ನೂರಾರು ಸನ್ಮಾನ, ಪದವಿ, ಪುರಸ್ಕಾರಗಳು ಲಭಿಸಿವೆ. 1976ರಲ್ಲಿ

ಕರ್ನಾಟಕ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿತು. 1978ರಲ್ಲಿ ಇಡೀ ಭಾರತದಲ್ಲಿಯೇ ಮೊದಲನೆಯದಾಗಿ ಕಲ್ಕತ್ತಾದ ಭಾರತೀಯ ಭಾಷಾ ಪರಿಷತ್ತಿನ 'ಭಿಲ್ವಾರ' ಪ್ರಶಸ್ತಿ ಅವರ ವಚನೋದ್ಯಾನಕ್ಕೆ ಲಭಿಸಿತು. 1981ರಲ್ಲಿ "ವಾಳವಾಡ" ಪ್ರಶಸ್ತಿ–ಹೀಗೆ ಪ್ರಶಸ್ತಿಗಳ ಮೇಲೆ ಪ್ರಶಸ್ತಿ, ಅಭಿನಂದನೆಗಳ ಮೇಲೆ ಅಭಿನಂದನೆಗಳು ಬಂದುವು. "ಕಾವ್ಯಾನಂದ", 'ಕಾವ್ಯಶ್ರೀ', 'ಜೀವನವಿಕಾಶ' ಮೊದಲಾದ ಅಭಿನಂದನ ಗ್ರಂಥಗಳು ಪ್ರಕಟವಾದವು. ಬೆಂಗಳೂರಿನ ಸ್ನೇಹಿತರು 1981ರಲ್ಲಿ "ಕಾವ್ಯಾನಂದ" ಮತ್ತು "ಸಹೃದಯ" ಎಂಬ ಅಭಿನಂದನಾ ಗ್ರಂಥಗಳನ್ನು ಅರ್ಪಿಸಿ ಗೌರವಿಸಿದರು.

ಡಾ॥ ಸಿದ್ಧಯ್ಯ ಪುರಾಣಿಕರಿಗೆ ಮೊದಲಿನಿಂದಲೂ ಸಂಘ–ಸಂಸ್ಥೆ ಎಂದರೆ ಅಭಿಮಾನ ನೂರಾರು ಸಂಘ–ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಇಂದಿಗೂ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ, ಬಸವ ಸಮಿತಿ ಮೊದಲಾದ ಸಂಘ ಸಂಸ್ಥೆಗಳಲ್ಲಿ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ನಿಘಂಟಿನ ಸಂಪಾದಕ ಸಮಿತಿಯ ಸದಸ್ಯರಾಗಿ ಅವರ ಸೇವೆ ಸ್ಮರಣೀಯವಾದುದು. ಹೈದರಾಬಾದಿನಲ್ಲಿ ನಡೆದ ಪಂಚಭಾಷಾ ಕವಿ ಸಮ್ಮೇಳನದ ಅಧ್ಯಕ್ಷರಾಗಿ, ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷರಾಗಿ–ಹೀಗೆ ಸುಮಾರು ನೂರಾರು ಸಭೆ ಸಮಾರಂಭಗಳಲ್ಲಿ ತಮ್ಮ ವಿದ್ವತ್ತನ್ನು, ಸರಸ ಸಜ್ಜನಿಕೆಯನ್ನು ಪ್ರಕಟಿಸಿದ್ದಾರೆ. 18–8–1918 ಪುರಾಣಿಕರ ಜನ್ಮದಿನ. 18–8–1988ಕ್ಕೆ "ಸಪ್ತತಿ" ಸಮಾರಂಭ.

ಸಿದ್ಧಯ್ಯ ಪುರಾಣಿಕರು ಆಲಮಟ್ಟಿಯಲ್ಲಿದ್ದಾಗ "ಕಾವ್ಯಾನಂದ" ಎಂಬ ಕಾವ್ಯನಾಮ ಆಕಸ್ಮಿಕವಾಗಿ ಲಭ್ಯವಾಯಿತು. "ಕಾವ್ಯದೇವಿ" ಎಂಬ ನೀಳ್ಗವಿತೆಯನ್ನು ಬರೆದು ಶರಣ ಸಂದೇಶದಲ್ಲಿ ಪ್ರಕಟವಾದಾಗ "ನಿನ್ನಾತ್ಮವಾನಂದ ನನ್ನಾತ್ಮ" ಕಾವ್ಯ ಇಂತು ಕಾವ್ಯಾನಂದ ನಾಮ ಸುಶ್ರಾವ್ಯ ಅಂದಿನಿಂದ ಸಿದ ಯ ಪುರಾಣಿಕರು "ಕಾವ್ಯಾನಂದ"ರಾದರು.

ಡಾ॥ ಸಿದ್ದಯ್ಯ ಪುರಾಣಿಕರು ವಚನ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡ ಆಧುನಿಕ ವಚನಕಾರರು "ಸ್ವತಂತ್ರ ಧೀರ ಸಿದ್ಧೇಶ್ವರನ" ಸಾಕ್ಷಾತ್ಕಾರಕ್ಕೆ ಹಂಬಲಿಸಿದವರು. ಈ ಅಂಕಿತದಲ್ಲಿ ಸರಳ, ನೇರ ಮತ್ತು ಅನುಭವ ಪೂರ್ಣವಾದ ವಚನ ಶೈಲಿಯಲ್ಲಿ ವಚನಗಳನ್ನು ರಚಿಸಿದ್ದಾರೆ. ಅವು ಎಲ್ಲಿಯೂ ಆವೇಶದಿಂದ ಭೋರ್ಗರೆಯದೆ, ಚಮತ್ಕಾರದಿಂದ ಪ್ರದರ್ಶಿತವಾಗದೆ, ಅನುಭವ ವಾಹಕವಾಗುವಂತೆ ಸಹಜವಾದ ಧ್ವನಿ ಪೂರ್ಣವಾದ ಉಕ್ತಿಗಳು, ವಾಕ್ಯ ವಿನ್ಯಾಸಗಳು ಮೈವೆತ್ತು ವಚನಶಿಲ್ಪ ಸಹಜವಾಗಿ ರೂಪುಗೊಂಡಿವೆ. ಅನುಭವ ತುಂಬಿ ಬಂದಾಗ ಅಡಿದ ಮಾತೆಲ್ಲ ಕಾವ್ಯವಾಗುತ್ತದೆ ಎಂಬುದಕ್ಕೆ ಪುರಾಣಿಕರ ವಚನಗಳೇ ಸಾಕ್ಷಿ. "ವಚನೋದ್ಯಾನ" "ವಚನನಂದನ" ಈ ಮಾತಿಗೆ ಪುಷ್ಟಿ. ಡಾ॥ ಸಿದ್ದಯ್ಯ ಪುರಾಣಿಕರ ಜೀವನ ಹೂವಿನ ಹಾಸಿಗೆಯೇನು ಆಗಿರಲಿಲ್ಲ, ಹಾಗೆಂದು ಮುಳ್ಳಿನ ಮಂಚವೂ ಆಗಿರಲಿಲ್ಲ ಎಂದೂ ಕಷ್ಟವನ್ನು ಬೇಡಿದವರಲ್ಲ. ಆದರೆ ಕಷ್ಟ ಬಂದರೆ ಅದನ್ನು ಧೈರ್ಯದಿಂದ ಎದುರಿಸಿದ್ದಾರೆ. ಅದರಿಂದಲೇ ಅವರು ಸ್ವತಂತ್ರ ಧೀರ ಸಿದ್ಧೇಶ್ವರರಾದುದು.

ಪುರಾಣಿಕರೇ ತಿಳಿಸಿರುವಂತೆ, ವಿದ್ಯೆ ಬಂತು ವಿನಯ ಹೋಯ್ತು, ಬುದ್ಧಿ ಬಂತು ಶ್ರದ್ಧೆ ಹೋಯ್ತು, ಸಮೃದ್ಧಿ ಬಂತು ಸಂಸ್ಕೃತಿ ಹೋಯ್ತು, ವಿಜ್ಞಾನ ಬಂತು ವಿನಾಶ ಆಯ್ತು, ಬೋಧನೆ ಬಂತು ಕೃತಿ ಹೋಯ್ತು, ಜಾತಿ ಬಂತು ಪ್ರೀತಿ ಹೋಯ್ತು— ಈ ಕಾಲದಲ್ಲಿ ಸ್ವತಂತ್ರ ಧೀರ ಸಿದ್ಧೇಶ್ವರನ ವಚನಗಳು ದಾರಿ ದೀವಿಗೆಯಂತಿವೆ. ಸಿರಿ ಹೆಚ್ಚಿದಂತೆ ಉರಿ ಹೆಚ್ಚು, ನೆನ್ನೆ ಕಡೆದ ಮಜ್ಜಿಗೆ ಇಂದು ಕಾಸಿದ ಹಾಲಿಗೆ ಹೆಪ್ಪು, ಓಣಿಗೊಬ್ಬ ಸನ್ಯಾಸಿ, ಕೆಟ್ಟಿದ್ದನ್ನು ಮಾಡುವುದು ಸುಲಭ, ಬಿಡುವುದು ಕಷ್ಟ, ಅಗ್ನಿಶಾಮಕ ದಳಗಳು ಬಂದಿವೆ. ದೋಷಾಗ್ನಿ ಶಮನ ದಳಗಳು ಬರುವುದು ಯಾವಾಗ ? ಹೀಗೆ ಡಾ॥ ಸಿದ್ಧಯ್ಯ ಪುರಾಣಿಕರು ಲೋಕಾನುಭವವನ್ನು ಬಿತ್ತರಿಸಿದ್ದಾರೆ. ಡಾ॥ ಸಿದ್ದಯ್ಯ ಪುರಾಣಿಕರನ್ನು ನಾವು ಹೊಗಳಬೇಕಾಗಿಲ್ಲ. ಅವರ ಮಾತೆ ಮಹಾತಾಯಿ ದಾನಮ್ಮನವರನ್ನು ಸ್ಮರಿಸಬೇಕು,

ಬಾಳಿಮೆಯಲ್ಲಿಯೇ ಸಿದ್ದಣ್ಣನಿಗೆ "ಕಾವ್ಯವಾ ರಚಿಸು. ಕತೆಯಂ ಕಟ್ಟು. ಜೀವನ ಚರಿತ್ರೆಯಂ ಬರೆ, ಸಾಧಕನಾಗು, ಶಿಸ್ತಿನ ಸಿಪಾಯಿಯಾಗು" ಎಂದು ಹಾಲೂಡಿದ್ದರ ಪರಿಣಾಮವಾಗಿ ಡಾ॥ ಸಿದ್ದಯ್ಯ ಪುರಾಣಿಕರ ಹಚ್ಚ ಹಸುರಾಗಿದೆ. ಅವರನ್ನು ಗುಲ್ಬರ್ಗದಲ್ಲಿ ನಡೆಯುವ 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆರಿಸಿ ಜನತೆ ತನ್ನನ್ನೇ ಗೌರವಿಸಿಕೊಂಡಿದೆ. ಕನ್ನಡಮ್ಮ ಇನ್ನೂ ಹೆಚ್ಚಿನ ಆಯುಸ್ಸು, ಅಭಿವೃದ್ಧಿಯೆನ್ನೀಟು ಮಾಡಲೆಂದು ಪ್ರಾರ್ಥಿಸುತ್ತೇನೆ.

ಮುಗಿದ ಕೈ ಬಾಗಿದ ತಲೆ ಮತ್ತು ತುಂಬಿದ
ಹೃದಯುದವರು. ಅವರೇ ತಿಳಿಸಿರುವಂತೆ
ಫಲವಿತ್ತ ರೆಂಬೆ ಬಾಗುತ್ತಾ, ಗೊನೆಬಿಟ್ಟ
ಬಾಳೆ ಬಾಗುತ್ತದೆ. ತೆನೆಹೆತ್ತ ದಂಟು ಬಾಗು
ತ್ತದೆ. ಏನೇನೂ ಇಲ್ಲದುದು ಬೀಗುತ್ತದೆ.

"ವಿದ್ಯೆ ಬಂತು ವಿನಯ ಹೋಯ್ತು, ಬುದ್ಧಿ
ಬಂತು ಶ್ರದ್ಧೆ ಹೋಯ್ತು, ಸಮೃದ್ಧಿ ಬಂತು
ಸಂಸ್ಕೃತಿ ಹೋಯ್ತು, ಬೋಧನೆ ಬಂತು
ಸಾಧನೆ ಹೋಯ್ತು, ಮಾತು ಬಂತು ಶೃತಿ
ಹೋಯ್ತು, ಜಾತಿ ಬಂತು ಪ್ರೀತಿ
ಹೋಯ್ತು, ಸ್ವಾತಂತ್ರ್ಯ ಬಂತು ಸೌಜನ್ಯ
ಹೋಯ್ತು, ರಾಜ್ಯೋತ್ಸವ ಬಂತು ಕನ್ನಡ
ಹೋಯ್ತು"

"ತತ್ವರಹಿತ ರಾಜಕಾರಣ, ಶ್ರಮರಹಿತ ಸಂಪತ್ತು
ನೀತಿ ಹೀನ ವ್ಯಾಪಕ, ಶೀಲ ಶೂನ್ಯ ಶಿಕ್ಷಣ,
ಮನಸ್ಸಾಕ್ಷಿಯಿಲ್ಲದ ಭೋಗ, ಮನುಷ್ಯತ್ವ
ವಿರಹಿತ ವಿಜ್ಞಾನ, ತ್ಯಾಗವಿಹಾರ ಪೂಜೆ"
ಇರಬಾರದು.

ಕರು ಮರೆತರೂ ತುರುಮರೆಯದು, ಉತ್ಸಾಹವೇ ಅಸ್ತಿಕತೆ ನಿರಾಸೆಯೇ ನಾಸ್ತಿಕತೆ, ನೆಲೆ ನಿಶ್ಚಲ ಜಲ ಚಂಚಲ, ಕಾಮವನ್ನೇ ಸುಡುವ ಹಬ್ಬದಲ್ಲಿ ಕಾಮ ಪ್ರಚೋದನೆ ಹಾಡುಗಳು, ಅರ್ಥ ಕೈಯೊಳಗಿಲ್ಲ ವ್ಯರ್ಥ ಜೀವನವೆಲ್ಲಿ. ವ್ಯಸನವೇ ಮರಣ ನಿರ್ವ್ಯಸನವೇ ನಂದನ ಸಿಪ್ಪೆ ತೆಗೆದು ಕಡಲೆಕಾಯಿ ಹಾಕಿದರೆ, ಸಿಪ್ಪೆ ತೊಟ್ಟೇ ಹುಟ್ಟುತ್ತದೆ ಇದೆಂಥ ಸಹವರ್ತಿಸಿದ್ದೆ. ಸ್ವದೇಶ, ಸ್ವಭಾಷೆ ಸ್ವರ್ಗ, ಶೋಷಣೆಗೆ ಘೋಷಣೆಯರಕೆ, ಸುಲಿಗೆಗೆ ಶಾಸನದ ಕತೆ, ಲೂಟಿಗೆ ಸರ್ಕಾರದ ಕತೆ, ಬೇಲಿಯಿಲ್ಲ ಹೊಲ ಬೆದರುಯಿಲ್ಲದವೆಯೋ ಆಗಿದೆಯುವ್ವ ಕನ್ನಡನಾಡು, ಧರ್ಮಬೇಕು ಧರ್ಮಾಚರಣೆ ಬೇಡ. ಸುಖಬೇಕು ಸುಖದ ಹೊಗೆ ಬೇಡ, ವ್ಯಾಸಂಗೆ ಸಮಯವಿಲ್ಲ ದುರ್ವ್ಯಾಸಂಗಕ್ಕೆ ಸಮಯವಿದೆ, ಹೂಹೆತ್ತ ಬಳ್ಳಿಯು ಬಾಣಂತನ ಮಾಡುವವರಾರಯ್ಯ, ಬೆಳಕಿತ್ತ ದೀಪಕ್ಕು ಮಾನಪತ್ರ ಕೊಡುವವರಾರಯ್ಯ, ದುರಾಚಾರಿ ಪಂಡಿತನಿಗೂ ಸದಾಚಾರಿ ಪಾಮರ ಲೇಸು, ಹರಿದು ತಿನ್ನುವ ಬಲ್ಲಿದನಿಗಿಂತ ಹಂಚಿಯುಲ್ಲಿನ ಬಡವ ಲೇಸು. ಹುಲಿಯು ಚರ್ಮದ ಮೇಲೆ ಕುಳಿತಾಕ್ಷಣ ಹುಲಿಯು ಸವಾರಿ ಮಾಡಬಲ್ಲದೆ? (ಮನೆ ಕಾಯುವ ನಾಯಿ ಹೊರಗೆ ಕದ್ದು ಕುಡಿಯುವ ಬೆಕ್ಕು ಒಳಗೆ ಸಣ್ಣ ನೀತಿ) ಸತ್ತ ಸಿಂಹಕ್ಕಿಂತ ಜೀವಂತ ನಾಯಿ ಲೇಸು, ಒಲವೇ ಬೆಳಕು. ಬಲವರವೇ ಕತ್ತಲೆ. ಅಜೀರ್ಣಕ್ಕೆ ಕಾರಣ ಅಂಬಲಿಯಾದರೇನು ಅಮೃತವಾದರೇನು. ಮನೆ ತುಂಬ ಮುಸುರೆ ಚೆಲ್ಲಿ ನೊಣ ಓಡಿಸುವುದಕ್ಕಿಂತ ಮನೆ ಸ್ವಚ್ಛವಾಗಿಸುವುದೇ ಲೇಸು. ಕರುಣೆಯೇ ಕಾಶಿ ದಯೆಯೇ ಗಯೆ, ಕನಿಕರವೇ ಕೇದಾರ, ಮಮತೆ ಮಕ್ಕಾಮದೀನ,

———

# ಡಾ॥ ಸಿದ್ದಯ್ಯ ಪುರಾಣಿಕರು ಮತ್ತು ಮಕ್ಕಳ ಸಾಹಿತ್ಯ

ಲೇಖಕರು : ಶ್ರೀ ಎಸ್. ವಿ. ಶ್ರೀನಿವಾಸರಾವ್

ಡಾ॥ ಸಿದ್ಧಯ್ಯ ಪುರಾಣಿಕ ಕನ್ನಡ ಸಾರಸ್ವತ ಲೋಕದ ಒಂದು ಪ್ರಜ್ವಲಿತ ತಾರೆ. ಇವರದು ಬಹು ಮುಖ ಪ್ರತಿಭೆ, ಮೂಲತಃ ಇವರು ಕವಿ; ವಸ್ತುತಃ ಶ್ರೇಷ್ಠ ವಿಚಾರವಾದಿ. ಹಾಗೂ ಧೀಮಂತ ದಾರ್ಶನಿಕ; ಕಾರ್ಯತಃ ಸಮರ್ಥ ಆಡಳಿತಾಧಿಕಾರಿ. ಇವೆಲ್ಲಕ್ಕಿಂತ ಮಿಗಿಲಾಗಿ ಇವರು ಮಕ್ಕಳ ಮಾನಸಿಕ ಸ್ಪಂದನಕ್ಕೆ ಸ್ಫುರಿಸುವ ಮಾನವತಾವಾದಿ.

ಸೃಜನಶೀಲತೆ ಸಾಹಿತ್ಯ ಕ್ಷೇತ್ರದಲ್ಲಿ ಹಲವು ಮುಖ ಗಳಲ್ಲಿ ಅಭಿವ್ಯಕ್ತಗೊಂಡಿದ್ದರೆ, ನಿಸ್ಪೃಹತೆ, ಕಾರ್ಯದಕ್ಷತೆ, ಜನಗಳ ಬವಣೆಗಳ ಬಗ್ಗೆ ಅನುಕಂಪಭರಿತ ಕಾಳಜಿ ಸರ್ಕಾರಿ ಕಾರ್ಯಕ್ಷೇತ್ರದಲ್ಲಿ ವಿಜೃಂಭಿಸಿ ಇವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಿವೆ.

ಸರ್ಕಾರಿ ದುಡಿಮೆಯಲ್ಲಿ ಇವರ ಕವಿ ಹೃದಯ ಸದಾ ಜಾಗೃತವಾಗಿರುತ್ತಿತ್ತು. ಶೇಖರಿತ ಅನುಭವದ ವಾಣಿ ಮುತ್ತುಗಳು ಅನುಭಾವದ ಮೂಸೆಯಲ್ಲಿ ಸಂಸ್ಕರಣಗೊಂಡು ಜೀವಂತ ಕೃತಿಗಳಾಗಿ ಹೊರ ಹೊಮ್ಮಿವೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ, ವೊಳವಾಡ ಪ್ರಶಸ್ತಿಗಳಲ್ಲದೆ ಭಾರತೀಯ ಭಾಷಾ ಪರಿಷತ್ತಿನಿಂದ ಪ್ರಪ್ರಥಮವಾಗಿ ಭಿಲ್ವಾರ ಪ್ರಶಸ್ತಿ ಸಹ ಗಳಿಸಿರುವ ಅಗ್ಗಳಿಕೆ ಇವರದು. ಇದಲ್ಲದೆ 58ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವಕ್ಕೂ ಇವರು ಪಾತ್ರರಾಗಿದ್ದರು.

ಈ ಮೇಧಾವಂತ ಸಾಹಿತಿಯು ಕಾವ್ಯನಾಮ 'ಕಾವ್ಯಾನಂದ' ಕಾವ್ಯನಾಮಕ್ಕೆ ತಕ್ಕಂತೆ ಇವರು ಕಾವ್ಯ ಕ್ಷೇತ್ರಕ್ಕೆ ಸಂಪನ್ನ, ಮೌಲಿಕ ಕೃತಿಗಳನ್ನು ನೀಡಿದ್ದಾರೆ. ಇವುಗಳಲ್ಲಿ ಮುಖ್ಯವಾದವುಗಳು : ಕರುಣಾ ಶ್ರಾವಣ, ಮೊದಲು ಮಾನವನಾಗು; ಜಲಪಾತ; ಮಾನಸ ಸರೋವರ (ಕವನ ಸಂಗ್ರಹಗಳು) ವಚನೋದ್ಯಾನ; ಮರಳು ಸಿದ್ದನ ಕಂತೆ (ಉದ್ಗ್ರಂಥಗಳು), ವಚನೋದ್ಯಾನಕ್ಕೆ ಭಾರತೀಯ ಭಾಷಾ ಪರಿಷತ್ತಿನ ಬಹುಮಾನ ಲಭಿಸಿದ್ದರೆ 'ಮಾನಸ ಸರೋವರ' ಕವನ ಸಂಕಲನಕ್ಕೆ ರಾಜ್ಯ ಸರ್ಕಾರದ ಬಹುಮಾನ. 'ತುಪ್ಪಾ ರೊಟ್ಟಿಗೇಗೇಗೇ'ಗೆ ಭಾರತ ಸರ್ಕಾರದ ಪುರಸ್ಕಾರ ಲಭಿಸಿದೆ. ಕರ್ನಾಟಕ ವಿಶ್ವವಿದ್ಯಾಲಯ 1976ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಸನ್ಮಾನಿಸಿದೆ. 1987ರಲ್ಲಿ ಪುರಾಣಿಕರ ಅಭಿಮಾನಿಗಳು ಇವರಿಗೆ 'ಕಾವ್ಯಾನಂದ' ಎಂಬ ಸಾಂಭಾವನಾ ಗ್ರಂಥ ಸಮರ್ಪಿಸಿ ಸನ್ಮಾನಿಸಿದ್ದಾರೆ.

ಕಾವ್ಯಾನಂದರ ಇತರ ಕೃತಿಗಳು : ರಜತರೇಖೆ (ಪ್ರಸಾರ ನಾಟಕಗಳು) ಶರಣ ಚರಿತಾಮೃತ (ಜೀವನ ಚರಿತ್ರೆ); ಭಾರತ ವೀರ (ಮೂರು ಅಂಕಗಳ ನಾಟಕ); ತ್ರಿಭುವನಮಲ್ಲ (ಐತಿಹಾಸಿಕ ಕಾದಂಬರಿ); ಸಿದ್ಧರಾಮ, ಹರ್ಡೇಕರ್ ಮಂಜಪ್ಪ, ಮಿರ್ಜಾ ಗಾಲಿಬ್ (ಜೀವನ ಚರಿತ್ರೆಗಳು); 'ಸುಬೋಧಸಾರ' ಸಂಪಿಧಾತ ಕೃತಿ; ಆತ್ಮಾರ್ಪಣ (ರಂಗ ನಾಟಕ); ವಚನ ನಂದನ, ವಚನ ರಾಮ—ವಚನಾಮೃತ ತುಂಬಿದ ಕೃತಿಗಳು.

ಮಗು ಮನಸ್ಸಿನ ಕಾವ್ಯಾನಂದರು ಶಿಶುಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಕೊಡುಗೆ ಅಮೂಲ್ಯವಾದದ್ದು, ಅನನ್ಯವಾದದ್ದು, ಅಪೂರ್ವವಾದದ್ದು, ಮುಖ್ಯ ಕೃತಿ ಗಳು : ತುಪ್ಪಾ ರೊಟ್ಟಿಗೇಗೇಗೇ; ಗಿಲ್‌ಗಿಲ್‌ಗಿಲಗಚ್ಚಿ; ತಿರುಗಲೆ ತಿರುಗಲೆ ತಿರುಗುಯ್ಯಾಲೆ; ಬಣ್ಣ ಬಣ್ಣದ ಓಕುಳಿ ಮುಂತಾದವುಗಳು. ಇವಲ್ಲದೆ ಇವರು ಅಪಾರ ಸಂಖ್ಯೆಯಲ್ಲಿ ಪತ್ರಿಕೆಗಳಲ್ಲಿ ಕವನಗಳನ್ನು ಪ್ರಕಟಿಸಿದ್ದಾರೆ.

ಪುರಾಣಿಕರ ಕೊಡಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲ. ಕನ್ನಡದ ಏಕೀಕರಣದ ಬಗ್ಗೆ ಹಾಗೂ

ಕನ್ನಡ ನಾಡು ನುಡಿಯ ಬಗ್ಗೆ ಮುಂಚಿನಿಂದಲೂ ಇವರಿಗೆ ಅಪಾರ ಆಸಕ್ತಿ. ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಕೆಗೆ ತರಲು ಇವರು ಅಹರ್ನಿಶಿ ಶ್ರಮಿಸಿದ್ದಾರೆ. ಏಕಾಂಗಿಯಾಗಿ ಹೋರಾಡಿದ್ದಾರೆ. ಸಂಘ ಕಟ್ಟಿ ಬೀದಿ ಗಿಳಿದು ಸೆಣ ಸಿದ್ದಾರೆ.

ಇವರಿಗೆ ಭಾರತ, ಕರ್ನಾಟಕ ಸಪ್ತಾಕ್ಷರ ಮಂತ್ರ ವಾಗಿತ್ತು; ಕನ್ನಡ–ಬಸವ ಇವರ ಷಡಕ್ಷರಿ ಮಂತ್ರ ವಾಗಿತ್ತು.

ಪುರಾಣಿಕರದು ಸುಸಂಸ್ಕೃತ ವಂಶ. ಕಾವ್ಯಪ್ರತಿಭೆ ವಂಶ. ಪಾರಂಪರ್ಯವಾಗಿ ಬಂದದ್ದು, ಇವರ ತಂದೆ ಕಲ್ಲಿನಾಥ ಶಾಸ್ತ್ರಿ, ಅಜ್ಜ ಚೆನ್ನಕವಿ 'ಶಿವಕವಿ' ಎಂದೇ ಖ್ಯಾತರಾಗಿದ್ದರು. ಇವರಲ್ಲಿದ್ದ ಸುಪ್ತ ಕಾವ್ಯಪ್ರತಿಭೆ ಸೂಕ್ತ ಕೌಟುಂಬಿಕ ಪರಿಸರದಲ್ಲಿ ಮೊಳಕೆಯೊಡೆಯಿತು. ಸಂಸ್ಕಾರ ಕಸಿಗೊಬ್ಬರ ಹಾಕಿ ಪೋಷಿಸಿತು. ಅಪೂರ್ವ ಕಾವ್ಯ ಪ್ರತಿಭೆ ಪಲ್ಲವಿಸಿತು.

**ಸ್ನೇಹಮಯಿ ಪುರಾಣಿಕರು :** ನನ್ನ ಪುರಾಣಿಕರ ಸ್ನೇಹ ಸುಮಾರು ಹದಿನೈದು ವರ್ಷಗಳಷ್ಟು ಹಳೆಯದು. ಆದರೆ ಇದು ಗಾಢವಾಗಿತ್ತು, ಆತ್ಮೀಯ ವಾಗಿತ್ತು. ನನ್ನ ಸಾಹಿತ್ಯ, ಕೃಷಿಯನ್ನು ಮೆಚ್ಚಿದ್ದ ಅವರು, ನನ್ನ ಮಕ್ಕಳೇ, ಇವರನ್ನು ನೀವು ಬಲ್ಲಿರಾ ? ಕೃತಿ ಓದಿ 'ಬಾಲಸಾಹಿತ್ಯಾಸಕ್ತರ ಕಣ್ಣು ತೆರೆಸ'ಬಲ್ಲ ಕೃತಿಯಿದು. ಎಂಥೆಂಥ ವಾಗ್ದೇವಿಯ ವರಪುತ್ರರು ನಮ್ಮ ಮಕ್ಕಳನ್ನು ಮರೆಯದೆ, ಅವರಿಗಾಗಿ ಮುತ್ತು ರತ್ನಗಳಂಥ ಕವಿತೆ, ಕಥೆ, ನಾಟಕಗಳನ್ನು ಬರೆದು ಹೋಗಿದ್ದಾರೆ. ಹಗಲೂ ಬರೆಯುತ್ತಿದ್ದಾರೆ. ಅವರೆಲ್ಲರ ಸಮೀಚೀನವಾದ ಪರಿಚಯ ಸುಕುಮಾರ ಶೈಲಿಯಲ್ಲಿ ಈ ಕೃತಿಯಲ್ಲಿ ಬಂದಿದೆ. ನಮ್ಮ ಮಕ್ಕಳಿಗೆ ಕಲ್ಲುಸಕ್ಕರೆ ಈ ರಸವತ್ಪರಿಚಯಗಳು' ಎಂದು ಅಭಿಪ್ರಾಯಪಟ್ಟಿರುವುದು ಅವರ ಸಹೃದಯತೆಯ ದರ್ಶನ ನೀಡುವುದಲ್ಲದೆ ಕೃತಿಯ ವಿಮರ್ಶೆಯೂ ಆಗಿದೆ. ನನ್ನ 'ಪ್ರೌಢಪ್ರತಾಪ ವೀರರಾಜೇಂದ್ರ' ಚಾರಿತ್ರಿಕ ಕಾದಂಬರಿಯನ್ನಂತೂ ಇವರು ಬಹುವಾಗಿ ಮೆಚ್ಚಿ ಇವಲ್ಲಾ ಹದಿನೆಂಟು ಕಾದಂಬರಿಗಳಿಗೆ ಚಾರಿನಿ ಕೃತಿಗಳೇಕಾಗಬಾರದಿತ್ತು ? ಎಂದು ತುಂಬುಹೃದಯ ದಿಂದ ಪ್ರಶಂಸಿದ್ದಾರೆ. ಈ ಹೃದಯ ವೈಶಾಲ್ಯತೆ ಎಷ್ಟು ಜನ ಸಾಹಿತಿಗಳಲ್ಲಿ ನಾವು ಕಾಣಲು ಸಾಧ್ಯ ? ಜಾತಿ ರಾಜಕೀಯ, ಗುಂಪುಗಾರಿಕೆಗಳಿಂದ ಕಲುಷಿತವಾಗುತ್ತಿರುವ ಇಂದಿನ ವಿಮರ್ಶಾಕ್ಷೇತ್ರದಲ್ಲಿ ಇಂಥಹ ನಿಷ್ಕಲ್ಮಷ ಹೃದಯದಿಂದ ಸ್ಪಷ್ಟ ಅಭಿಪ್ರಾಯ ಅಭಿವ್ಯಕ್ತಪಡಿಸುವ ಧಾರ್ಷ್ಟ್ಯ ಎಷ್ಟು ಜನರಲ್ಲಿದೆ ?

ಇವರು ಬಹುಭಾಷಾ ಪಂಡಿತರು. ಈ ಪಾಂಡಿತ್ಯದ ಪೂರ್ಣ ಲಾಭವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ರಚನಾ ವಿಭಾಗ ಪಡೆದಿದೆ. ಉರ್ದು, ಪರ್ಷಿಯನ್ ಭಾಷೆಯ ಯಾವುದೇ ಪದದ ನಿಷ್ಪತ್ತಿ ಅರ್ಥದ ಬಗ್ಗೆ ಅನುಮಾನ ಬಂದರೆ ಇದಕ್ಕೆ ಸದಾ ಪುರಾಣಿಕರು ಪರಿಹಾರ ಸೂಚಿಸುತ್ತಿದ್ದರು. ನಾನು ನಿಘಂಟು ಸಮಿತಿಯ ಸದಸ್ಯನಾಗಿದ್ದಾಗ ಇವರ ಭಾಷಾ ಪಾಂಡಿತ್ಯ ಹಾಗೂ ಬಹುಮುಖ ಪ್ರತಿಭೆಯ ದರ್ಶನವಾಗಿತ್ತು.

ಇದರ ಸೃಜನಶೀಲ ವ್ಯಕ್ತಿತ್ವದ ಒಂದು ಮುಖ ಮಕ್ಕಳ ಸಾಹಿತ್ಯ ರಚನೆ. ಈ ಲೇಖನದಲ್ಲಿ ನಾನು ಈ ಮುಖದ ದರ್ಶನ ಮಾಡಿಸಲು ಪ್ರಯತ್ನಿಸುತ್ತಿದ್ದೇನೆ.

ಮಕ್ಕಳೆಂದರೆ ಕಾವ್ಯಾನಂದರಿಗೆ ಅಪಾರ ಅಕ್ಕರೆ. ಮಕ್ಕಳೊಡನೆ ಆಡುವುದೆಂದರೆ ಇವರಿಗೆ ಎಲ್ಲಿಲ್ಲದ ಉತ್ಸಾಹ. ಮಕ್ಕಳ ಮಧ್ಯದಲ್ಲಿ ಇವರು ಮಕ್ಕಳೆ ಆಗಿಬಿಡುತ್ತಿದ್ದರು. ಈ ತಾದಾತ್ಮ್ಯತೆ ಇವರಲ್ಲಿದ್ದುದರಿಂದಲೇ ಮಕ್ಕಳ ಮನಸ್ಸನ್ನು ಇವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಈ ಅನಿಸಿಕೆಗಳ ಅಭಿವ್ಯಕ್ತ ರೂಪವೇ ಇವರ 'ಮಕ್ಕಳ ಸಾಹಿತ್ಯ' ಕೊಡುಗೆ.

'ಸಮಯ ಸ್ಫೂರ್ತಿ' ಪುರಾಣಿಕರ ಪ್ರತಿಭೆಯಲ್ಲಿನ ಒಂದು ದಿವ್ಯಾಂಶ, ಇದನ್ನು ಅವರ ಗಿಲ್ ಗಿಲ್ ಗಿಲಗಜ್ಜಿ ಪುಸ್ತಕದಲ್ಲಿನ 'ನನ್ನ ನಾಲ್ಕು ಮಾತು' ಪುಷ್ಟೀಕರಿಸುತ್ತದೆ.

'...1950 ಇರಬಹುದು. ಒಮ್ಮೆ ನನ್ನ ಕನ್ನಡ ಗುರುಗಳಾದ ಪ್ರೊ॥ ಡಿ. ಕೆ. ಭೀಮಸೇನರಾಯರ ಮನೆಗೆ ಹೋದಾಗ ಅವರು ಸತ್ಯಾಶ್ರಮ ಪಠ್ಯ ಪುಸ್ತಕ ಮಾಲೆಯನ್ನು ರೂಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ನನ್ನನ್ನು ನೋಡುತ್ತಲೇ 3 ನೇಯ, 4 ನೇಯ ತರಗತಿಯ ಪಠ್ಯ ಪುಸ್ತಕಗಳಿಗಾಗಿ ಎರಡು ಪದ್ಯಗಳು

ಬೇಕು. ಈಗಿಂದೀಗಲೇ ಬರೆದುಕೊಡು ಎಂದು ಕಾಗದ ಪೆನ್ನುಗಳನ್ನು ಮುಂದಿರಿಸಿದರು. ಅದಾವ ಅವ್ಯಕ್ತಗಳಿಗೆಯೋ 'ಅಜ್ಜನ ಕೋಲಿದು ನನ್ನಯ ಕುದುರೆ' ಎಂಬ ಕವಿತೆಯನ್ನು ಕರಡಿಯ ತಕತಕ ಕುಣಿಸುತ ಬಂದನು ಸಿದ್ದಿದ್ದಿ ಬಾಷಾ' ಎಂಬ ಕವಿತೆಗಳನ್ನೇ ಕೆಲವೇ ನಿಮಿಷಗಳಲ್ಲಿ ಬರೆದು ಒಪ್ಪಿಸಿದೆ. ಅವರಿಗೆ ಅತೀವ ಆನಂದವಾಯಿತು. 'ನೀನು ಮಕ್ಕಳ ಪದ್ಯಗಳನ್ನು ಸೊಗಸಾಗಿ ಬರೆಯುತ್ತಾ, ಬರೆಯುತ್ತಾ ಹೋಗು ಎಂದು ಹುರಿದುಂಬಿಸಿದರು.

ಮೇಲೆ ನಮೂದಿಸಿದ ಕವನಗಳ ಕೆಲ ಸಾಲುಗಳು :

'ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ
ಸಾಲನು ಬಡಿಸದ ಜೂಲವ ಹೊದಿಸದ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ....'

.... ...................... .............

'ಕರಡಿಯ ತಕತಕ ಕುಣಿಸುತ ಬಂದನು
ಸಿದ್ದಿದ್ದಿ ಬಾಭಾ ಬಾಲರ ಬಾಭಾ
ಬಾಭಾ ಬಾಭಾ ಬಾಲರ ಜೀವಾ
ಕರಡಿಯ ಕುಣಿಸುತ ಬಾಬಾ
ಊರಿನ ಹುಡುಗರ ಹಿಗ್ಗನು ಹೆಚ್ಚಿಸಿ
ಉಬ್ಬಿಸಿ ಹಾರಿಸಿ ಬಾಬಾ
ಬಾಬಾ ಬಾಬಾ ಚಾಲರ ಜೀವಾ........

......................................

ಮಗುವಿನ ಕಲ್ಪನೆ ಎಷ್ಟು ಅರ್ಥಗರ್ಭಿತವಾಗಿ ಮೂಡಿ ಬಂದಿದೆ ! ಅಲ್ಲವೇ ?

ಕನ್ನಡ ನಾಡಿನಲ್ಲಿ ಸರ್ವಮತ ಸಹಿಷ್ಣುತೆಯನ್ನು ಪ್ರತಿಪಾದಿಸುವ ಈ ಪದ್ಯ ನೋಡಿ, ಎಷ್ಟು ಅರ್ಥಪೂರ್ಣವಾಗಿದೆ.

'ಮನೆಯೊಳು, ಮಠದೊಳು, ಮಸೀದಿ ಚರ್ಚಿನೊಳು
ಕನ್ನಡಿಗರಾಗಿಯೇ ಬಾಳೋಣ
ಒಬ್ಬರೊಬ್ಬರು ಹೆಚ್ಚಿ ಉತ್ಸವದಿ
ಸೇರುತ ಹರುಷವ ತಾಳೋಣ....

ಈ 'ಗಿಲ್ ಗಿಲ್ ಗಿಲಗಚ್ಚಿ' ಸಂಕಲನದಲ್ಲಿ 'ನೀನು ನಕ್ಕು ಜಗವ ನಗಿಸು'; ಬಣ್ಣದಗಿರಿ; ಗೆಳೆಯರ ಊಟಕ್ಕೆ ಕರೆಯಮ್ಮ; ಮಜಾ ಅಂದ್ರೆ ಮಜಾ; ಏಳು ಕಂದ; ಕನ್ನಡಿಗರಾಗಿ ಬಾಳೋಣ, ಬಾಲಕರು ನಾವು ಮುಂತಾದ 15 ಕವನಗಳಿವೆ.

'ತುಪ್ಪಾ ರೊಟ್ಟಿ ಗೇ ಗೇ' ಸಂಕಲನದಿಂದ ಒಂದೆರಡು ಪದ್ಯ.

'ಕೊಡು ಖಡ್ಗವ ಕೈಗೆ ತಾಯೆ
ಕೊಡು ಕೋವಿಯ ಕೈಗೆ
ತೋರಿಸುವೆನು ನನ್ನಯ ಕೈ
ಆ ಚೌ ಎನ್ ಲೈಗೆ
ಕೊಡು ಖಡ್ಗವ ಕೈಗೆ

..................................

ಹುರಿದುಂಬಿಸುವ ಈ ಮಾತುಗಳಿಂದ ಮೈ ನವಿರೇಳದ ಬಾಲಕರಾರು ? ಅಜ್ಜನ ಕೋಲನ್ನು ಕುದುರೆಯನ್ನಾಗಿ ಮಾಡಿಕೊಂಡ ಬಾಲಕ ಸ್ವದೇಶ, ಪರದೇಶಗಳಲ್ಲಿನ ಕುದುರೆಗಳ ಪರಿಚಯ ಮಾಡುವ ವೈಖರಿ ನೋಡಿ.

'ಅರಬರ ದೇಶದಿ ದೊರೆಯುವ ಕುದುರೆ
ಕಾಠೇವಾಡದಿ ಕಾಣುವ ಕುದುರೆ
ಅರಸು ಮಕ್ಕಳಿಗೂ ಸಿಗದ ಕುದುರೆ
ನನಗೇ ಸಿಕ್ಕಿದೆ ನನ್ನೀ ಕುದುರೆ
........................................'

ಈ ಕವನ ಸಂಗ್ರಹದಲ್ಲಿ ಕೊಡು ಖಡ್ಗವ ಕೈಗೆ, ನನ್ನ ಕುದುರೆ ಸರಪಳಿ, ಬಾಲಕನ ಬಯಕೆ, ಅ, ಆ, ಇ, ಈ ಗೀತೆ, ಮಂಗತನ, ತುಪ್ಪಾ ರೊಟ್ಟಿಗೇಗೇ ಇವರ ಬಿಟ್ಟು ಇವರಾರು, ಕತ್ತೆಯೇ ಗತ್ತು, ಕೊನೆಗೆ ವಿಪತ್ತು ಮುಂತಾದ 20 ಕವನಗಳಿವೆ.

'ತಿರುಗತಿ ತಿರುಗತಿ ತಿರುಗುಯ್ಯಾಲೆ' ಕವನ ಸಂಗ್ರಹದಲ್ಲಿ ಏನಾದರೂ ಕೊಡಿಸಪ್ಪ, ಕಲಿಸಲಿ ಕನ್ನಡ, ?; ಕಾಡಿನದೀಪ, ತಾಯಿ, ಹೊತ್ತಿಲ್ಲ, ನನ್ನ ಭಂಡಾರ, ಭರತ ಭೂಮಿ, ಕರುನಾಡು, ಪಾಪ ಮುಂತಾದ 14 ಕವನಗಳಿವೆ.

ಇವರಲ್ಲಿನ ಕವನಗಳಿಗೆ ಒಂದೆರಡು ನಮೂನೆಗಳು

ಅಪ್ಪಾ, ಅಪ್ಪಾ ಏನುಬೇಕು
ಏನಪ್ಪ ? ಹೇಳಪ್ಪ
ಏನಾಪರೂ ಹೊರತು ಮಾಡಿ
ಕೊಡಿಸಪ್ಪ ಹೋಳಿಗೆ ತುಪ್ಪ

ತಿರುಗಲೆ ತಿರುಗಲೆ ಕುಳಿತಿಹ ನಾನು
ತಿರುಗುಯ್ಯಾಲೆ ಕುದುರೆಯ ಮೇಲೆ
ಆಡುತ ನೀನೂ ತಂಗಿ ಶಾರದೆಯ
ಅಪ್ಪಾಲೆ ನವಿಲಿನ ಮೇಲೆ
ತಿಪ್ಪಾಲೆ ತಮ್ಮಂದಿರಿಬ್ಬರು
ತೊಟ್ಟಿಲದೊಳಗೆ

ನಮ್ಮಯ ಶಾಲೆಯ ವಾರ್ಷಿಕೋತ್ಸವ
ದೊಡ್ಡ ದೊಡ್ಡವರು ಬರಲಿಹರು
ಅಧ್ಯಕ್ಷರು ಉದ್ಘಾಟಕರಾಗಿ

ಶಾಲೆಯ ಖ್ಯಾತಿಯ ತರಲಿಹರು
ನಾನೂ ಭಾಗವಹಿಸಿಹೆ ನಮ್ಮ
ಆಟಪಾಟದಲಿ ಓಟದಲಿ

ನೀ ಮುಂದಿದ್ದರೆ ಸೋಲೇ ಇಲ್ಲ
ನಿನ್ನ ಮಗನಿಗೆ ಜಗದಲ್ಲಿ
ನೋಡುವಿಯಂತೆ ನನ್ನ ಹೆಸರನೇ
ಎಲ್ಲ ಕಡೆಗೆ ಈ ಯುಗದಲ್ಲಿ

ಪತ್ರಿಕೆಯೊಂದರಲ್ಲಿ ಪ್ರಕಟಗೊಂಡಿದ್ದ ಕವಿತೆ "ಮಕ್ಕಳ ಹಕ್ಕು".

ಎಲ್ಲರ ಅಕ್ಕರೆ
ಒಲವಿನ ಸಕ್ಕರೆ
ಇವು ಮಕ್ಕಳ ಹಕ್ಕು
ಎಲ್ಲರ ಕಾಳಜಿ
ಎಲ್ಲರ ಮುಲಾಜಿ
ಇವು ಮಕ್ಕಳ ಹಕ್ಕು
ಪ್ರೀತಿಯ ಕವಚ
ನೀತಿಯ ಕುಂಡಲ
ಇವು ಮಕ್ಕಳ ಹಕ್ಕು

ಕಾವ್ಯಾನಂದರು ಮಕ್ಕಳಿಗೆಂದರೆ ಬಾಲಭಾರತಿ ಮಾಸ ಪತ್ರಿಕೆಯಲ್ಲಿ ಶುಕವನ, ಸಮುದ್ರ ಲೋಕ, ವಾಲ್ಟ್ ಡಿಸ್ನಿ ಲೋಕ, ಕಾಡುಮನೆ ಮೊದಲಾದ ಸ್ವಾರಸ್ಯ ಪೂರ್ಣ ಪರಿಚಯ ಲೇಖನಗಳನ್ನು ಬರೆದಿದ್ದಾರೆ.

'ನ್ಯಾಯ ನಿರ್ಣಯ' ಇವರು ಮಕ್ಕಳಿಗಾಗಿಯೇ ರಚಿಸಿರುವ ನಾಟಕ. "ತುಷಾರ ಹಾರ" ಕಿರುಗತೆಗಳ ಸಂಕಲನ. ಇದು ಹಿಂದಿಗೂ ಅನುವಾದಗೊಂಡಿದೆ. ಇದರಲ್ಲಿ 22 ಕಥೆಗಳಿವೆ. ಮಾಡುವವರು ಬೇಡುವವರಲ್ಲಿ, ಕೆಸರಿನಲ್ಲಿ ಲಕ್ಷ್ಮಿ, ನೆರೆಯರನ್ನು ಜರಿಯಬೇಡ. ಕಿರಿಯರ ಹಿರಿಮೆ, ಬೇಗ ಬೇಡ, ಬಾಗಿ ನಡೆ, ಕಲೆಯ ನೆಲೆ, ಒಂದು ನೀಡು ಇತ್ಯಾದಿ.

ಈ ಕಥೆಗಳಲ್ಲಿ ಎಳೆಯರಿಗೆ ನೀತಿ ನಿರೂಪಿಸಿದ್ದಾರೆ. ಕರ್ತವ್ಯ ನಿಷ್ಠೆಯ ಅಗತ್ಯವನ್ನು ಬೋಧಿಸಿದ್ದಾರೆ.

ಡಾ॥ ಸಿದ್ಧಯ್ಯ ಪುರಾಣಿಕರು ಜನಿಸಿದ್ದು ರಾಯಚೂರು ಜಿಲ್ಲೆಯ ಯೆಲಬುರುಗಿ ತಾಲ್ಲೂಕಿನ "ದ್ಯಾಂಪುರ"ದಲ್ಲಿ ದಿನಾಂಕ ಜೂನ್ 18, 1918 ತಂದೆ : ಕಲ್ಲಿನಾಥಶಾಸ್ತ್ರಿ, ತಾಯಿ : ದಾನಮ್ಮ, ಮರಣಿಸಿದ್ದು ಸೆಪ್ಟೆಂಬರ್ 4, 1994.

ಕಾವ್ಯಾನಂದ ಮರಣದಿಂದಾಗಿ ಕನ್ನಡ ಸಾರಸ್ವತ ಲೋಕಕ್ಕೆ ಅವರಿಲ್ಲದ ಮುಖ್ಯವಾಗಿ ಮಕ್ಕಳ ಸಾಹಿತ್ಯ ವಿಭಾಗಕ್ಕೆ ಅಪಾರ ನಷ್ಟವಾಗಿದೆ.

ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯ ಕಡೆಗಣಿಸಲ್ಪಟ್ಟಿರುವುದು ವಿಷಾದನೀಯ. ಭದ್ರ ಸೈದ್ಧಾಂತಿಕ ಬುನಾದಿಯ ಮೇಲೆ ಭವ್ಯ ರಾಷ್ಟ್ರ ನಿರ್ಮಾಣಗೊಳ್ಳಬೇಕಾದರೆ ಮಕ್ಕಳ ಮಾನಸಿಕ ವಿಕಾಸಕ್ಕೆ ಆದ್ಯತೆ ನೀಡಬೇಕು. ಸದೃಢ ದೇಹದಲ್ಲಿ ನಿಷ್ಕಲ್ಮಷ ವಿಚಾರಧಾರೆ ಪ್ರದರ್ಶಿಸಲು ಸೂಕ್ತ ಪರಿಸರ ನಿರ್ಮಾಣಗೊಳ್ಳಬೇಕು. ಈ ಪ್ರವಾಹಕ್ಕೆ ಓಘ ಕೊಡಲು ಮಿತಿ ದಿಬ್ಬ ನಿರ್ಮಿಸುವುದೂ ಅನಿವಾರ್ಯ. ಆಂಧ್ರ ಪ್ರದೇಶ ಮುಂತಾದೆಡೆ ಇರುವಂತೆ ಈ ಮಕ್ಕಳ ಸಾಹಿತ್ಯ ಅಭ್ಯುದಯಕ್ಕಾಗಿ ಪ್ರತ್ಯೇಕ ಅಕಾಡೆಮಿಯಲ್ಲಿ ಇದಕ್ಕೆ ಪ್ರತ್ಯೇಕ ವಿಭಾಗ ಕಲ್ಪಿಸಿ ಕೊಡುವುದು ಅತ್ಯಗತ್ಯವಾಗಿದೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಆದ್ದರಿಂದ ಅವರ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಸೂಕ್ತ ಪರಿಸರ ನಿರ್ಮಾಣ, ವಿಕಾಸಕ್ಕೆ ಪ್ರೋತ್ಸಾಹ ಅತ್ಯಗತ್ಯವೆಂಬುದನ್ನು ಸರ್ಕಾರ ಶೈಕ್ಷಣ ಸಂಸ್ಥೆಗಳು ಹಾಗೂ ಪೋಷಕರು ಅರಿತು ಕಾರ್ಯಮಗ್ನರಾದಾಗಲೇ ಪುರಾಣಿಕರಿಗೆ ಆತ್ಮಕ್ಕೆ ಶಾಂತಿ ಲಭಿಸಿತು.

# ದ. ರಾ. ಬೇಂದ್ರೆ - ನೀ ಪೂಜಿತನಾದೆ ಅನುಗಾಲ

ಧಾರ್ವಾಡ ಕವಿವರ
ದ. ರಾ. ಬೇಂದ್ರೆ
ಕನ್ನಡ ನಾಡಿಗರ
ಅಭಿಮಾನಾಂದ್ರೆ–

ಮೊಲೆಯುಂಡ ಮರಿ ಜಿಂಕೆ
ತಾಯ್ ಸುತ್ತ ಜಿಗಿದಾಂಗ
ಜಿಗಿದೆವು ಸಂತಸದಿ ನಿನ್ನ ಬಳಸಿ

ಸಂಗಾತಿ ಸೆಳೆ ಬಯಸಿ
ನವಿಲೊಂದು ಕುಣಿದಾಂಗ
ಕುಣಿದೆವು ನಾವಂದು ನಿನ್ನ ಮೆರೆಸಿ

ತಾಳಿಲ್ಲ, ತಂತಿಲ್ಲ
ರಾಗದಾ ಚಿಂತಿಲ್ಲ
ನೀ ಹಾಡೆ ಗುಯ್ ಗುಯ್ ಗಾನ
ಬಲಗೈ ಬೆರಳಿನಾ ತಾನ
ನುಡಿಸುತ್ತ ಹೃದಯ ವೀಣಾ

ತೂಗುತಿರೆ ತಲೆಯು ಅತ್ತಿಂದಿತ್ತ
ಇಳಿಬಿದ್ದ ಕುರುಳು ಹೊರಳುತ್ತ
ಬೆನ್ನೇರಿ ಬಂತು ಭಾವಾವೇಶ
ಮನ ತುಂಬಿದಾಗ ಹರ್ಷೋಲ್ಲಾಸ

‘ನಾಕುತಂತಿ’ ಮೀಂಟಿ ನಿನ್ನಲ್ಲಿ ನೀನೇ
ಅದು ನಮ್ಮ ನಾಂಟಿ ನಮ್ಮಲ್ಲಿ ನಾವೇ
ಮೈಮರೆತು ಬಿಟ್ಟೆವು ಕ್ಷಣಕಾಲ
ನೀ ಪೂಜಿತನಾದೆ ಅನುಗಾಲ

–ಎಂ. ಕೆ. ತಿಮ್ಮೇಶ್ ಪ್ರಭು
ವಕೀಲರು, ಬೆಂಗಳೂರು

# ನನ್ನ ಅಪ್ಪಾಜಿ

ಲೇಖಕಿ : ಶ್ರೀಮತಿ ವಿಜಯಾ ನಂದೀಶ್ವರ್

ಸುಮಾರು ಹತ್ತು ವರ್ಷಗಳ ಹಿಂದಿನ ವಿಷಯ, ಅಪ್ಪಾಜಿಯವರು ಬೆಳಗಾಂ ಜಿಲ್ಲಾಧಿಕಾರಿಗಳಾಗಿದ್ದು ನಾವು ಸೌದತ್ತಿಯಿಂದ ಬೆಂಗಳೂರಿಗೆ ವರ್ಗವಾಗಿ ಬಂದಿದ್ದೆವು, ರಾಜಾಜಿ ನಗರದಲ್ಲಿ ಮನೆ ಮಾಡಿದ್ದೆವು. ಪಕ್ಕದ ಮನೆಯಲ್ಲಿ ಬೆಳಗಾಂಕರ ಕುಟುಂಬ ವಾಸವಾಗಿ ದ್ದರು. ಬಂದ ಹೊಸದರಲ್ಲಿಯೇ ಅವರ ಪರಿಚಯ ವಾಗಿತ್ತು. ಬೆಳಗಾಂಕರ ತಂಗಿ ಊರಿನಿಂದ ಬಂದಿದ್ದರು. ಅವರಿಗೆ ಶ್ರೀಮತಿ ಬೆಳಗಾಂಕರವರು ಸಿದ್ದಯ್ಯ ಪುರಾಣಿಕರ ಮಗಳು ನಮ್ಮ ಪಕ್ಕದ ಮನೆಗೆ ಬಂದಿದ್ದಾರೆಂದು ತಿಳಿಸಿದರು. ಅದಕ್ಕೆ ಬೆಳಗಾಂಕರ ತಂಗಿ ಲೀಲಾ "ವೈನಿ ಬೆಳಗಾಂ ಜಿಲ್ಲಾಧಿಕಾರಿಯಾಗಿರುವ ಸಿದ್ದಯ್ಯ ಪುರಾಣಿಕರ ಮಗಳೋ ಅಥವಾ ಸಾಹಿತಿ ಸಿದ್ದಯ್ಯ ಪುರಾಣಿಕರ ಮಗಳೋ" ಎಂದು ಕೇಳಿದರು. ಇಬ್ಬರೂ ಒಬ್ಬರೇ ಎಂದು ಶ್ರೀಮತಿ ಬೆಳಗಾಂಕರು ಎಷ್ಟು ವಿವರಿಸಿದರೂ ಲೀಲಾ ನಂಬಲಿಲ್ಲ. ಅವರಿಬ್ಬರೂ ತಮ್ಮ ವಾದ ಸಮೇತ ನಮ್ಮ ಮನೆಗೆ ಬಂದರು. ಆಡಳಿತ ರಂಗದಲ್ಲಿ ಮತ್ತು ಸಾಹಿತ್ಯ ರಂಗದಲ್ಲಿ ಏಕ ಪ್ರಕಾರವಾಗಿ ಪ್ರಸಿದ್ಧ ವಾಗಿರುವ ವ್ಯಕ್ತಿ ಒಬ್ಬರೇ ಎಂದು ಲೀಲಾರವರಿಗೆ ಅರಿವಾದಾಗ ಆಶ್ಚರ್ಯಚಕಿತರಾಗಿ ನನ್ನನ್ನು ನೋಡಿದಾಗ ನನ್ನ ಹೆಮ್ಮೆಗೆ ಎಣೆಯುಂಟೆ ? ಜೀವನದಲ್ಲಿ ಒಂದು ಸಿದ್ಧಿಯನ್ನೇ ಸಾಧಿಸುವದೇ ಅಪರೂಪವಾಗಿರುವಾಗ ಎರಡರಲ್ಲಿಯೂ ತಮ್ಮ ಹಿರಿಮೆಯನ್ನು ತೋರಿ ತಮ್ಮ ಹೆಸರನ್ನು ಸಾರ್ಥಕಪಡಿಸಿರುವ ಅಪ್ಪಾಜಿಯವರನ್ನು ನೆನದಾಗಲೆಲ್ಲಾ ನನ್ನ ಹೃದಯ ತುಂಬಿ ಬರುತ್ತದೆ.

ಅವರ ಅಧಿಕಾರ ಅವಧಿಯಲ್ಲಿ ಎಷ್ಟು ಇಲಾಖೆಗಳಲ್ಲಿ ಕೆಲಸ ಮಾಡಿದ್ದಾರೆಂದರೆ ಬರೆಯುತ್ತಾ ಹೋದರೆ ಒಂದು ದೀರ್ಘ ವರದಿಯೇ ಆಗುತ್ತದೆ. ಯಾವ ಇಲಾಖೆಗೇ ಹೋಗಲಿ ಆ ಇಲಾಖೆಯ ಬಗ್ಗೆ ಇರುವ ಮಾಹಿತಿಯನ್ನೆಲ್ಲಾ ಅರಿತುಕೊಂಡೇ ಕೆಲಸ ಪ್ರಾರಂಭಿಸುತ್ತಿದ್ದರು. ಜನರಿಗೆ ಅದರಲ್ಲಿಯೂ ಬಡವರಿಗೆ ಸಾಧ್ಯವಾದಷ್ಟು ಉಪಯೋಗವಾಗುವಂತಹ ಕೆಲಸಗಳಿಗೇ ಮೊದಲು ಆದ್ಯತೆ ನೀಡುತ್ತಿದ್ದರು. ಕಾಯಕವೇ ಅವರ ಜೀವನದ ಉಸಿರಾಗಿದ್ದಿತು. ನಾನು ಕಾಲೇಜಿನಲ್ಲಿದ್ದಾಗ ಅಪ್ಪಾಜಿ ನೆನಪಿದೆ ಯಾರದೋ ಮುಂದೆ ತಮಾಷೆಯಾಗಿ ಹೇಳುತ್ತಿದ್ದರು. "ನಾನು ಒಂದು ಪೊರಿಕೆ ಇದ್ದಂತೆ. ಯಾವ ಇಲಾಖೆಗೆ ಹೋಗಲಿ ಅಲ್ಲಿರುವ ಕೆಲಸವನ್ನೆಲ್ಲಾ ಶುದ್ಧಿ ಮಾಡುವುದೇ ನನ್ನ ಕಾಯಕವೆಂದು ನಂಬಿ ಕೆಲಸ ಪ್ರಾರಂಭ ಮಾಡುತ್ತೇನೆ" ಆ ಮಾತು ಕೇಳಿದಾಗ ಅಪ್ಪಾಜಿ ಒಂದು ರಪ್ಪಿ ಕಾಗದ ಸಿಕ್ಕರೂ ಓದದೇ ಬಿಡಳು ಎಂದು ನನ್ನನ್ನು ರೇಗಿಸುತ್ತಿದ್ದರು.

ಯಾಕೆ ಹಾಗೆ ಮಾತನಾಡಿದರು ಎಂದು ಹುಡುಗುತನದ ಬುದ್ಧಿಗೆ ವಿಚಿತ್ರವೆನಿಸಿತ್ತು. ಆದರೆ ಈಗ ಜೀವನದ ಅನುಭವಗಳಿಂದ ಬುದ್ಧಿ ಪಕ್ವವಾಗುತ್ತಿರುವ ಸಮಯದಲ್ಲಿ ಎಷ್ಟು ದೊಡ್ಡ ಮಾತನ್ನು ಎಂಥಹ ಉದಾತ್ತ ಧ್ಯೇಯವನ್ನು ಎಂಥಹ ಸುಲಭ ಶಬ್ಧಗಳಲ್ಲಿ ಹೇಳಿದ್ದರೆಂದು ಯೋಚಿಸುತ್ತೇನೆ. ಅವರ ವಚನಗಳಲ್ಲಿಯೂ ಇದೇ ತತ್ವವನ್ನು ಅಳವಡಿಸಿಕೊಂಡಿದ್ದನ್ನು ಕಾಣಬಹುದು.

ಸಾಹಿತಿಯ ಮಗಳಾಗಿರುವುದರಿಂದ ಮೊದಲಿನಿಂದಲೂ ನನಗೆ ಪುಸ್ತಕಗಳಲ್ಲಿ ಅಭಿರುಚಿ. ಆಗಾಗ ಮನೆಯಲ್ಲಿ ನಡೆಯುವ ಕವಿಗಳ ಮೇಳ, ಸಾಹಿತಿಗಳ ಆಗಮನ, ವಿಶಾಲವಾದ ಪುಸ್ತಕ ಭಂಡಾರದಿಂದ ಎಷ್ಟು ಆಕರ್ಷಿತಳಾಗಿದ್ದೆನೆಂದರೆ ಯಾವಾಗಲೂ ನಾನು ಯಾವಾಗ ಅವರಂತೆ ಸಾಹಿತಿಯಾಗುವೆನೋ ಎಂದು

ಯೋಚಿಸುತ್ತಿದ್ದೆ. ಅವರು ನಿಸರ್ಗ ಪ್ರಿಯರು. ನಿಸರ್ಗದಾ ಚೆಲುವು ಎಷ್ಟು ನೋಡಿದರೂ ತೃಪ್ತಿಯಿಲ್ಲ ದೇವರದಯದಿಂದ ಕೇವಲ ಭಾರತವನ್ನೇ ಅಲ್ಲ ಪಾಶ್ಚಾತ್ಯ ದೇಶಗಳನ್ನೆಲ್ಲಾ ಸುತ್ತಿ ಬಂದಿದ್ದಾರೆ. ಆದರೆ ಈಗಲೂ ಯಾವಾಗಲಾದರೂ ಪ್ರವಾಸದಲ್ಲಿ ಒಂದು ಪಕ್ಷಿಯನ್ನೇ ನೋಡಲಿ, ಒಂದು ದೃಶ್ಯವನ್ನೇ ನೋಡಲಿ ಎಲ್ಲವನ್ನು ಮರೆತು ಕಾರು ನಿಲ್ಲಿಸಿ ನೋಡುತ್ತ ನಿಂತುಬಿಡುತ್ತಾರೆ. ನಿಸರ್ಗದ ಚೆಲುವು ಕೇವಲ ಕಣ್ಣಿಗೆ ಇಂಪು, ಮನಕೆ ತಂಪು ನೀಡುವ ವಸ್ತುವಾಗಿಲ್ಲ. ಅವರಿಗೆ ನಿಸರ್ಗ ಪೂಜೆಯನ್ನು ಮನಃಪೂರ್ವಕವಾಗಿ ಮಾಡುತ್ತಾ ಬಂದಿದ್ದಾರೆ. ಅವರೊಡನೆ ಪ್ರವಾಸ ಮಾಡುವ ಯೋಗ ಸಾಮಾನ್ಯವಾದುದಲ್ಲ. ಅದೊಂದು ರಸಾನುಭವ, ದಾರಿಯಲ್ಲಿ ದೃಶ್ಯಗಳ ವರ್ಣನೆ. ಆಗಾಗ ಯಾವುದಾದರೂ ವಿಷಯದ ಬಗ್ಗೆ ದೀರ್ಘವಾದ ಚರ್ಚೆ ಅದೂ ಸಾಕಾದರೆ ಅಪ್ಪಾಜಿಯ ಗಾಯನ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಅವರಿಗೆ ಸಂಗೀತದ ಬಗ್ಗೆ ತುಂಬ ಅಭಿರುಚಿ ಇದೆ. ಅವರು ಹಾಡುವುದನ್ನು ನೀವು ಯಾರಾದರೂ ಕೇಳಿದ್ದೀರಾ ? ನಾವೆಲ್ಲ ಕೇಳಿ ಆನಂದಿಸಿದ್ದೇವೆ. ಅವರೊಡನೆ ನಾವೂ ಹಾಡಿ ನಲಿದಿದ್ದೇವೆ. ಅಪ್ಪಾಜಿಯವರು ಹಿರಿಯ ಅಧಿಕಾರಿಗಳಾದ ಕಾರಣ ಕಾರ್ಯ ಬಾಹುಳ್ಯದಿಂದ ಅವರು ನಮ್ಮ ಕೈಗೆ ಸಿಗುವುದೇ ಅಪರೂಪ. ಆದುದರಿಂದ ಪ್ರವಾಸ ಮಾಡುವಾಗ ಅವರೊಡನೆ ಕಳೆಯುವ ಒಂದೊಂದು ಮಧುರ ಕ್ಷಣವೂ ಒಂದೊಂದು ಸವಿ ನೆನಪು ನಮಗೆ. ಉರ್ದು ಕವಿಗಳಾದ ಹಮೀದ ಅಲ್ಮಾನ್‌ರವರು ಒಂದೆರಡು ಸಾರಿ ನಮ್ಮೊಡನೆ ಪ್ರವಾಸ ಮಾಡಿದ್ದರು. ಪ್ರವಾಸ ಮಾಡುವಾಗ ತಂದೆ ಮಕ್ಕಳು ಮಾಡುವ ಚರ್ಚೆ ತುಂಬಾ ಚೆನ್ನಾಗಿರುತ್ತದೆ. ದಾರಿ ಸವೆದ ಅನುಭವವೇ ಆಗುವುದಿಲ್ಲವೆಂದು ಹೇಳಿದರು.

ಅವರಿಗೆ ಯಾವಾಗ ಬರೆಯಲು ಸ್ಫೂರ್ತಿ ಬರುವುದೋ, ಯಾವಾಗ ಬರೆಯಲು ತೊಡಗುವರೋ ಎಂಬುದು ಹೇಳುವದು ಕಷ್ಟ. ಬೆಳಗಿನಿಂದ ರಾತ್ರಿಯವರೆಗೆ ಬಿಡುವಿಲ್ಲದಷ್ಟು ಕೆಲಸ ಕಾರ್ಯ ರಾತ್ರಿ ಮನೆಗೆ ಬರುವಾಗ ಫೈಲುಗಳ ಸಮೇತ ಬರುವರು. ಆದರೆ ಕವಿಯ ಹೃದಯದ ತುಡಿತ ಸುಮ್ಮನಿರುವದೇ ನಾನು ತುಂಬ ಚಿಕ್ಕವಳಿದ್ದೆ. ಹೈದರಾಬಾದಿನಲ್ಲಿದ್ದೆವು ಬಹುಶಃ ಎರಡನೆಯ ಕ್ಲಾಸಿನಲ್ಲಿದ್ದೆ ಆಗತಾನೇ ಅಪ್ಪಾಜಿ, ಅಮ್ಮ ಕಾಶ್ಮೀರದಿಂದ ಹಿಂದಿರುಗಿದ್ದರು. ನಾವೆಲ್ಲರೂ ಭಾನುವಾರದ ದಿನ ಬಾಗ ಎಲ್ಲಮ ತೋಟಕ್ಕೆ ಊಟ ಕಟ್ಟಿಕೊಂಡು ಹೋಗಿದ್ದೆವು. ಊಟ ಮುಗಿಸಿ ನಾವೆಲ್ಲ ತೋಟ ಸುತ್ತಾಡಲು ಹೋದೆವು. ಅವರು ಮಾತ್ರ ಯಾವುದೋ ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ನಾವೆಲ್ಲ ಮರಳಿ ಬಂದಾಗ ಅವರ ಕೈಯ್ಯಲ್ಲಿ ಒಂದು ಕಾಗದವಿತ್ತು. ಬಂದ ತಕ್ಷಣ ಒಂದು ಹೊಸ ಕವನದ ಜನನವಾದದ್ದು ತಿಳಿಯಿತು. ಕಾಶ್ಮೀರದ ಸೃಷ್ಟಿ ಸೌಂದರ್ಯದ ಬಗ್ಗೆ ಬರೆದಿದ್ದರು. ಅದೇ "ಕಾಶ್ಮೀರದಲ್ಲಿ ಕಾರ್ಗಾಲ" ಕವನ. ಅವರು ಓದುತ್ತಾ ಹೋದಂತೆ ಕಾಶ್ಮೀರ ಸೃಷ್ಟಿ ಸೌಂದರ್ಯತೇ ಪದಗಳ ಲಾಲಿತ್ಯಕ್ಕೋ ಅಥವಾ ಕವನದ ಭವ್ಯತೆಗೋ ನಾನು ಮುಗ್ಧಳಾಗಿ ಕೇಳುತ್ತ ಕುಳಿತಿದ್ದೆ. ಪ್ರತಿಯೊಂದು ಶಬ್ಧವು ನನ್ನ ಹೃದಯದ ಆಳಕ್ಕೆ ಇಳಿಯುತ್ತಿದ್ದಂತೆ ನಾನೂ ಒಂದು ಸಾರಿ ಕಾಶ್ಮೀರ ನೋಡಲೇಬೇಕೆಂಬ ದೃಢ ನಿರ್ಧಾರ ಮಾಡಿದ್ದೆ. ನಾನು ಮದುವೆಯಾದ ಮೇಲೆ ನಮ್ಮ ಯಜಮಾನರ ಜೊತೆ ಕಾಶ್ಮೀರಕ್ಕೆ ಹೋದಾಗ ಅಲ್ಲಿಯ ಪ್ರತಿಯೊಂದು ಸ್ಥಳ ಚಿರಪರಿಚಿತವೆನಿಸುತ್ತಿತ್ತು. ಆ ಸ್ಥಳಕ್ಕೆ ಹೋದಾಗ ಅದರ ಬಗ್ಗೆ ಆ ಕವನದ ಸಾಲುಗಳು ನೆನಪಾಗುತ್ತಿದ್ದವು. ಉದಾಹರಣಾರ್ಥವಾಗಿ ಬಿನಿಹಾಲರಂಗ ಬಂದಾಗ ಬಿನಿಹಾಲ ಶಿಖರ ನಿಂತಿಹುದು ಹರನ ಜಡೆಯ ಗಂಟಿನಂತೆ ಸುತ್ತುತ್ತ ಮೇಲಕ್ಕೇರಿರುವ ಕಾರಿ ಸುತ್ತಿರುವ ಸರ್ಪದಂತೆ ಅಥವಾ ಹರವನಕ್ಕೆ ಹೋದಾಗ "ಹರವನದಿ ಬಳ್ಳಿ ತಳ್ಳಂಕಗೊಳ್ಳೆ ಫಲವೃಷ್ಟಿಗಳನ್ನು ತಬ್ಬಿ" ಮುಂತಾದವು. ಕಾಶ್ಮೀರ ನೋಡುತ್ತಿದ್ದಂತೆ ನಾನು ಕವನದ ಮೂಲಕ ಕಂಡ ಕಾಶ್ಮೀರವೇ ಸುಂದರವಾಗಿತ್ತು ಎನಿಸಿತು. ರವಿ ಕಾಣದ್ದನ್ನು ಕವಿ ಕಂಡ ಎಂಬಂತೆ ಬಹುಶಃ ನಿಸರ್ಗ ಸೃಷ್ಟಿಸದೇ ಬಿಟ್ಟದ್ದನ್ನು ಕವಿ ಸೃಷ್ಟಿಸುವನೋ ಎಂದೆನಿಸಿತು. ಅಪ್ಪಾಜಿಯವರು ಎಂತಹ ಪ್ರಸಂಗ ಬಂದರೂ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳುವುದಿಲ್ಲ. ಅದರ ಜೀವನದಲ್ಲಿ ಎಂಥಹ ದುರ್ಭರ ಪ್ರಸಂಗಗಳು ಜರುಗಿದೆಯೋ ಆ ದೇವರೇ ಬಲ್ಲ. ರಜಕಾರ ಹಾವಳಿ, ಆಫೀಸಿನಲ್ಲಿ ಜರಗುವ ಕಹಿ ಪ್ರಸಂಗಗಳು, ಅಪ್ತರು ಮಾಡಿದ ದ್ರೋಹಗಳು ಅವರಿಗೆ ಭಡ್ತಿ ದೊರೆಯದಂತೆ ಮಾಡುವ ಕಿತಾಪತಿಗಳು ಅನಾರೋಗ್ಯ

ದಿಂದ ಹಲವಾರು ಸಾರಿ ಆಸ್ಪತ್ರೆಯಲ್ಲಿರಬೇಕಾಗಿ ಬಂದ ಪ್ರಸಂಗಗಳು ಒಂದೇ ಎರಡೇ ? ಎಲ್ಲವನ್ನು ವಿಷತ ನಂತೆ ನುಂಗಿ ನಮಗೆಲ್ಲ ಅಮೃತವನ್ನೇ ಉಣಿಸಿದ್ದಾರೆ. ಜೀವನದಲ್ಲಿ ಸಿಗಬಹುದಾದ ಸುಖ, ಸೌಲಭ್ಯಗಳು, ಅನುಕೂಲತೆಗಳನ್ನೆಲ್ಲಾ ನಮಗೆ ಒದಗಿಸಿದ್ದಾರೆ. ಕಷ್ಟದ ಅರಿವಿಲ್ಲದಂತೆ ನಾವೆಲ್ಲ ಬೆಳೆದಿದ್ದೇ. ಒಳ್ಳೆಯ ತಂದೆಯಾದಂತೆ ಒಳ್ಳೆ ಗಂಡನಾಗಿದ್ದಾರೆ. ಅದು ಸಿಟ್ಟಿಗೆದ್ದಾಗಲೆಲ್ಲಾ ತಮ್ಮ ಹಾಸ್ಯದಿಂದ ಶಾಂತ ಮಾಡುತ್ತ ಬಂದಿದ್ದಾರೆ. ಒಂದುಸಾರಿ ಅಮ್ಮ ಯಾವುದೋ ವಿಷಯಕ್ಕೆ ನಾನು ಆ ಕೆಲಸವನ್ನು ಮಾಡಿಯೇ ಮಾಡುತ್ತೇನೆ. ನಾನೇನು ನಿಮಗೆ ಹೆದರು ವುದಿಲ್ಲ. ನಂಗೆ ಭಯನೇ ಇಲ್ಲ, ಭೀತಿನೂ ಇಲ್ಲ ಎಂದರು. ನಾವೆಲ್ಲ ಘಾಬರಿಯಗಿ ಅಪ್ಪಾಜಿ ಏನು ಹೇಳುವರೋ ಎಂದು ಸ್ಥಬ್ಧರಾಗಿ ನಿಂತಿದ್ದೆವು. ಆದರೆ ಅಪ್ಪಾಜಿ "ಹೌದಾ ? ಹಾಗಾದರೆ ನನ್ನ ಬಗ್ಗೆ ಪ್ರೀತಿನೂ ಇಲ್ಲವಾ" ಎಂದು ಕೇಳಿದರು. ನಾವೆಲ್ಲ ಜೋರಾಗಿ ನಗ ತೊಡಗಿದಾಗ ವಾತಾವರಣ ತಿಳಿಯಾಯಿತು.

ಅಪ್ಪಾಜಿ ಅವರು ಮಾನವಾಂಕ ಕವನದಿಂದ ಜನರಿಗೆ ಸಹಾಯ ಮಾಡುವದರಲ್ಲಿ ಸಿದ್ಧಹಸ್ತರು. ಯಾರೇ ಸಹಾಯ ಯಾಚಿಸಿ ಬರಲಿ ಅವರಿಗೆ ಹಸ್ತ ಸದಾ ಸಿದ್ಧ. ಆದರೆ ಅಮ್ಮ ವ್ಯವಹಾರದ ದೃಷ್ಟಿ ಯಿಂದ ನೋಡುವವರು. ಅಪಾತ್ರಧಾನವಾಗುವದು ಅವರಿಗೆ ಸೇರುತ್ತಿರಲಿಲ್ಲ. ಸಿಕ್ಕಸಿಕ್ಕವರಿಗೆ ಸಹಾಯ ಮಾಡುವದರ ಬದಲು ಅವರಿಗೆ ಅದರ ಅವಶ್ಯಕತೆ ಇದೆಯೋ ಇಲ್ಲವೋ ಎಂದು ಯೋಚಿಸಬಾರದೇ ಎಂದು ಅಮ್ಮಾ ಆಕ್ಷೇಪಿಸಿದಾಗ ಅಪ್ಪಾಜಿ ರಾಗವಾಗಿ "ಸಬ್ ಕುಚ್ ಸೀಕಾ ಹಮ್‌ನೇ ನ ಸೀಕಿ ಹೊಶಿಯಾರಿ ಸಬ್ ಹೈ ದುನಿಯಾವಾಲೆಕಿ ಹಮ್ ಹೈ ಅನಾಡಿ" ಎಂದು ಪ್ರಾರಂಭಿಸುತ್ತಿದ್ದರು. ಇಂತಹ ಮೋಜಿನ ಸಂಗತಿಗಳ ವಿಶೇಷ ನನ್ನ ಹೃದಯದಲ್ಲಿ ಭದ್ರವಾಗಿದೆ.

ನಾನು ಕಾಲೇಜಿನಲ್ಲಿದ್ದಾಗ ನನ್ನೊಡನೆ ಹಾಸನದ ಕಾಫಿಪ್ಲಾಂಟರರ ಮಗಳು ಸಹಪಾಠಿಯಾಗಿದ್ದಳು. ಅವಳು ಅಪ್ಪಾಜಿಯನ್ನು ನೋಡಬಯಸಿದಾಗ ಮನೆಗೆ ಕರೆದುಕೊಂಡು ಹೋಗಿದ್ದೆ. ಮನೆ ನೋಡಿದಾಗ ನಿಮ್ಮ ಮನೆ ಎಷ್ಟು ಚೆನ್ನಾಗಿದೆ. "ಸಾಹಿತಿಗಳೆಂದರೆ ತುಂಬ ಬಡವರು ಒಂದು ಕೈಲಿ ಸಿಗರೇಟೋ ಅಥವಾ ಕುಡಿತದ ಗ್ಲಾಸೋ ಹಿಡಿದುಕೊಂಡು ಬರೀತಾ ಇರು ತ್ತೀರೆಂದು ಭಾವಿಸಿದ್ದೆ. ಆದರೆ ನಿಮ್ಮ ತಂದೆಯನ್ನು ನಿಮ್ಮ ಮನೆಯನ್ನು ನೋಡಿದಾಗ ತುಂಬಾ ಸಂತೋಷ ವಾಯಿತು ಎಂದು ಹೇಳಿದಾಗ ನಾನು ದೇವರೇ ಅವಳು ಹೇಳಿದಂಥಹ ಸಾಹಿತಿ ತಂದೆಯನ್ನು ನನಗೆ ದಯ ಪಾಲಿಸಲಿಲ್ಲವಲ್ಲ ಎಂದು ದೇವರಿಗೆ ಧನ್ಯವಾದಗಳನ್ನು ಅರ್ಪಿಸಿದೆ.

ಅಪ್ಪಾಜಿಗೆ ಕೋಪ ಬರುವುದು ಅಪರೂಪ ಆದರೆ ಕೋಪ ಬಂದಾಗ ನಾವು ಮಕ್ಕಳೂ ಅಲ್ಲಿಂದ ಪರಾರಿಯಾಗುತ್ತೇವೆ. ಅಂದರೆ ಕೋಪ ಬಂದಾಗ ನಮ್ಮನ್ನು ಬೈಯ್ಯುವರು ಎಂಬ ಅರ್ಥದಲ್ಲಿ ನಾನು ಹೇಳುತ್ತಿಲ್ಲ. ಒಂದು ರೀತಿಯ ಬಿಗಿಯ ವಾತಾವರಣ ಏರ್ಪಡುತ್ತದೆ. ಆ ಬಿಗಿ ಯಾವಾಗ ಸಡಿಲವಾಗು ವುದೋ ಎಂದು ಕಾತುರದಿಂಥ ಕಾಯುತ್ತೇವೆ. ಈಗ ಆ ಯೋಚನೆ ಇಲ್ಲ. ಮೊಮ್ಮಕ್ಕಳಿದ್ದಾರಲ್ಲ ಅಂಥಹ ಬಿಗಿ ವಾತಾವರಣದಲ್ಲಿ ಅಜ್ಜಾ ಕಬ್ಬನ್‌ಪಾರ್ಕ್‌ಗೆ ಹೋಗೋಣ ಅಥವಾ ಅಜ್ಜಾ ನಂಗೆ ಚಡ್ಡಿ ಹಾಕಿ" ಎಂದು ಹೋಗುತ್ತಾರೆ, ಅಲ್ಲಿಂದ ಮುಂದೆ ಎಲ್ಲವೂ ಸುಲಲಿತವಾಗಿ ಸಾಗುತ್ತದೆ. ಆದರೆ ಅಪ್ಪಾಜಿಗೆ ಕೋಪ ಬರುತ್ತದೆ ಅಂದರೆ ಯಾರೂ ನಂಬುವುದಿಲ್ಲ ಯಾವಾ ಗಲೂ ಹಸನ್ಮುಖಿ. ಎಷ್ಟೇ ಆಯಾಸವಾದರೂ ಬಂದವರೊಡನೆ ನಗುನಗುತ್ತಾ ಮಾತನಾಡಿ ಕಳಿಸು ತ್ತಾರೆ. ನಮ್ಮ ಮನೆಗೆ ಬಂದಾಗ ಕೇವಲ ನನ್ನ ಮಗಳು ಪಲ್ಲವಿ ಅಜ್ಜನಾಗಿರದೇ ಅವಳ ಗೆಳತಿಯರಿಗೆಲ್ಲ ಪ್ರೀತಿಯ ಅಜ್ಜನಾಗಿದ್ದಾರೆ.

ನಾನು ಎರಡು ಮಕ್ಕಳು ತಾಯಿಯಾದರೂ ನನಗ ನೆಗಡಿಯಾದರೆ ಮನೆಯೆಲ್ಲಾ ಓಡಿಯಾಡಿ ಇರುವ ಔಷಧಿಗಳನ್ನೆಲ್ಲಾ ಹುಡುಕಿ ಅದು ತೆಗೆದುಕೋ ಅಥವಾ ಇದನ್ನು ತೆಗೆಮುಕೋ ಎಂದು ಹೇಳುವುದನ್ನು ನನ್ನ ಮಗಳು ಕೌತುಕದಿಂದ ನೋಡುತ್ತಾಳೆ. ಮೊಮ್ಮಕ್ಕಳಿ ಗೆನಾದರೂ ಜ್ವರ ಬಂದರೆ ಮಕ್ಕಳ ವೈದ್ಯ ಡಾ. ಭಾರತಿ ಯವರ ಹತ್ತಿರ ತಕ್ಷಣ ಧಾವಿಸುತ್ತಾರೆ. ಇಂಥಹ ಕರುಣಾಮಯಿ ತಂದೆ, ಅಜ್ಜ ಇನ್ಯಾರಿಗಿದ್ದಾರೆ ?

ನಮಗೆಲ್ಲಾ ಓದುವಾಗ ವಿಷಯದ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ಪ್ರಸನ್ನ ಒಬ್ಬನೇ ಮಗನಾದ ಕಾರಣ ಅವನು ಡಾಕ್ಟರ್ ಆಗಬೇಕೆಂಬ ಹಂಬಲವಿತ್ತು ಆದರೆ ಅವನು ಇಂಜನಿಯರಾಗಲು ಬಯಸಿದಾಗ ತಮ್ಮ ಸಂಪೂರ್ಣ ಸಮ್ಮತಿಯಿತ್ತರು. ಆದರೆ ಅವರ ಆಸೆ ಪೂರೈಸದೇ ಎನ್ನುವಂತೆ ನನ್ನ ತಂಗಿ ಶಿವಗೀತಾ ಡಾಕ್ಟರ್ ಆದಳು.

ಅಪ್ಪಾಜಿಯವರಿಗೆ ಸಿನೇಮಾ ಎಂದರೆ ಬೇಜಾರು ಮೂರು ಘಂಟೆ ಕತ್ತಲಲ್ಲಿ ಕುಳಿತುಕೊಳ್ಳಲು ಬೇಜಾರಾಗುವುದಿಲ್ಲವೇ ಎಂದು ಸಿನೇಮಾ ಪ್ರಿಯರಾದ ನಮ್ಮನ್ನು ಕೇಳುತ್ತಾರೆ. ಯಾವುದಾದರೂ ಒಳ್ಳೆಯ Picture ಬಂದಾಗ ಬನ್ನಿ ಅಪ್ಪಾಜಿ ಅಂತ ನಾವು ಬಲವಂತ ಮಾಡಿದಾಗ ಅವರಿಗೆ time ಇರುವುದಿಲ್ಲ ಅಥವಾ mood ಇರುವುದಿಲ್ಲ. ಅವರಿಗೆ mood ಬಂದು ನಮ್ಮೊಡನೆ ಹೊರಟಾಗ ಅವರು ನೋಡಬೇಕಾದಂಥಹ ಸಿನೇಮಾಗಳು "Nite in Londan" "Eveninig in Paris" ಅಥವಾ "sholay" ಅಂತಹದು. ಅಂದಮೇಲೆ ಸಿನೇಮದ ಬಗ್ಗೆ ಒಳ್ಳೆಯ ಅಭಿಪ್ರಾಯ ಬರಲು ಹೇಗೆ ಸಾಧ್ಯ.

**ಸೂಚನೆ :** ಇದನ್ನು ಬರೆದುದು ಯಾವಾಗಲೊ ಅಪ್ಪಾಜಿಯ ಬಗ್ಗೆ ಚಿಂತಿಸಿದಾಗ. ಈಗ ಸಮಯವಿಲ್ಲದ್ದಕ್ಕೆ ಇಷ್ಟೆ ಬರೆಯಬಹುದು ಅಂತ ತಿಳಿಸಿದೆ. ಇನ್ನೂ ಪೂರ್ತಿಯಾಗಿಲ್ಲ, ಕ್ಷಮಿಸಿ.

—ವಿಜಯ ಸಂದೀಶ್ವರ.



# 'ಮೊದಲು ಮಾನವನಾಗು'

**ಡಾ॥ ಹಾ. ಮಾ. ನಾಯಕ,** ವಿಳಾಸ : ಗೋಧೂಳಿ, ಜಯಲಕ್ಷ್ಮೀಪುರಂ, ಮೈಸೂರು–570 012.

ಮೂವತ್ತು ವರ್ಷಗಳಾಗುವ ಮೊದಲೇ ಅವರು ಸರಪನಹಳ್ಳಿ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಗೆ ಅಧ್ಯಕ್ಷರಾಗಿದ್ದರು. ಅವರನ್ನು ಯಾರಿಗೋ ಪರಿಚಯಿಸುತ್ತ ಹಿರಿಯರಾದ ಮಾಸ್ತಿಯವರು ಹೇಳಿದರಂತೆ : "ಈ ಹುಡುಗನಲ್ಲಿ ಪ್ರತಿಭೆಯಿದೆಯೆಂದು ಇವನಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಗುರುತಿಸಿದ್ದೆ. ನನ್ನೆಣಿಕೆ ಹುಸಿಯಾಗಲಿಲ್ಲ. ಹುಡುಗ ನಾನು ಎಣಿಸಿದಂತೆಯೇ ಬೆಳೆಯುತ್ತಿದ್ದಾನೆ. ಇವನು ಬರಿಯ ಲೇಖಕನಲ್ಲ, ಚಿಂತಕನೂ ಹೌದು."

ಆ ಹುಡುಗ ಈಚೆಗೆ ತೀರಿಕೊಂಡ (ಸೆಪ್ಟೆಂಬರ್, 4) ಸಿದ್ಧಯ್ಯ ಪುರಾಣಿಕ. ಆಗ ಅವರಿನ್ನೂ ತಹಸೀಲ್ದಾರರಾಗಿದ್ದರು. ಅವರು ಮಾಸ್ತಿಯವರಿಗೆ ಹೇಳಿದ್ದರಂತೆ : "ಸರ್ ನಾನು ತಹಸೀಲ್ದಾರನಾಗಿ ಆಯ್ಕೆಯಾದಾಗ ಇದು ಕನ್ನಡಕ್ಕೊಂದು ನಷ್ಟ ಎಂದು ತಾವು ಹೇಳಿದಿರಂತೆ. ನಾನು ಕನ್ನಡವನ್ನು ಬಿಡುವುದಿಲ್ಲ. ತಮ್ಮ ಆಶೀರ್ವಾದವಿದ್ದರೆ, ಸರಕಾರಿ ಸೇವೆಯಲ್ಲಿದ್ದೇ ತಾವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಂತೆ, ನಾನೂ ಕೈಲಾದಷ್ಟು ಕನ್ನಡದ ಸಾಹಿತ್ಯ ಸೇವೆ ಮಾಡುತ್ತೇನೆ. ತಮ್ಮಷ್ಟಲ್ಲದಿದ್ದರೂ ನನ್ನ ಯೋಗ್ಯತೆ ಇರುವಷ್ಟು ಮಾಡುತ್ತೇನೆಂದು ಮಾತು ಕೊಡುತ್ತೇನೆ."

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಸಿ. ಕೆ. ವೆಂಕಟರಾಮಯ್ಯನವರೊಡನೆ ಮಾಸ್ತಿ ತರುಣ ಪುರಾಣಿಕರನ್ನು ಹರಸಿದ್ದರು. "ನಿಶ್ಚಯವಾಗಿಯೂ ನೀನು ನಿನ್ನ ಮಾತನ್ನು ನಡೆಸುತ್ತೀಯೆ, ನಿಮಗೆ ನಮ್ಮ ಆಶೀರ್ವಾದವಿದೆ." ದೊಡ್ಡವರ ಆಶೀರ್ವಾದ, ಅದರಲ್ಲೂ ಮಾಸ್ತಿಯವರಂಥ ಶುದ್ಧ ಮನಸ್ಕರ ಆಶೀರ್ವಾದ ಹೇಗೆ ಹುಸಿಯಾದೀತು ?

ಆಗಸ್ಟ್ 18, 1918ರಂದು ಹುಟ್ಟಿದ ಸಿದ್ಧಯ್ಯ ಪುರಾಣಿಕರು ಅಸಿಸ್ಟೆಂಟ್ ಕಲೆಕ್ಟರೆಂದು ವೃತ್ತಿಜೀವನ ಆರಂಭಿಸಿ (1944), ಐ. ಎ. ಎಸ್. ಅಧಿಕಾರಿಯಾಗಿ, ಜಿಲ್ಲಾಧಿಕಾರಿಯಾಗಿ, ಕಾರ್ಮಿಕ ಕಮಿಷನರ್ ಹುದ್ದೆಗೆ ಏರಿ ನಿವೃತ್ತರಾದರು. 1972, ಕನ್ನಡ ಸಾಹಿತ್ಯದಲ್ಲಂತೂ ಅವರು ಅತ್ಯುನ್ನತ ಸ್ಥಾನವನ್ನು ಪಡೆದರು. ಸುಮಾರು ನಲುವತ್ತಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ, ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ (1987), ಕನ್ನಡದ ಹಿರಿಯ ಲೇಖಕರಲ್ಲಿ ಒಬ್ಬರೆನ್ನಿಸಿದರು. ಕನ್ನಡದ ಕಾರಣಕ್ಕಾಗಿ ತಮ್ಮನ್ನು ಮೀಸಲಿರಿಸಿಕೊಂಡರು.

ಹಿಂದಿನ ಹೈದರಾಬಾದ್ ಕರ್ನಾಟಕದ ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ಚಿಕ್ಕಹಳ್ಳಿ, ದ್ಯಾಂಪುರ ಪುರಾಣಿಕರ ಹುಟ್ಟೂರು. ಆ ಪ್ರದೇಶ ಸಾಹಿತ್ಯ ಸಂಸ್ಕೃತಿ ಶಿಕ್ಷಣಗಳ ದೃಷ್ಟಿಯಿಂದ ಬಹಳ ಹಿಂದುಳಿದಿತ್ತು. ಆಧುನಿಕ ಸೌಲಭ್ಯಗಳು ಏನೂ ಇರಲಿಲ್ಲ. ಶಾಲೆ ಕಾಲೇಜುಗಳಿರಲಿಲ್ಲ. ಉರ್ದು, ಸಂಸ್ಥಾನದ ಆಡಳಿತ ಭಾಷೆಯಾಗಿತ್ತು. ಅಪರೂಪಕ್ಕಿದ್ದ ಶಾಲೆಗಳಲ್ಲಿ ಉರ್ದು ಮಾಧ್ಯಮ. ಕನ್ನಡವನ್ನು ಕೇಳುವವರೇ ಇರಲಿಲ್ಲ. ಪುರಾಣಿಕರ ಊರು ದ್ಯಾಂಪುರವಾದರೂ ಇದಕ್ಕೆ ಹೊರತಾಗಿರಲಿಲ್ಲ. ಶಿಕ್ಷಣ ಏನಿದ್ದರೂ ಅವರವರ ಅದೃಷ್ಟ ! ಅಂಥ ಪರಿಸ್ಥಿತಿಯಲ್ಲಿಯೂ ಅಲ್ಲಿ ಕೆಲವರಾದರೂ ವಿದ್ಯಾವಂತರು "ಸ್ವಾಧ್ಯಾಯ ಸಿದ್ಧ"ರಾಗಿ ಕಾಣಿಸಿಕೊಂಡರು. ಅವರಲ್ಲಿ ಒಬ್ಬರು ದ್ಯಾಂಪುರದ ಚೆನ್ನ ಕವಿಗಳು. ಅವರು ಈ ಶತಮಾನದ ಪಟ್ಪದೀ ಕವಿಗಳಲ್ಲಿ ಅಗ್ರಗಣ್ಯರು. ಅವರ ಮಗ ಕಲ್ಲಿನಾಥ ಶಾಸ್ತ್ರಿಗಳೂ ಕವಿಗಳೇ, ಪುರಾಣ ಪ್ರವಚನಗಳಲ್ಲಿ, ಆ ಸುತ್ತಿನಲ್ಲಿ ದೊಡ್ಡ ಹೆಸರು ಮಾಡಿದ್ದರು. ಅವರೇ ಮಗ ಸಿದ್ಧಯ್ಯನವರಿಗೆ ಮೊದಲನೆಯ ಗುರು. ಹುಡುಗನನ್ನು ಕೂರಿಸಿಕೊಂಡು ಅವರು ಕಾವ್ಯ ಕಥೆಗಳ ಜೊತೆಗೆ ವ್ಯಾಕರಣ ಛಂದಸ್ಸುಗಳನ್ನೂ ಬೋಧಿಸುತ್ತಿದ್ದರು.

ಕನ್ನಡ ತಾಯಿ ನುಡಿ : ಉರ್ದು ಕಲಿಯಲೇಬೇಕಾಗಿದ್ದ ಭಾಷೆ : ಅದರ ಕಾರಣವಾಗಿ ಬಂದವು ಪರ್ಷಿ

ಯನ್, ಅರಾಬಿಕ್, ಹಿಂದೀ, ಪರಿಸರದ ಫಲವಾಗಿ ಪರಿಚಯುವಾದದ್ದು ಮರಾಠೀ.ಆಧುನಿಕ ಶಿಕ್ಷಣ ಕೊಡುಗೆ ಇಂಗ್ಲೀಷ್. ವಂಶಪಾರಂಪರ್ಯವಾಗಿ ಬಂದದ್ದು ಸಂಸ್ಕೃತ. ಹೀಗೆ ಪುರಾಣಿಕರಿಗೆ ನಾಲ್ಕಾರು ಭಾಷೆಗಳಲ್ಲಿ ಪ್ರವೇಶ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿಯು ಕಛೆಯಲ್ಲಿ ಒಂದು ಮೂಲೆಯಲ್ಲಿ ಕುಳಿತುಕೊಂಡು ಅವರು ನಾನಾ ಭಾಷೆಗಳ ನಿಘಂಟುಗಳನ್ನು ಬಿಚ್ಚಿಕೊಂಡು ನೋಡುತ್ತಿರುತ್ತಿದ್ದ ಚಿತ್ರ ಕಣ್ಣಿಗೆ ಕಟ್ಟಿದಂತಿದೆ. ಉರ್ದು ಪರ್ಷಿಯನ್ ಮೂಲದ ಯಾವ ಪದ ಬಂದರೂ ಕೊನೆಯ ಮಾತು ಅವರದೇ ಆಗಿರುತ್ತಿತ್ತು !

ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸಂಸ್ಕೃತಿಗಳ ಪರಿಸರ ಸಹಜವಾಗಿ ಸಿದ್ಧಗೊಂಡಷ್ಟು, ಅಷ್ಟೇ ಸಹಜವಾಗಿ ಬಂದದ್ದು ಅವರ ಕಾವ್ಯ ಕಟ್ಟುವ ಶಕ್ತಿ. ಹೈದರಾಬಾದ್, ಕರ್ನಾಟಕ ಪ್ರದೇಶದಲ್ಲಿ ಕನ್ನಡ ಚಳವಳಿ ತಲೆ ಎತ್ತುತ್ತಿತ್ತು. ಅದರ ಕೇಂದ್ರ ಗುಲಬರ್ಗಾ ಆಗಿತ್ತು. ಆ ವೇಳೆಗೆ ಪುರಾಣಿಕರು ಮಾಧ್ಯಮಿಕ ಶಾಲೆಯ ಸಾರ್ವಜನಿಕ ಪರೀಕ್ಷೆಯಲ್ಲಿ ಪ್ರಪ್ರಥಮ ಸ್ಥಾನಪಡೆದು ಉತ್ತೀರ್ಣರಾಗಿ, ಪ್ರೌಢಶಾಲಾ ಶಿಕ್ಷಣಕ್ಕಾಗಿ ಗುಲಬರ್ಗಾಕ್ಕೆ ಬಂದರು. ಆಗಲೇ ಅವರು ಕನ್ನಡ ಭಾಷಣಗಳಿಗಾಗಿ ಪ್ರಸಿದ್ಧರಾಗಿದ್ದರು. ಜನರಲ್ಲಿ ಅವರ ಬಗೆಗೆ ಅಭಿಮಾನ ಮೂಡುತ್ತಿತ್ತು. ನಾನಾ ಸಂಘಸಂಸ್ಥೆಗಳೊಡನೆ ಅವರ ಸಂಬಂಧ ನಿಕಟವಾದುದಾಗಿತ್ತು. ಸಂಘವೊಂದು ಏರ್ಪಡಿಸಿದ್ದ ಕಾವ್ಯಸ್ಪರ್ಧೆಗೆ ರಾತ್ರಿ ಬೆಳಗಾಗುವುದರೊಳಗಾಗಿ ಕವಿತೆಯೊಂದನ್ನು ರಚಿಸಿ ಮೊದಲನೆಯ ಬಹುಮಾನ ಗಳಿಸಿದರು ! ವಿದ್ಯಾರ್ಥಿಯಾಗಿದ್ದರೂ ಅವರ ಕವನಗಳಿಗೆ "ಜಯಕರ್ನಾಟಕ"ದಂಥ ನಿಯತಕಾಲಿಕದಲ್ಲಿ ಜಾಗವಿತ್ತು. ವಿದ್ಯಾರ್ಥಿ ಸಮೂಹದಲ್ಲಿ ಅವರಿಗೆ ಸಾಹಿತ್ಯಿಕ ನಾಯಕತ್ವ ದೊರಕಿತ್ತು. "ಮಿಂಚು" ಎಂಬ ಕೈಬರಹದ ಪತ್ರಿಕೆಗೆ ಅವರೇ ಸಂಪಾದಕರಾಗಿದ್ದರು. "ಕಾವ್ಯದೇವಿ" ಎಂಬ ಕವಿತೆಯೊಂದರಲ್ಲಿ ಅವರು ಹೇಳಿಕೊಂಡಿದ್ದರು :

ನಿನ್ನಾತ್ಮವಾನಂದ; ನನ್ನಾತ್ಮ ಕಾವ್ಯ
ಇಂತು ಕಾವ್ಯಾನಂದ ನಾಮ ಸುಶ್ರಾವ್ಯ !

ಅಂದಿನಿಂದ "ಕಾವ್ಯಾನಂದ" ಎಂಬುದೇ ಅವರ ಕಾವ್ಯನಾಮವಾಯಿತು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ತುಂಬ ಪ್ರಸಿದ್ಧವಾದ ಹೆಸರಾಯಿತು. ಮುಂದೆ ಎಷ್ಟೋ ವರ್ಷಗಳ ಮೇಲೆ (1981) ಪುರಾಣಿಕರಿಗೆ ಒಪ್ಪಿಸಲ್ಪಟ್ಟ ಅಭಿನಂದನ ಗ್ರಂಥದ ಹೆಸರೂ ಅದೇ ಆಯಿತು ! ವಿದ್ಯಾರ್ಥಿ ಜೀವನದಲ್ಲಿಯೂ ಪುರಾಣಿಕರ ಸಾಧನೆ ದೊಡ್ಡದೆ. ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್, ಕನ್ನಡಗಳಲ್ಲಿ ಮೊದಲನೆಯರಾಗಿ, ಒಟ್ಟಿನಲ್ಲಿ ಮೂರನೆಯ ಸ್ಥಾನವನ್ನು ಗಳಿಸಿ, ಅವರು ಮೆಟ್ರಿಕ್ ಪಾಸಾದರು. ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನ ಪಡೆದರು. ಬಿ.ಎ., ಪರೀಕ್ಷೆಯಲ್ಲಿಯೂ ಮೊತ್ತ ಮೊದಲನೆಯ ಸ್ಥಾನ ಅವರದ್ದೇ ! ವಿದ್ಯಾರ್ಥಿಯಾಗಿದ್ದಾಗಲೆ ತಮ್ಮ ಸಾಹಿತ್ಯಿಕ ಚಟುವಟಿಕೆಗಳಿಂದ ಅಖಿಲ ಕರ್ನಾಟಕ ಪ್ರಸಿದ್ಧಿಯನ್ನು ಪಡೆದರು; ಹಿರಿಯ ಕನ್ನಡ ಲೇಖಕರೆಲ್ಲರ ಮೆಚ್ಚುಗೆಯನ್ನು ಸಂಪಾದಿಸಿದರು.

ಪುರಾಣಿಕರ ಮೊದಲನೆಯ ಸ್ವತಂತ್ರ ಕೃತಿ, ಬಸವಣ್ಣನವರ ಜೀವನ, ಸಾಧನೆಗಳನ್ನು ಆಧರಿಸಿದ ಮೂರಂಕದ ನಾಟಕ "ಆತ್ಮಾರ್ಪಣ." ಅದನ್ನು ಪ್ರಕಟಿಸಿದಾಗ ಅವರಿಗೆ ಇಪ್ಪತ್ತನಾಲ್ಕು ವರ್ಷ ವಯಸ್ಸು (1942) ವಿದ್ಯಾರ್ಥಿಯಾಗಿದ್ದಾಗಲೇ ತಾವೇ ಬಸವಣ್ಣನವರ ಪಾತ್ರಧರಿಸಿ ರಂಗದ ಮೇಲೆ ಬಂದು ತಮ್ಮ ಪ್ರತಿಭೆಯ ಮತ್ತೊಂದು ಮುಖವನ್ನು ಅವರು ಪ್ರದರ್ಶಿಸಿದ್ದೂ ಉಂಟು ! ಅವರ ಕವನ ಸಂಕಲನಗಳಲ್ಲಿ ಮೊದಲನೆಯದು "ಜಲಪಾತ" 1953. ಪುರಾಣಿಕರ ಶಕ್ತಿ ಸಾಮರ್ಥ್ಯಗಳನ್ನು ಸಮರ್ಪಕವಾಗಿ ಗುರುತಿಸಿದ ಕವಿವರ್ಯ ಬೇಂದ್ರೆಯವರು ಹೇಳಿದರು.

"ಸಿದ್ದಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು; ದೇಶ ಸೇವಾ ತತ್ಪರರಾದವರ ಸಂಗ ಸಹವಾಸಗಳಲ್ಲಿ ಕಾಲ ಕಳೆದರು. ಅವರು ಮಾಡಿದ ವಿದ್ಯಾಭ್ಯಾಸವೂ ಅವರ ಹೃದಯದವರೆಗೆ ಪ್ರವೇಶ ಮಾಡಿತು. ಇದೆಲ್ಲದರ ಪರಿಣಾಮವೇಂದರೆ ಅವರಲ್ಲಿ ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿ ಗುಣವೂ ಸೇರಿಕೊಂಡದ್ದು ... ಅವರ ಕಾವ್ಯವಾಣಿಯಲ್ಲಿ ಆಕರ್ಷಣೆ ವಿಕರ್ಷಣೆಗಳು ಸರಿತೂಕವಾಗಿ ಸೇರಿಕೊಂಡಿವೆ. ಇಲ್ಲಿಯ ಓಜಸ್ಸಿನ ಕಾಂತಿಮತ್ತಾದ ಗುಣ ಇದರಲ್ಲಿದೆ " ಆ ಮೇಲೆ ಪುರಾಣಿಕರು ನಾಲ್ಕಾರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ

ವಿಶೇಷವಾಗಿ ಉಲ್ಲೇಖಿಸಬೇಕಾದದ್ದು, ಅನುಭಾವದ ಮೊನಚಿನ "ಕಲ್ಲೋಲಮಾಲೆ" (1968).

ಆಧುನಿಕ ವಚನಕಾರರಲ್ಲಿ ತಮ್ಮದೇ ಆದ ಒಂದು ಮಹತ್ವದ ಸ್ಥಾನವನ್ನು ಪುರಾಣಿಕರು ಪಡೆದುಕೊಂಡಿದ್ದಾರೆ. "ವಚನೋದ್ಯಾನ" (1977). "ವಚನ ನಂದನ" (1983) ಮತ್ತು "ವಚನರಾಮ" (1992) ಎಂಬ ಮೂರು ವಚನ ಸಂಕಲನಗಳನ್ನು ಅವರು ಪ್ರಕಟಿಸಿದ್ದಾರೆ ತಮ್ಮ "ವಚನೋದ್ಯಾನ"ಕ್ಕೆ "ಮುನ್ನುಡಿ" ಬರೆಯುವ ಗೌರವವನ್ನು ಅವರು ನನಗೆ ನೀಡಿದ್ದರು, ಅಲ್ಲಿ ಸಾಕಷ್ಟು ದೀರ್ಘವಾಗಿಯೇ, ನನಗೆ ತೋರಿದ ಅವರ ವಚನ ಸಾಹಿತ್ಯದ ಸೊಗಸು ಹಾಗೂ ಮಹತ್ವಗಳನ್ನು ಹೇಳಿದ್ದೇನೆ. ಒಂದು ಸಾವಿರದ ಐನೂರಕ್ಕೂ ಮಿಕ್ಕಿದ ಅವರ ವಚನಗಳಲ್ಲಿ ಸುಮಾರು ಇನ್ನೂರು ಮುನ್ನೂರನ್ನು ಆಯ್ದು ಪ್ರಕಟಿಸುವ ಸಲಹೆಯೊಂದನ್ನು ಅವರಿಗೆ ನೀಡಿದ್ದೆ, ಅವರು ಅದನ್ನು ಒಪ್ಪಿ ಆ ವಚನಗಳನ್ನು ಆಯ್ದು ಕೊಡಬೇಕೆಂದು ನನ್ನನ್ನೇ ಕೇಳಿದ್ದರು. ಆ ಕೆಲಸವನ್ನು ಮಾಡಲಿಲ್ಲವಲ್ಲ ಎಂಬ ಕೊರಗು ಈಗ ನನ್ನನ್ನು ಕಾಡುತ್ತಿದೆ.

ನನಗೆ ಪ್ರಿಯವಾದ ಒಂದು ವಚನ :

ವಿದ್ಯೆ ಬಂತು, ವಿನಯ ಹೋಯ್ತು
ಬುದ್ಧಿ ಬಂತು ಶ್ರದ್ಧೆ ಹೋಯ್ತು
ಶ್ರದ್ಧೆ ಬಂತು, ವಿವೇಚನೆ ಹೋಯ್ತು
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು
ವಿಜ್ಞಾನ ಬಂತು, ಸಮಾಧಾನ ಹೋಯ್ತು
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು
ಬೋಧನೆ ಬಂತು, ಸಾಧನೆ ಹೋಯ್ತು
ಮಾತು ಬಂತು, ಕೃತಿಯು ಹೋಯ್ತು
ಜಾತಿ ಬಂತು, ಪ್ರೀತಿ ಹೋಯ್ತು
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರ ಧೀರ ಸಿದ್ಧೇಶ್ವರ ಹೋದ !

ಅನುಭವ ಮತ್ತು ಅನುಭಾವಗಳ ಸುಂದರ ಸಂಗಮ ಪುರಾಣಿಕರ, ವಚನ ಸಂಪತ್ತು, ಅವರ ವಚನದಲ್ಲಿ ಸೂಕ್ತಿಗಳು ಸಮೃದ್ಧವಾಗಿ ಚೆಲ್ಲಿವೆ. ಅವನ್ನು ಓದುವುದೇ ಒಂದು ಅನುಭವ. ಹಳೆಯ ವಚನ ಸಾಹಿತ್ಯ ಪುರಾಣಿಕರ ಮೇಲೆ ಎಂಥ ಗಾಢ ಹಾಗೂ ದಿವ್ಯ ಪ್ರಭಾವ ಬೀರಿದೆ ಎಂಬುದನ್ನು ಸುಲಭವಾಗಿ ಗ್ರಹಿಸಬಹುದು.

ವಿನಯದಿಂದ ತುಂಬಿದ ಪುರಾಣಿಕರ ವ್ಯಕ್ತಿತ್ವ ಅವರ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ಎದ್ದು ತೋರುತ್ತಿತ್ತು. ಅವರೊಬ್ಬ ಅತ್ಯಂತ ಸುಸಂಸ್ಕೃತ ವ್ಯಕ್ತಿಯಾಗಿದ್ದರು. ಕುವೆಂಪು ಒಂದೆಡೆ ಹೇಳುತ್ತಾರೆ :

"ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪವಾದ ರೂಪವಾಗಿ ನಿಂತ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲೂ ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೇ ಉಳಿದಿದೆ." ಪುರಾಣಿಕರನ್ನು ಬಲ್ಲ ಎಲ್ಲರ ಅನುಭವವೂ ಇದೇ ಆಗಿದೆ. ಅವರ ಮಂದಹಾಸ, ಮೃದು ಮಾತು, ಮೋಹಕ ವ್ಯಕ್ತಿತ್ವ ಯಾರನ್ನಾದರೂ ಸುಲಭವಾಗಿ ಸೆಳೆದುಕೊಳ್ಳುವಂಥವಾಗಿದ್ದವು.

ತಮ್ಮ ಜೀವನ, ಸಾಹಿತ್ಯ ಸಾಧನೆಗಳನ್ನು "ಮೊದಲು ಮಾನವನಾಗು" ಎಂಬ ಸಂದೇಶದ ಪ್ರಸಾರಕ್ಕಾಗಿಯೇ ಮೀಸಲಾಗಿರಿಸಿದ ಸಿದ್ದಯ್ಯ ಪುರಾಣಿಕರ ಅನುಭವ ಪ್ರಪಂಚ ದೊಡ್ಡದು, ಹಳೆಯ ಹೈದರಾಬಾದ್ ಮತ್ತು ಹೊಸ ಮೈಸೂರು ರಾಜ್ಯಗಳೆರಡರಲ್ಲಿಯೂ ಅವರ ಅನೇಕ ಅಧಿಕಾರ ಸ್ಥಾನಗಳನ್ನು ನಿರ್ವಹಿಸಿದ್ದರು. ಕಂದಾಯ, ಶಿಕ್ಷಣ, ವಾರ್ತೆ, ಪ್ರವಾಸೋದ್ಯಮ, ಸಾರಿಗೆ, ಕಾರ್ಮಿಕ, ಹೀಗೆ ಬಗೆ ಬಗೆಯ ಇಲಾಖೆಗಳಲ್ಲಿ ಕೆಲಸ ಮಾಡಿದ್ದರು ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿದ್ದರು. ಆಡಳಿತದಲ್ಲಿ ಕನ್ನಡದ ಸಮಸ್ಯೆಯನ್ನು ಅವರಷ್ಟು ಚೆನ್ನಾಗಿ ಬಲ್ಲವರು ವಿರಳ. ಕಳೆದ ಎರಡು ಮೂರು ವರ್ಷಗಳಿಂದ ನಾನು ಅವರೊಡನೆ ಕನ್ನಡ ಪ್ರಾಧಿಕಾರದಲ್ಲಿ ಸದಸ್ಯನಾಗಿ ಕೆಲಸ ಮಾಡುತ್ತಿದ್ದೆ. ಅವರ ಅನುಭವ, ಸಮಸ್ಯೆಗಳಿಗೆ ಅವರು ಸೂಚಿಸುತ್ತಿದ್ದ ಪರಿಹಾರಗಳು ಪ್ರಾಧಿಕಾರಕ್ಕೆ ತುಂಬ ಉಪಯುಕ್ತವಾಗಿರುತ್ತಿದ್ದವು. ಕನ್ನಡದ ಬಗೆಗಿನ ಅವರ ಕಳಕಳಿ

ತುಂಬ ವಿಶೇಷವಾದದ್ದು. ಕನ್ನಡ ಪರವಾದ ಯಾವ ಚಳವಳಿಯಲ್ಲಾದರೂ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರ ಕನ್ನಡ ಪ್ರೀತಿ ಅನನ್ಯವಾದದ್ದು.

ಅವರ ಸೇವೆ ಸಾಧನೆಗಳಿಗಾಗಿ ಕನ್ನಡಿಗರೂ ಅವರಿಗೆ ಅನೇಕ ಗೌರವಗಳನ್ನು ಸಲ್ಲಿಸಿದ್ದಾರೆಂಬುದು ಸಂತೋಷದ ಸಂಗತಿ ಮೈಸೂರು (1955), ಬೀದರ್ (1960) ಮತ್ತು ದಿಲ್ಲಿ (1978) ಸಾಹಿತ್ಯ ಸಮ್ಮೇಳನಗಳಲ್ಲಿ ಪುರಾಣಿಕರು ಬೇರೆ ಬೇರೆ ಗೋಷ್ಠಿಗಳ ಅಧ್ಯಕ್ಷರಾಗಿದ್ದರು. ಗುಲಬರ್ಗಾ ಸಮ್ಮೇಳನದ ಅಧ್ಯಕ್ಷರೇ ಆಗಿದ್ದರು, ಕರ್ನಾಟಕ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿತ್ತು (1976), 1978 ರಲ್ಲಿ ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದಿದ್ದ ಅವರು, ಕನ್ನಡಕ್ಕೆ ಮೊದಲನೆಯ ಭಿಲ್ವಾರ ಪ್ರಶಸ್ತಿಯನ್ನು ತಂದು ಕೊಟ್ಟದ್ದರು. (1980) ಮಾಳವಾಡ ಪ್ರಶಸ್ತಿ (1981) ಅವರಿಗೆ ದೊರೆತಿದ್ದ ಮತ್ತೊಂದು ಗೌರವ. ಅವರ ಅನೇಕ ಕೃತಿಗಳು ಬೇರೆ ಬೇರೆ ಭಾರತೀಯ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಪುರಾಣಿಕರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ನಾನು ಬರೆದಿದ್ದೆ: "ಕೆಲವು ಕಾಲ ಪುರಾಣಿಕರು ಪರಿಷತ್ತಿನಿಂದ ಹೊರಗಿದ್ದರು. ಈಗ ಅವರು ಒಳಗೆ ಬಂದಿದ್ದಾರೆ, ಇದಕ್ಕೆ ಅವರಿಗೆ ಅವರದೇ ಆದ ಕಾರಣಗಳಿರಬಹುದು, ಆದರೆ ಪರಿಷತ್ತು ಇಂಥ ಹಿರಿಯರನ್ನು ಹೊರಗಿಟ್ಟು ಕೊಂಡಿರುವುದು ಉಚಿತವಲ್ಲ. ಪರಿಷತ್ತು ನಮಗೆಲ್ಲ ಮಾತೃ ಸಂಸ್ಥೆ, ಲೇಖಕರಾದವರಿಗೆ ತೌರುಮನೆ. ಪ್ರಜಾಪ್ರಭುತ್ವದ ಸಂಸ್ಥೆ. ಅದು ದಾರಿ ತಪ್ಪಿದೆ ಎಂದು ಭಾವಿಸುವವರು, ಅದನ್ನು ಸರಿಯಾದ ದಾರಿಯಲ್ಲಿ ನಡೆಸುವುದಕ್ಕೆ ಮುಂದಾಗಬೇಕು. ತಾವೇ ಪ್ರತ್ಯೇಕವಾಗಿ ಹೋಗುವುದು ಸರಿಯಾದ ಕ್ರಮವಲ್ಲ, ಅವರಿಂದ ಉಪಯೋಗವೂ ಇಲ್ಲ." ಪುರಾಣಿಕರು ಈ ಮಾತುಗಳನ್ನು ಬಹಳವಾಗಿ ಇಷ್ಟಪಟ್ಟಿದ್ದರು. ಗುಲಬರ್ಗಾ ಸಮ್ಮೇಳನದಲ್ಲಿ ಅವರು ನನ್ನನ್ನು ಅಪ್ಪಿಕೊಂಡು ಹಸಿಗಣ್ಣಾದದ್ದು ನೆನಪಾಗುತ್ತಿದೆ "ಏನು ಬರ್ದೀಯ ಮಹಾರಾಯ" ಎಂದು ತನ್ನ ಮೆಚ್ಚುಗೆಯನ್ನು ವ್ಯಕ್ತಡಿಸಿದ್ದರು. ಪರಿಷತ್ತಿನ ವ್ಯವಹಾರದಲ್ಲಿ ನಾವು ಒಬ್ಬರನ್ನೊಬ್ಬರುವಿರೋಧಿಸಿದ್ದೆವು. ಆದರೆ ಅದನ್ನೆಲ್ಲ ಅವರು ಮರೆತಿದ್ದರು!

ಸಿದ್ದಯ್ಯ ಪುರಾಣಿಕರ ಆರೋಗ್ಯ ಕೆಲವರ್ಷಗಳಿಂದ ಅಷ್ಟು ಚೆನ್ನಾಗಿರಲಿಲ್ಲ. ಅವರ ಶ್ರೀಮತಿಯವರ ಆರೋಗ್ಯವಾದರೂ ಉತ್ತಮವಾಗಿರಲಿಲ್ಲ. ಅವರು ಚಿಕಿತ್ಸೆಯಲ್ಲಿಯೇ ಇದ್ದರು. ಪುರಾಣಿಕರು ತೀರಿಕೊಂಡ ಈ ಗಳಿಗೆಯಲ್ಲಿ ನನ್ನ ಮನಸ್ಸು ಅವರ ಶ್ರೀಮತಿಯವರನ್ನು ಕುರಿತು ಚಿಂತಿಸುತ್ತದೆ. ಆ ತಾಯಿಯವರ ದುಃಖವನ್ನು ಆಲೋಚಿಸಿ ವ್ಯಥೆಪಡುತ್ತದೆ, "ಹೇಗಿದ್ದೀರಿ?" ಎಂದು ಕೇಳಿದಾಗಲೆಲ್ಲ ಪುರಾಣಿಕರು ಹೇಳುತ್ತಿದ್ದುದು ಒಂದೇ ಮಾತು, 'ನಾನು ಪರವಾ ಇಲ್ಲ, ಮನೆಯವರದ್ದೇ ತೊಂದರೆ, ಕೊಪ್ಪಳ ಸಮ್ಮೇಳನಕ್ಕೆ ಹೋಗಿದ್ದಾಗ, ಶ್ರೀಮತಿಯವರ ಅನಾರೋಗ್ಯದ ಕಾರಣದಿಂದ ಪುರಾಣಿಕರು ಅರ್ಧದಲ್ಲಿಯೇ ಹೊರಟುಬರಬೇಕಾಯಿತು,ಇದನ್ನು ನೆನಪಿಸಿಕೊಂಡಾಗ ಪುರಾಣಿಕರನ್ನು ಕಳೆದುಕೊಂಡ ನೋವು ದ್ವಿಗುಣಗೊಳ್ಳುತ್ತದೆ.

—★—

# ಕನ್ನಡದ ಕನಸು ಕಂಡ ಕವಿ-ಸಿದ್ಧಯ್ಯ ಪುರಾಣಿಕರು

ಲೇಖಕರು : **ಬಿ. ಎನ್. ವೆಂಕಟೇಶ್,** (ಅನುಭವಿ)

ಕರ್ನಾಟಕ ರಾಜ್ಯ ಭಾಷೆಯಾದ ಕನ್ನಡ ಭಾಷೆಯನ್ನು ಸರ್ಕಾರದ ಆಡಳಿತವನ್ನಾಗಿಸಲು ಅದೆಷ್ಟ ಮಹನೀಯರು ಪ್ರಯತ್ನ ಪಟ್ಟರು ಅವರುಗಳಲ್ಲಿ ದಿವಂಗತ ಸಿದ್ದಯ್ಯ ಪುರಾಣಿಕರು ಒಬ್ಬರೂ ಎಂದರೆ ತಪ್ಪಾಗಲಾರದು. ಇವರು ಕರ್ನಾಟಕ ಸರ್ಕಾರದ ಉನ್ನತ ಐ.ಎ.ಎಸ್ ಹುದ್ದೆಯಲ್ಲಿ ಅಧಿಕಾರಿಯಾಗಿದ್ದು ಕನ್ನಡ ಕವಿಗಳಾಗಿದ್ದು ಕನ್ನಡದ ಸೇವೆಯನ್ನು ಮಾಡಿದ್ದಾರೆ. ಇಂತಹ ಕನ್ನಡಿಗ ಅಧಿಕಾರಿಗಳ ಸೇವೆಗಳಿಂದಲೇ ನಮ್ಮ ಕರ್ನಾಟಕಕ್ಕೆ ಒಂದು ಕನ್ನಡದ ಆಸ್ತಿ ಎನ್ನಬಹುದಾಗಿದೆ.

ಕರ್ನಾಟಕ ಎಂದು ಪ್ರಾಂತ ವಿಂಗಡಣೆಯಾದಿ ಭಾಷಾವಾರು ರಾಜ್ಯವಾಗಿ ಸುಮಾರು 39 ವರುಷಗಳು ಕಳೆದರು ಕರ್ನಾಟಕದ ರಾಜ್ಯ ಭಾಷೆಯಾಗಿ ಕಡ್ಡಾಯವಾಗಿ ತರಲು ಕರ್ನಾಟಕದ ಆಡಳಿತಗಾರರು ಹುಟ್ಟಿಯೇ ಇಲ್ಲಾ ಮತ್ತು ಕರ್ನಾಟಕದ ಕನ್ನಡ ಜನರೂ ಸಹ ಇನ್ನೂ ತಮ್ಮ ನಾಡ ನುಡಿಯಾದ ಕನ್ನಡ ಭಾಷೆಯನ್ನು ಬಳಸಬೇಕು ಎಂದು ಇನ್ನೂ ಜಾಗರೂಕರಾಗಿಲ್ಲವೆಂದು ಸಿದ್ದಯ್ಯ ಪುರಾಣಿಕರು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಕರ್ನಾಟಕ ಸರ್ಕಾರದ ಅಧಿಕಾರಿಯಾಗಿ ಇವರೊಬ್ಬರನ್ನು ಬಿಟ್ಟರೆ ಬೇರೆ ಕನ್ನಡಿಗರು ಅಧಿಕಾರಿಯಾಗಿದ್ದರೂ ಕನ್ನಡ ಭಾಷೆ ರಾಜ್ಯದ ಆಡಳಿತ ವ್ಯವಹಾರ ಬರಲೆಂದು ಹೇಳುತ್ತಿರಲಿಲ್ಲ. ಅನೇಕ ಕನ್ನಡ ಸಂಘಗಳು ಕನ್ನಡ ಭಾಷೆ ರಾಜ್ಯ ಭಾಷೆಯಾಗಬೇಕೆಂದು ಚಳುವಳಿ ಮಾಡುವಂತಹ ಸಂದರ್ಭದಲ್ಲಿ ಇವರು ತಮ್ಮ ಪ್ರೋತ್ಸಾಹ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಕನ್ನಡ ಭಾಷೆ ನಿಜವಾಗಿಯೂ ಕನ್ನಡ ರಾಜ್ಯದ ಸರ್ಕಾರಿ ಆಡಳಿತ ಭಾಷೆಯನ್ನಾಗಿ ಕಡ್ಡಾಯವಾಗಿ ಜಾರಿಗೆ ತಂದು ಎಲ್ಲರೂ ಕನ್ನಡ ಭಾಷೆಯಲ್ಲಿ ಆಡಳಿತ ವ್ಯವಹಾರ ನಡೆಸಬೇಕೆಂದು ಸಹ ಹೇಳುತ್ತಿದ್ದರು.

ಕನ್ನಡ ನಾಡಿನ ಕನ್ನಡ ಕವಿಗಳಾಗಿದ್ದು ನಾಡಿಗೆ ಇವರ ಸೇವೆ ಅಪಾರವಾಗಿದೆ. ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಇವರು ನಿಜವಾದ ಹೋರಾಟಗಾರರಾಗಿದ್ದರು. ಕನ್ನಡ ಭಾಷೆಯೆಂದರೆ ಇವರಿಗೆ ಅತ್ಯಂತ ಪ್ರೇಮ, ಭಕ್ತಿ ಆದ ಕಾರಣವೇ ಇವರು ಕನ್ನಡ ಕವಿಯಾಗಿ ಕನ್ನಡ ಸಾಹಿತ್ಯದ ಸೃಷ್ಟಿಗೆ ಕಾರಣವಾಯಿತು. ಇವರು ಕರ್ನಾಟಕ ಸರ್ಕಾರದ ಐ.ಎ.ಎಸ್. ಹುದ್ದೆ ಅಧಿಕಾರಿಯಾಗಿ ತಮ್ಮ ಅಮೂಲ್ಯವಾದ ನಿಸ್ವಾರ್ಥ ಸೇವೆ ಮಾಡಿದ್ದಾರೆ. ಇವರು ಸರಳ ಸ್ವಭಾವವುಳ್ಳವರು ಸ್ವಲ್ಪವೂ ಆಡಂಬರ ತೋರದ ಮೃದು ಸ್ವಭಾವದ ವ್ಯಕ್ತಿಯಾಗಿದ್ದು ಜನರೊಂದಿಗೆ ಮಿಳಿತರಾಗಿದ್ದು ಎಲ್ಲಾ ರೀತಿಯ ಸಹಕಾರ ಮನೋಭಾವನೆಯನ್ನು ತೋರುತ್ತಿದ್ದರು. ಕನ್ನಡಿಗರಾದ ನಾವಿಂದು ಇವರು ಹಾಕಿ ಕೊಟ್ಟಿರುವ ಮೇಲ್ಪಂಕ್ತಿಯನ್ನು ಅನುಸರಿಸಬೇಕಾಗಿರುವುದು ಕನ್ನಡಿಗರಾದ ನಮ್ಮ ಪ್ರಥಮ ಕರ್ತವ್ಯವಾಗಿದೆ.

ಕನ್ನಡನಾಡಿನ ಇತಿಹಾಸ ಪರಂಪರೆ ಹೇಗೆ ಬೆಳೆದು ಬಂದಿತಲ್ಲಿ ಎಂದು ಇಂದು ನಮ್ಮ ಕನ್ನಡನಾಡ ಕುರಿತು ಸ್ಮರಿಸಿಕೊಂಡರೆ ಸಾಲದು ನಾವು ಸಹ ಹಿಂದೆ ಕನ್ನಡ ನಾಡು ಹೇಗೆ ನಾಡಿನ ಏಳಿಗೆಗಾಗಿ ಶ್ರಮಿಸಿ ನಮ್ಮ ಹಿರಿಯರು ಉಳಿಸಿ ಹೋಗಿರುವುದೇ ಇಂದು ನಮ್ಮ ಕಣ್ಣೆದುರು ಇದೆ ಎಂದು ನಾವು ಕುಳಿತರೆ ಸಾಲದು ನಮ್ಮ ಭಾಷೆ, ಸಂಸ್ಕೃತಿಯು ಹಿಂದಿನ ಕನ್ನಡಿಗರು ಬೆಳಸಿ ಹೋಗಿದ್ದಾರೆ ಅದನ್ನು ಕನ್ನಡಿಗರಾದ ನಾವು ಉಳಸಿ ಬೆಳಸಿಕೊಂಡು ಹೋಗುವುದೇ ನಮ್ಮ ಕರ್ತವ್ಯವಾಗಬೇಕು.

ಕನ್ನಡ ಭಾಷೆ, ಸಂಸ್ಕೃತಿಗೊಂದು ಇಲಾಖೆಯನ್ನು ಸರ್ಕಾರ ನೇಮಕ ಮಾಡಿದೆ. ಈ ಇಲಾಖೆ ನಿಜವಾಗಿಯೂ ಕನ್ನಡ ಭಾಷೆ, ಸಂಸ್ಕೃತಿಯ ಬೆಳವಣಿಗೆ ಕಾರಣವಾಗಿಲ್ಲ ನಮ್ಮ ನಾಡ ಭಾಷೆ ಬಳಸಬೇಕೆಂದು ಬೇರೆ ಭಾಷೆಯುವರಿಗೆ ಹೆದರಿ ನಾವೇಕೆ ಕೂಡಬೇಕು ನಮ್ಮ ಕನ್ನಡ ನಾಡಿನಲ್ಲಿ ನಮ್ಮ ಭಾಷೆ ಬೇಕು ಅದನ್ನು ನಾವು ಆಡಳಿತದಲ್ಲಿ ನಾವು ವ್ಯವಹರಿಸುವುದೇ ಎಂದು ಹೇಳುವ ನಿಜವಾದ ಕನ್ನಡಿಗ ನಮ್ಮ ಕರ್ನಾಟಕದಲ್ಲಿ

ಹುಟ್ಟಿಯೇ ಇಲ್ಲ. ಅದು ಹಾಗಿರಲಿ ನಮ್ಮ ಕನ್ನಡ ಜನತೆಗೇನು ತಮ್ಮ ನಾಡಿನ ಭಾಷೆ ನಮಗೆ ಬೇಕು ಎಂದು ಹೇಳುವ ಕನ್ನಡಿಗರು ಸಹ ಇನ್ನೂ ಹೆಚ್ಚಿತ್ತಿಲ್ಲದೇ ಪರಕೀಯ ದಾಸ್ಯ ಭಾಷಾ ಸಂಸ್ಕೃತಿಯ ಲೀನವಾಗಿದ್ದಾರೆ. ಇದನ್ನು ಎಲ್ಲಿಯವರೆಗೂ ಕನ್ನಡಿಗರು ಅನ್ಯ ಭಾಷಾ ಸಂಸ್ಕೃತಿ ವ್ಯಾಮೋಹ ತ್ಯಜಿಸಿ ತಾನಿರುವ ನಾಡ ಜನರ ನಿಜವಾದ ಕರ್ತವ್ಯದ ಕಡೆ ಗಮನ ಹರಿಸಿದಲ್ಲಿ ಕನ್ನಡದ ಜನ ಏನನ್ನಾದರೂ ಸಾಧಿಸಿ ಕನ್ನಡ ಜನರಿಗುಪಕಾರಿ ಗುರಿಯನ್ನು ಮುಟ್ಟಿಸಬಹುದಾಗಿದೆ. ಇಂತಹ ಮುಖ್ಯ ಭಾಷಾ ಸಂಸ್ಕೃತಿಯ ಬಗ್ಗೆ ಸಿದ್ದಯ್ಯ ಪುರಾಣಿಕ ಕನ್ನಡ ಜನತೆಗೆ ಎಚ್ಚರಿಸುತ್ತಾ ಬಂದರು.

ಜನತೆಗಾದರೂ ಅನ್ಯ ಭಾಷಾ ಇಂಗ್ಲೀಷ್ ವ್ಯಾಮೋಹಿತರಾಗಿ ಕರ್ನಾಟಕದಲ್ಲೆಲ್ಲೂ ಇಂಗ್ಲೀಷ್ ಶಾಲೆಗಳ ಹಾವಳಿಯಿಂದಾಗಿ ಕನ್ನಡ ಜನತೆ ತಮ್ಮ ಮಕ್ಕಳನ್ನು ಇಂಗ್ಲೀಷ್ ಶಾಲೆಗಳಿಗೆ ಸೇರಿಸಿ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ. ಕರ್ನಾಟಕದ ರಾಜಧಾನಿ ಎನಿಸಿರುವ ಬೆಂಗಳೂರಿನಲ್ಲಿ ಇಂಗ್ಲೀಷ್ ಶಾಲೆಗಳೇ ಹೆಚ್ಚಾಗಿ ಕಲೆ ಎತ್ತಲು ನಮ್ಮ ಕರ್ನಾಟಕ ಸರ್ಕಾರದ ಆಡಳಿತವೇ ಮುಖ್ಯ ಕಾರಣವಾಗಿದೆ. ಹೀಗಾಗಿರಲಾಗಿ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿಗೆ ವಲಸೆ ಬಂದ ಬೇರೆ ರಾಜ್ಯದ ಜನರು, ಪರದೇಶಿಯರು ಬಂದಿರಬಹುದು. ಆದರೆ ನಮ್ಮ ದೇಶ, ಭಾಷೆ, ಸಂಸ್ಕೃತಿಯನ್ನು ಅನ್ಯದೇಶ ಪರಕೀಯರ ಹಾಗೆ ಭಾಷೆ, ಸಂಸ್ಕೃತಿಯ ವ್ಯಾಮೋಹಕ್ಕೆ ಒಳಗಾಗಿದ್ದಾರೆ ನಮ್ಮ ಕನ್ನಡ ಜನರ ಗತಿಯಿಲ್ಲಾಗಿದೆ. ಕನ್ನಡ ಭಾಷೆಯನ್ನು ಇಲ್ಲಿ ಬೆಳಸಲು, ಬಳಸಲು ಇಲ್ಲಿನ ಜನರಿಗೆ ಬೇಡವಾಗಿದೆ. ಆದರೆ ಕನ್ನಡ ಜನರು ಇಂತಹ ಪರಿಸ್ಥಿತಿಯಲ್ಲಿ ಹೇಗೆ ಅವರ ಬದುಕು ತುಂಬಾ ಕಷ್ಟವಾಗಿದೆ. ಅಂತಹ ಕಷ್ಟ ಪರಂಪರೆಗೆ ದುರದೃಷ್ಟ ಕನ್ನಡಿಗರಾದ ನಾವೇ ಕಾರಣರಾಗಿದ್ದೇವೆ ಎಂದು ಸಹ ಸಿದ್ದಯ್ಯ ಪುರಾಣಿಕರು ತಿಳಿಸುತ್ತಿದ್ದರು.

ದಿವಂಗತ ಸಿದ್ದಯ್ಯ ಪುರಾಣಿಕರು ತಮ್ಮ ಬದುಕಿನ ಕಾಲದಲ್ಲಿ ಕನ್ನಡನಾಡ ಆಡಳಿತದಲ್ಲಿ ಹಾಗೂ ಕನ್ನಡ ನಾಡಲ್ಲೆಲ್ಲೂ ವ್ಯವಹಾರ ಭಾಷೆಯನ್ನಾಗಿ ತಂದಿತೆಂದರೆ ಇದನ್ನು ಕಂಡಾಗ ಸಿದ್ದಯ್ಯ ಪುರಾಣಿಕರು ಅದೆಷ್ಟು ಸಂತೋಷದಿಂದ ಅವರ ಮನಸ್ಸು ಪುಳಕಿತವಾಗಿ ಕನ್ನಡಿಗರಿಗೆ ನಿಜವಾದ ಸ್ವತಂತ್ರ ಸಿಕ್ಕಿದ್ದು ಕನ್ನಡಕ್ಕೆ ಸ್ಥಾನಮಾನ್ಯ ಕನ್ನಡ ಜನತೆಗೂ ಸಿಕ್ಕಿತೇ ಎಂದು ಕುಣಿದಾಡುತ್ತಿದ್ದರೇನೋ. ಆದರೆ ಅವರು ಬದುಕಿರುವಾಗ ಅವರ ಕಣ್ಣೆದುರು ಕನ್ನಡದ ನನಸಾಗುವ ಕಾಣದೆ ಕನ್ನಡದ ಕನಸಿನಲ್ಲಿಯೇ ಅವರು ಕಣ್ಣು ಮುಚ್ಚಿದರು. ಕನ್ನಡ ನಾಡ ಕನ್ನಡ ಕವಿಯಾಗಿ ಮನಸ್ಸಿಗೆ ನೆಮ್ಮದಿ ಸಿಗದೇ ನಮ್ಮಿಂದ ದೂರ ಸರಿದರು. ಆ ಕರ್ನಾಟಕದ ಆಗಸದಲ್ಲಿ ಮಿನುಗುತ್ತಿದ್ದ ಕನ್ನಡ ತಾಯಿಂದು ನಮ್ಮ ಕಣ್ಣಿಗೆ ಕಾಣದಂತಾಯಿತು.

# 'ಕಾವ್ಯಾನಂದ' ಬಿಟ್ಟು ಅಗಲಿದ ಪುರಾಣಿಕರು

'ಸುಧಾ' ಸಂಪಾದಕೀಯದ ಕೃಪೆಯಿಂದ

ಸೆಪ್ಟೆಂಬರ್ 94 18 ರಂದು ನಿಧನ ಹೊಂದಿದ ಡಾ॥ ಸಿದ್ದಯ್ಯ ಪುರಾಣಿಕರು ಸಾಹಿತ್ಯ, ಸುಸಂಸ್ಕೃತಿ ಮತ್ತು ದಕ್ಷತೆ–ಪ್ರಾಮಾಣಿಕತೆಗಳು ಹದವಾಗಿ ಮಿಳಿತಗೊಂಡಿದ್ದ ಆದರ್ಶಪ್ರಾಯವಾದ ವ್ಯಕ್ತಿತ್ವ. ಕಾವ್ಯಾನಂದ ಎಂಬ ಕಾವ್ಯನಾಮದಿಂದ ಮುವತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಡಾ॥ ಸಿದ್ದಯ್ಯ ಪುರಾಣಿಕರು ವೃತ್ತಿಯಿಂದ ಕವಿ, ಸಾಹಿತಿಯಾಗಿ ಪ್ರಖ್ಯಾತರಾಗಿದ್ದರು. ರಾಯಚೂರು ಜಿಲ್ಲೆಯ ದ್ಯಾಂಪುರದಲ್ಲಿ 1918ರ ಜೂನ್ 18 ರಂದು ಜನಿಸಿದ ಸಿದ್ದಯ್ಯ ಪುರಾಣಿಕರು ಕಲಬುರಗಿ ಕಾಲೇಜಿನಲ್ಲಿ ಪದವೀಧರರಾಗಿ ತಹಶೀ ತಹಶೀಲ್ದಾರ್ ಹುದ್ದೆಗೆ ನೇಮಕಗೊಂಡರು. ತಹಶೀಲ್ದಾರ್ ಹುದ್ದೆಯಿಂದ ಐ.ಎ.ಎಸ್. ದರ್ಜೆಗೆ ಏರಿ ಕಾರ್ಮಿಕ ಕಮೀಷನರ್ ಆಗಿ ನಿವೃತ್ತಿಗೊಳ್ಳುವವರಿಗೆ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ಪುರಾಣಿಕರು ದಕ್ಷತೆ, ಪ್ರಾಮಾಣಿಕತೆಗಳಿಂದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಸರ್ಕಾರ ಸೇವೆಯಲ್ಲಿನ ದಕ್ಷತೆ. ಪ್ರಾಮಾಣಿಕತೆಗಳಂತೆಯೇ ಪುರಾಣಿಕರ ಕನ್ನಡಪರ ಕಾಳಜಿಯೂ ಅನನ್ಯವಾದದ್ದು. ತಂದೆ, ತಾತಂದಿರ ಪ್ರಭಾವದಿಂದ ಸಾಹಿತ್ಯದಲ್ಲಿ ಒಲವು ಬೆಳಸಿಕೊಂಡು ವಿದ್ಯಾರ್ಥಿ ದೆಸೆಯಿಂದಲೇ ಕಾವ್ಯರಚನೆ ಆರಂಭಿಸಿದ ಸಿದ್ದಯ್ಯ ಪುರಾಣಿಕರಿಗೆ ತಹಶೀಲ್ದಾರ್ ಹುದ್ದೆ ದೊರೆತಾಗ ಕನ್ನಡದ ಹಿರಿಯಣ್ಣ ಮಾಸ್ತಿ "ಕನ್ನಡಕ್ಕೊಂದು ನಷ್ಟ" ಎಂದು ಉದ್ಗರಿಸಿದ್ದರಂತೆ. ಈ ಕ್ಷಣದಲ್ಲೇ "ನಾನು ಕನ್ನಡದ ಕೈಬಿಡುವುದಿಲ್ಲ. ನನ್ನ ಕೈಲಾದಷ್ಟು ಕನ್ನಡ ಸಾಹಿತ್ಯ ಸೇವೆ ಮಾಡುತ್ತೇನೆ' ಎಂದು ಸಂಕಲ್ಪ ಮಾಡಿದ ಪುರಾಣಿಕರು ಕೊನೆಯುಸಿರು ಇರುವವರೆಗೆ ಅದರಂತೆಯೇ ನಡೆದುಕೊಂಡರು,

ಬಾಲ್ಯದಲ್ಲೇ ಮನೆಯಲ್ಲಿ ತಂದೆಯಿಂದ ಜೈಮಿನಿ ಭಾರತ, ಶಬರ ಶಂಕರ ವಿಳಾಸ, ಪ್ರಭುಲಿಂಗ ಲೀಲೆ ಮೊದಲಾದ ಹಳೆಯ ಕಾವ್ಯಗಳನ್ನೂ ಛಂದಸ್ಸು ಶಾಸ್ತ್ರಗಳನ್ನೂ ಅಭ್ಯಾಸ ಮಾಡಿದ ಸಿದ್ದಯ್ಯ ಪುರಾಣಿಕರ ಮನಸ್ಸು ಸಹಜವಾಗಿಯೇ ಕಾವ್ಯದತ್ತ ಒಲಿಯಿತು, ಜಯಕರ್ನಾಟಕದಲ್ಲಿ ಮೊದಲ ಪದ್ಯ ಅಚ್ಚಾದಾಗ ಕಾವ್ಯಾನಂದರ ಉದಯವಾಯಿತು. ಪುರಾಣಿಕರು ಮೂಲತಃ ಕವಿಯಾದರೂ ಕಥೆ, ಕಾದಂಬರಿ, ನಾಟಕ, ವಚನ, ಶಿಶುಗೀತೆ ಪ್ರಕಾರಗಳಲ್ಲಿ ಅವರ ಸೃಜನಶೀಲತೆ ಕೆಲಸ ಮಾಡಿರುವುದನ್ನು ಗುರುತಿಸಬಹುದು. ಕನ್ನಡವಲ್ಲದೆ ಉರ್ದು, ಇಂಗ್ಲೀಷ್ ಭಾಷೆಗಳಲ್ಲೂ ಪಾಂಡಿತ್ಯ ಪಡೆದಿದ್ದ ಪುರಾಣಿಕರು ಉದ್ದಾಮವಾಗ್ಮಿಗಳೂ ಆಗಿದ್ದರು. ಜಲಪಾತ, ಕರುಣಾ ಶ್ರಾವಣ, ಕಲ್ಲೋಲಮಾಲೆ, ಮೊದಲು ಮಾನವನಾಗು, ಚರಗ ಸಿದ್ದಯ್ಯ ಪುರಾಣಿಕರ ಪ್ರಮುಖ ಕವನ ಸಂಗ್ರಹಗಳು, ಆತ್ಮಾರ್ಪಣ ಬಸವಣ್ಣನ ಬದುಕನ್ನು ಆಧರಿಸಿದ ನಾಟಕ. ವಚನಗಳ ರಚನೆಯಲ್ಲೂ ಪುರಾಣಿಕರು ಸಿದ್ಧಹಸ್ತರಾಗಿದ್ದು ಅವರು ಎರಡು ವಚನ ಸಂಗ್ರಹಗಳನ್ನೂ ಪ್ರಕಟಿಸಿದ್ದಾರೆ. ಅವರ ವಚನೋದ್ಯಾನ ಒಂದು ಅತ್ಯುತ್ತಮ ಕೃತಿ. ಅನುಭವ ಹಾಗೂ ಅನುಭಾವಗಳು ಹಾಲು ಸಕ್ಕರೆಯಂತೆ ಮೇಳವಿಸಿ ಬರೆದಿರುವ ಸ್ವತಂತ್ರ ಧೀರ ಸಿದ್ಧೇಶ್ವರ ಅಂಕಿತದ ಈ ವಚನಗಳು ಆಧುನಿಕ ಬದುಕಿನ ಸೂತ್ರಗಳಂತಿವೆ. ಶರಣ ಚರಿತಾಮೃತ ಸಿದ್ದಯ್ಯ ಪುರಾಣಿಕರ ಮಹತ್ವದ ಗದ್ಯ ಕೃತಿ ಶರಣರ ಜೀವನಗಳ ಗುಚ್ಛವಾದ ಈ ಕೃತಿ ಪುರಾಣಿಕರ ಗದ್ಯ ಕೃತಿಗಳಲ್ಲಿ ಶಿಖರಪ್ರಾಯವಾದದ್ದು ಎಂದು ವಿಮರ್ಶಕರು ಸರಿಯಾಗಿ ಗುರುತಿಸಿದ್ದಾರೆ.

ಸಾಹಿತ್ಯ ರಚನೆಯೊಂದಿಗೆ ಕನ್ನಡ ನಿಘಂಟು ಸಮಿತಿ, ರಾಜ್ಯ ಸಾಹಿತ್ಯ ಅಕಾಡೆಮಿ ಬಸವ ಸಮಿತಿ ಕರ್ನಾಟಕ ಜನಪದ ಟ್ರಸ್ಟ್ ಮೊದಲಾದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಪುರಾಣಿಕರು ಹಲವಾರು ಕೀರ್ತಿ ಮನ್ನಣೆಗಳಿಗೂ ಭಾಜನರಾದವರು. ಕಲ್ಬುರ್ಗಿಯಲ್ಲಿ ನಡೆದ (1987) ಐವತ್ತೆಂಟನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೆ ಪಾತ್ರರಾಗಿದ್ದ ಪುರಾಣಿಕರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಭಾರತೀಯ ಭಾಷಾ ಪರಿಷತ್ತಿನ ಭಿಲ್ವಾರ ಪ್ರಶಸ್ತಿ, ಮಾಳವಾಡ ಪ್ರಶಸ್ತಿ ಮೊದಲಾದ ಪ್ರಶಸ್ತಿ–ಪುರಸ್ಕಾರಗಳು ಲಭಿಸಿದ್ದವು. ಕುವೆಂಪು ಅವರು ವರ್ಣಿಸಿದಂತೆ "ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದ" ಸಿದ್ದಯ್ಯ ಪುರಾಣಿಕರು ಇನ್ನಿಲ್ಲ. ಅವರು ತಮ್ಮೊಳಗಿನ 'ಕಾವ್ಯಾನಂದ"ನನ್ನು ಕನ್ನಡಿಗರಿಗೆ ಬಿಟ್ಟು ಹೋಗಿದ್ದಾರೆ. ಮೊದಲು ಮಾನವನಾಗು ಎನ್ನುವ ಕವಿ "ಕಾವ್ಯಾನಂದ" ಕನ್ನಡಿಗರಿಗೆ ಮೇಲ್ಪಂಕ್ತಿಯಾಗಿ ಸದಾ ಇರುತ್ತಾರೆ.

ಜ್ಞಾನಸುಧಾ

# ಡಾ|| ಸಿದ್ಧಯ್ಯ ಪುರಾಣಿಕ್ 'ಕಾವ್ಯಾನಂದ'

**ಲೇಖಕ ; ಸತ್ಯಾನಂದ**

೧೯೩೫ರ ಅದೊಂದು ಮಹಾರಾತ್ರಿ, ಶ್ರೀ ಗುರು ಬಸವಮಠ (ಗುಲಬರ್ಗಾ) ದಲ್ಲಿ ಶ್ರೀ ಪುರಾಣಿಕರು ಒಂದು ನಾಟಕದಲ್ಲಿ ಪಾತ್ರವಹಿಸಿದ್ದರು. "ಬೆಳವಡೀ ಮಲ್ಲಮ್ಮ" ಎಂಬ ನಾಟಕದಲ್ಲಿ ಶಿವಾಜಿಯ ಪಾತ್ರ ನಲ್ಲಿ ಕಂಡರು. ಆ ನಾಟಕ ಬರೆದು, ಮಾರ್ಗದರ್ಶನ ಮಾಡಿದರೂ ಅವರೇ.

೧೯೩೬ರಲ್ಲಿ ಒಂದು ದಿನ ನಮ್ಮ ವಿದ್ಯಾರ್ಥಿ ನಿಲಯಕ್ಕೆ ಬಂದು, ನನ್ನ ಒಂದು ಕವನ ಕೇಳಲು ಇಚ್ಛಿಸಿದರು. ಆಗ ನನಗೆ ೧೫ ವರ್ಷ ಮಾತ್ರ. ಅದು ಆಂಗ್ಲ ಕವಿತೆ, ನನ್ನ ಮೊದಲ ಕವಿತೆ. — 'THE SUN RISE". ಆಮೇಲೆ ನಾವು ಒಂದೇ ರೂಮಿನಲ್ಲಿ ಇದ್ದು, ಎರಡು ವರ್ಷ ಅಭ್ಯಾಸ ಮಾಡಿದೆವು. ನನಗಿಂತಲೂ ಅವರು ಎರಡು ವರ್ಷ ಮುಂದೆ ಇದ್ದರು.

೧೯೩೮ ರಲ್ಲಿ ಅವರು "ಮೆಟ್ರಿಕ್ಯುಲೇಷನ್" ಪರೀಕ್ಷೆಯಲ್ಲಿ ಉಚ್ಚ ತರಗತಿಯಲ್ಲಿ ಪಾಸಾದರು. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ, ನಮ್ಮ ನಿಜಾಂ ಪ್ರಾಂತದಲ್ಲೇ ಮೊದಲನೇ ಪ್ರಶಸ್ತಿ ಪಡೆದರು.

೧೯೪೩ ರಲ್ಲಿ ಬಿ. ಎ. ಪಾಸಾಗಿ, ಸರ್ಕಾರಿ ಸೇವೆ ಸೇರಿದರು. ಮುಂದೆ ಐ. ಎ. ಎಸ್. ಪಡೆದು ೧೯೭೬ ರಲ್ಲಿ ನಿವೃತ್ತಿಪಡೆದರು.

ವಿದ್ಯಾರ್ಥಿಜೀವನದಲ್ಲಿಯೇ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು. ಗುಲಬರ್ಗಾ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಸಂಘ ಸ್ಥಾಪಿಸಿದರು. ವೀರಶೈವ ತರುಣ ಸಂಘಕ್ಕೆ ಕಾರಣಕರ್ತರಾದರು.

ತಮ್ಮ ಸಾಹಿತ್ಯ ಸಂಘಗಳಿಂದ, ನಾಡಿನ ಹಿರಿಯ ಸಾಹಿತಿಗಳನ್ನು ಆ ಪ್ರಾಂತಕ್ಕೇ ಬರಮಾಡಿಕೊಂಡರು. ಅವರ ಭಾಷಣಗಳನ್ನು ಕೇಳುವ ಭಾಗ್ಯ ನಮ್ಮದಾಯ್ತು. ಸರ್ವಶ್ರೀ ಬಿ. ಎಂ. ಶ್ರೀ. ಬೇಂದ್ರೆ, ಮುಗಳಿ, ವಿ.ಸೀ, ಗೋಕಾಕ್ ಮುಂತಾದವರು ನಮ್ಮ ಕಾಲೇಜನ್ನು ಸಂದರ್ಶಿಸಿದರು. ಭಾಷಣಗಳಿಂದ ನಮ್ಮನ್ನು ಚೇತನಗೊಳಿಸಿದರು. ಕನ್ನಡ ಸಾಹಿತ್ಯದ ರಸದೂಟವನ್ನಿತ್ತರು.

ಶ್ರೀ ಪುರಾಣಿಕರು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಪರಿಣಿತರು. ನಾಟಕ, ಕಾವ್ಯ, ಪ್ರಬಂಧಗಳನ್ನು ಬರೆದಿದ್ದಾರೆ. ಕೆಲವು ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ ಬೆಳವಡಿ ಮಲ್ಲಮ್ಮ, ಟಿ. ವಿ, ಆತ್ಮಾರ್ಪಣೆ ಅವರ ಪ್ರಸಿದ್ಧ ನಾಟಕಗಳು. ಜಲಪಾತ, ಕರುಣಾಶ್ರಾವಣ, ಮೊದಲು ಮಾನವನಾಗು ಅವರ ಶ್ರೇಷ್ಠ ಕಾವ್ಯಸಂಕಲನಗಳು. ರಜತರೇಖೆ ರೇಡಿಯೋ ನಾಟಕಗಳ ಸಂಕಲನ. ತುಪ್ಪರೊಟ್ಟಿಗೇಗೇ ಮಕ್ಕಳ ಕವನ ಸಂಕಲನ. ಅವರ ವಚನ ಸಂಕಲನಗಳು ಜನರ ಮೆಚ್ಚುಗೆ ಪಡೆದಿವೆ. "ವಚನೋದ್ಯಾನ" ಮತ್ತು "ವಚನನಂದನ" "ಶರಣ ಚರಿತಾಮೃತ," ಅವರ ಈ ಶತಮಾನದ ಮೇರು ಕೃತಿ ಇವು ಸರ್ಕಾರದ ಪ್ರಶಸ್ತಿಯೂ ಇವರಿಗೆ ಸಿಕ್ಕಿತು.

ಬಸವ ಸಮಿತಿಯ ಉಪಾಧ್ಯಕ್ಷರಾಗಿ ಕೆಲಕಾಲ ಕೆಲಸ ಮಾಡಿದರು. "ಬಸವಪಥ"ದ ಸಂಪಾದಕರಾಗಿಯೂ ಸೇವೆ ಮಾಡಿದರು.

೧೯೯೪ರಲ್ಲಿ ಅನಾರೋಗ್ಯದಿಂದ ನಿಧನರಾದರು "ಕಾವ್ಯಾನಂದ" ಪ್ರಶಸ್ತಿ ಸ್ಥಾಪಿಸಿ, ಅದರ ಮೂಲಕ ಒಳ್ಳೆಯ ಸಾಹಿತ್ಯಕ್ಕಾಗಿ ಪ್ರತಿ ವರ್ಷ ನಾಲ್ಕು ಸಾವಿರ ರೂಪಾಯಿ ಉತ್ತಮ ಸಾಹಿತಿಗಳಿಗೆ ಕೊಡುತ್ತಾಲಿದ್ದಾರೆ.

# ವಚನೋಧ್ಯಾನ - ಒಂದು ಪರಿಚಯ

—ಶ್ರೀ ಟಿ. ಆರ್. ಮಹಾದೇವಯ್ಯ

ಡಾ॥ ಸಿದ್ಧಯ್ಯ ಪುರಾಣಿಕರು ಆಧುನಿಕ ಕನ್ನಡ ಸಾಹಿತ್ಯದ ಹೆಸರಾಂತ ಸಾಚಿತಿ. ಕವನ. ಕಥೆ, ಕಾದಂಬರಿ, ಪ್ರಬಂಧ, ನಾಟಕ. ಮಕ್ಕಳ ಸಾಹಿತ್ಯ ಮೊದಲಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಸರ್ಕಾರದ ಉನ್ನತ ಅಧಿಕಾರಿಯಾಗಿ ಹೆಸರುಗಳಿಸಿದಂತೆಯೇ ಬರಹಗಾರರಾಗಿ ಸಾಕಷ್ಟು ಜನ ಪ್ರಿಯತೆಯನ್ನು ಅವರು ಗಳಿಸಿಕೊಂಡಿದ್ದರು, ಶಿವ ಶರಣರ, ಶಿವಯೋಗಿಗಳ ಬದುಕು–ಬರಹಗಳಿಂದ ಆಕರ್ಷಿತರಾಗಿದ್ದ ಅವರು ವಚನಗಳಿಗೆ ಮಾರುಹೋದದ್ದು ಸಹಜವೇ. ಅವರ ಕಾವ್ಯಶಕ್ತಿ ವಿವಿಧ ಸಾಹಿತ್ಯ ಪ್ರಕಾರಗಳ ಪಾತಳಿಯಲ್ಲಿ ಹರಿದರೂ ಅದು ತೃಪ್ತಿ ಕಂಡುಕೊಂಡದ್ದು ವಚನ ಮಾಧ್ಯಮದಿಂದಲೇ ಎನ್ನಬಹುದು. ಅವರು ಸಾವಿರಾರು ವಚನಗಳನ್ನು ರಚಿಸಿದ್ದಾರೆ, ಅವರ ವಚನಗಳ ಅಂಕಿತ "ಸ್ವತಂತ್ರ ಧೀರ ಸಿದ್ಧೇಶ್ವರ," ಅವರು ಎರಡು ವಚನ ಸಂಕಲನಗಳನ್ನು ಹೊರತಂದಿದ್ದಾರೆ, 'ವಚನೋಧ್ಯಾನ' (1977). ಇದರಲ್ಲಿ 525 ವಚನಗಳಿವೆ. ಎರಡನೆಯದು : ವಚನ ನಂದನ (1983). ಇದರಲ್ಲಿ 475 ವಚನಗಳಿವೆ. ಮೊದಲನೆಯದಕ್ಕೆ ಡಾ॥ ಹಾಮಾ ನಾಯಕ ಅವರು, ಎರಡನೆಯದಕ್ಕೆ ಡಾ॥ ಹೆಚ್. ತಿಪ್ಪೆರುದ್ರಸ್ವಾಮಿಯವರು ಮುನ್ನುಡಿ ಬರೆದು ಕೃತಿಗಳನ್ನು ಪರಿಚಯಿಸಿದ್ದಾರೆ,

ಇಲ್ಲಿ ವಚನೋಧ್ಯಾನವನ್ನು ಪರಿಚಯಿಸುವ ಉದ್ದೇಶವಿಟ್ಟುಕೊಳ್ಳಲಾಗಿದೆ. ಇದೊಂದು ಜನಪ್ರಿಯ ಕೃತಿ, ಪುರಸ್ಕಾರಗಳ ಮೇಲೆ ಪುರಸ್ಕಾರಗಳು ಬಂದುದೇ ಇದಕ್ಕೆ ಸಾಕ್ಷಿ. ವಚನೋಧ್ಯಾನಕ್ಕೆ ರಾಜ್ಯ ಅಕಾಡಮಿ ಅತ್ಯುತ್ತಮ ಪುಸ್ತಕ ಪ್ರಶಸ್ತಿ ನೀಡಿತು. ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ॥ ಮಾಳವಾಡ ಬಹುಮಾನ ಬಂತು. ಅದನ್ನು ಹಿಂದಿ, ಮರಾಠಿ ಮೊದಲಾದ ಭಾಷೆಗಳಿಗೆ ತರ್ಜುಮೆ ಮಾಡಿಸಲಾಗಿದೆ. ಕೊನೆಗೆ ಈ ಕೃತಿ ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಭಿಲ್ವಾರ ಪ್ರಶಸ್ತಿಯನ್ನು ಪಡೆದು ರಾಷ್ಟ್ರಮಟ್ಟದ ಪುರಸ್ಕಾರಕ್ಕೆ ಪಾತ್ರವಾಯಿತು. ಸಿದ್ಧಯ್ಯ ಪುರಾಣಿಕ ಅವರದು ಸೂಕ್ಷ್ಮಸಂವೇದನಾಶೀಲ ಮನಸು. ಅವರು ಸುತ್ತಣ ಸಮಾಜವನ್ನು ಅದರಲ್ಲಿ ಜೀವಿಸುವ ವ್ಯಕ್ತಿಗಳನ್ನು ಬಿಡುಗಣ್ಣಿನಿಂದ ನೋಡಿದರು ; ವಿಚಾರತ್ಮಕ ದೃಷ್ಟಿಯಿಂದ ವಿಶ್ಲೇಷಿಸಿದರು, ಮಾಗಿದ ಮನದಿಂದ ದರ್ಶಿಸಿದರು. ಆಗ ಗೋಚರವಾದ ಅಂಶಗಳಿಗೆ ಮಾತಿನ ರೂಪ ಕೊಟ್ಟರು. ಹೀಗಾಗಿ ಆವರ ವಚನಗಳು ಸುತ್ತಲ ಪರಿಸರಕ್ಕೆ, ಸಮಕಾಲೀನ ಸಮಸ್ಯೆಗಳಿಗೆ, ಅವ್ಯವಸ್ಥೆಗಳಿಗೆ ಪ್ರತಿಕ್ರಿಯೆಗಳು ಶಬ್ದರೂಪದಲ್ಲಿ ಹೊಮ್ಮಿವೆ. ಒಂದೆರಡು ಉದಾಹರಣೆಗಳನ್ನು ನೋಡೋಣ :

ವಿದ್ಯೆಬಂತು, ವಿನಯ ಹೋಯ್ತು
ಬುದ್ಧಿಬಂತು, ಶ್ರದ್ಧೆ ಹೋಯ್ತು
ಶ್ರದ್ಧೆಬಂತು, ವಿವೇಚನೆ ಹೋಯ್ತು
ಸಮೃದ್ಧಿಬಂತು, ಸಂಸ್ಕೃತಿ ಹೋಯ್ತು
ವಿಜ್ಞಾನಬಂತು, ಸಮಾಧಾನ ಹೋಯ್ತು
ಶರೀರಸ್ವಾಸ್ಥ್ಯಬಂತು, ಚಿತ್ತಸ್ವಾಸ್ಥ್ಯ
ಹೋಯ್ತು
ದೀರ್ಘಾಯುಷ್ಯಬಂತು, ಜೀವನ ಸ್ವಾಸ್ಥ್ಯ
ಹೋಯ್ತು
ಬೋಧನೆಬಂತು, ಸಾಧನೆ ಹೋಯ್ತು
ಮಾತುಬಂತು, ಕೃತಿಯು ಹೋಯ್ತು
ಜಾತಿಬಂತು, ಪ್ರೀತಿ ಹೋಯ್ತು
ಸ್ವಾತಂತ್ರ್ಯಬಂತು, ಸೌಜನ್ಯ ಹೋಯ್ತು
ಸಿದ್ಧಯ್ಯ ಪುರಾಣಿಕ ಬಂದ, ಸ್ವತಂತ್ರಧೀರ
ಸಿದ್ಧೇಶ್ವರ ಹೋದ

ಆಧುನಿಕ ಜೀವನದಲ್ಲಿ ಅನೇಕ ಹೊಸವು ಬಂದಿವೆ. ಆದರೆ ಅದರೊಟ್ಟಿಗೇ ಕೆಲವು ಮೌಲ್ಯಗಳು ನಮ್ಮಿಂದ ದೂರವಾಗಿವೆ ಎಂಬುದನ್ನು ಬಹು ಜನ ಗಮನಿಸಿಲ್ಲ. ಅವು ಇಲ್ಲದೆ ಹೋಗಿ ನಮ್ಮ ಬದುಕು ಎಷ್ಟು ಶುಷ್ಕ ? ಎಷ್ಟು ಅರ್ಥಹೀನ ? ಹೊರಗಿನ ಪ್ರಗತಿಯ ಜೊತೆಗೆ ಅಂತರಂಗದ ಚೆಲುವನ್ನು ಹೆಚ್ಚಿರುವ, ಬದುಕನ್ನು ಅರ್ಥಪೂರ್ಣವಾಗಿರುವ ಆಚಾರ-ವಿಚಾರಗಳು ನಮ್ಮ ಜೀವನದಿಂದ ಕಣ್ಮರೆಯಾಗುತ್ತಿವೆಯಲ್ಲಾ ಅವನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕಲ್ಲವೆ ? ಈ ವಿಚಾರವಾಗಿ ಪುರಾಣಿಕರು ಆಲೋಚನೆ ನಡೆಸಿದ್ದಾರೆ. ತಮ್ಮ ಅನಿಸಿಕೆಗಳನ್ನು ಪರಿಣಾಮಕಾರಿಯಾಗಿ ಮೇಲಿನ ವಚನದಲ್ಲಿ ವ್ಯಕ್ತಮಾಡಿದ್ದಾರೆ.

ಆಧುನಿಕ ಕಾಲದಲ್ಲಿ ಶಿಕ್ಷಣ ಸೌಲಭ್ಯಗಳು ಹೆಚ್ಚಿವೆ. ಬಹಳ ಜನ ವಿದ್ಯಾವಂತರಾಗುತ್ತಿದ್ದಾರೆ, ಇದು ಆಗ ಬೇಕಾದದ್ದೇ ನಿಜ. ಆದರೆ ಅಂಥ ವಿದ್ಯೆಯೊಡನೆ ಇರಲೇಬೇಕಾದ ವಿನಯಗುಣ ಕಾಣೆಯಾಗುತ್ತಿದೆ. ಜನ ಹೆಚ್ಚು ಹೆಚ್ಚು ಬುದ್ಧಿವಂತರಾಗುತ್ತಿದ್ದಾರೆ. ಆದರೆ ಅವರಲ್ಲಿ ಶ್ರದ್ಧೆ ಮಾತ್ರ ಇಲ್ಲ. ಒಂದು ಪಕ್ಷ ಶ್ರದ್ಧೆ ಬಂದರೂ ತಾರತಮ್ಯಜ್ಞಾನವಿಲ್ಲದೆ ಅದು ವ್ಯರ್ಥವಾಗುತ್ತಿದೆ. ಆಧುನಿಕ ಮಾನವನು ವಿಜ್ಞಾನದಿಂದ ಪ್ರಕೃತಿಯ ರಹಸ್ಯವನ್ನು ಭೇದಿಸಿದನು. ಇದರಿಂದ ಹೊಸ ಸಂಪನ್ಮೂಲಗಳು ದೊರಕಿದವು ; ಸಂಮೃದ್ಧಿ ಹೆಚ್ಚಿತು. ಆದರೆ ಜನರ ಜೀವನಾಡಿಯಾಗಿರಬೇಕಾದ ಸಂತೃಪ್ತಿ ಕಾಣೆಯಾಯಿತು. ಮನುಷ್ಯನ ಜ್ಞಾನದ ಕ್ಷಿತಿಜ ವಿಸ್ತಾರವಾಗುತ್ತಾ ಹೋಯಿತು. ಆದರೆ ಮೊದಲಿನ ಶಾಂತಿ ನೆಮ್ಮದಿಗಳು ಮಾತ್ರ ಜನಜೀವನದಿಂದ ದೂರವಾದವು. ದೇಹದ ಆರೋಗ್ಯದ ಬಗ್ಗೆ ವಿಷೇಶ ಚಿಕಿತ್ಸೆಗಳು, ಔಷಧೋಪಚಾರಗಳು ಬಂದವು. ಆದರೆ ಮಾನಸಿಕ ಆರೋಗ್ಯ ಮಾತ್ರ ಇಲ್ಲವಾಯಿತು. ಹೆಚ್ಚುಕಾಲ ಬದುಕುವ ರಹಸ್ಯವನ್ನು ಹೊಸ ಆರೋಗ್ಯ ಶಾಸ್ತ್ರ ಕಲಿಸಿತು. ದೀರ್ಘಾಯುಸ್ಸು ಇದ್ದರೆ ಸಾಕೆ ? ಜೀವನದ ಸ್ವಾರಸ್ಯಗಳೇ ಇಲ್ಲವಾಗುತ್ತೆಯಲ್ಲ ! ಎಲ್ಲೆಲ್ಲೂ ಮಾತಿನ ಶೂರರೇ, ಕಾಯಕದ ಕಲಿಗಳು ಮಾತ್ರ ಇಲ್ಲ. ನಡೆ-ನುಡಿಗಳೊಂದಾದ ಜನ ಅಪರೂಪವಾಗುತ್ತಿದ್ದಾರೆ. ಎಲ್ಲದಕ್ಕೂ ಜಾತಿ ಮುಂದಾಗುತ್ತಿದೆ. 'ಮಾನವ ಜಾತಿ ಒಂದೇ ವಲಂ' ಎಂಬ ಕವಿವಾಣಿ ಇಂದು ಅರ್ಥ ಕಳೆದುಕೊಂಡಿದೆ. ಜನರನ್ನು ಒಂದಾಗಿ ಬೆಸೆಯುವ ಪ್ರೀತಿ ಇಂದು ಅಪೂರ್ವವಾಗುತ್ತಿದೆ. ಸಮಾಜದಲ್ಲಿ ತಾರತಮ್ಯದ ಅಡ್ಡಗೋಡೆಗಳು ಏಳುತ್ತಿವೆ ; ಮಾನವರ ನಡುವಿನ ಸ್ನೇಹ ಸೇತು ಕಡಿದು ಬಿದ್ದಿದೆ. ಮಾನವನ ಅಲ್ಪತೆಗಳು ಹದಗೆಡವಿವೆ. ದೇವಗುಣಗಳು ತಳ ಸೇರಿವೆ. ನಾವು ಏನನ್ನೊ ಸಾಧಿಸಿದಂತೆ ಆಗಿದೆ ? ಎಂದು ಕವಿ 'ಕಾವ್ಯಾನಂದ'ರು ಆಧುನಿಕ ಜೀವನದ ಲಾಭ-ನಷ್ಟಗಳ ತಃಖ್ತೆಯ ಸುರುಳಿಯನ್ನು ಬಿಚ್ಚಿ ನಮ್ಮುಂದೆ ಇಟ್ಟಿದಾರೆ : ಎಚ್ಚೆತ್ತುಕೊಳ್ಳಲು ಕರೆ ನೀಡಿದ್ದಾರೆ.

ಕವಿ ತನ್ನ ಅಂತರಂಗದ ಪದರುಗಳನ್ನು ಬಿಚ್ಚಿಡುವ ಹಾಗೆಯೇ, ಲೋಕದ. ಸಮಾಜದ ತೊಂದರೆ-ತೊಡಕುಗಳನ್ನು ಬಿಚ್ಚಿಟ್ಟಿದ್ದಾರೆ. ಆತ್ಮನ ಕಾಳರಾತ್ರಿಯ ಬಗ್ಗೆ ಚಿಂತಿಸಿದಂತೆ, ಅದನ್ನು ಕಳೆಯಲು ಕಾಳಜಿ ತೋರುವಂತೆ ಅವರು ತಮ್ಮ ಸುತ್ತಲ ಪರಿಸರವನ್ನು ಮುತ್ತಿರುವ ಕರಾಳ ಕತ್ತಲೆಯನ್ನು ಹೋಗಲಾಡಿಸುವ ಬಗ್ಗೆ ಯೋಚಿಸುತ್ತಾರೆ, ದಾರಿ ಸೂಚಿಸುತ್ತಾರೆ ಹೀಗಾಗಿ ಅವರ ವಚನಗಳು ಶುದ್ಧ ಜೀವನ ಸಂಹಿತೆಗಳಾಗಿವೆ. ಸಮಾಜದ ದುರವಸ್ಥೆಯ ಬಗ್ಗೆ ಅವರಿಗೆ ಅಸಮಾಧಾನವಿದೆ. ವಿವಿಧ ಒರೆ-ಕೊರೆ, ಅನ್ಯಾಯ-ಅಸಮತೆಗಳು ಅವರನ್ನು ಕೆರಳಿಸುತ್ತವೆ. ಅಂತೆಯೇ ಅವರು ಸಿಡಿಯುತ್ತಾರೆ. ಆದರೆ ಆ ಸಿಡುಕಿನ ಹಿಂದೆ ದಯಾರ್ಧ ಮಾನವ ಹೃದಯ ಸಂಗನ ವಿದೆಯೆಂಬುದನ್ನಲ್ಲಿ ನಾವು ಮರೆಯುವಂತಿಲ್ಲ.

ಡಾ॥ ಹಾ.ಮಾ. ನಾಯಕರ ಮಾತು ಇಲ್ಲಿ ಉಲ್ಲೇಖನಾರ್ಹ. "ಪುರಾಣಿಕರ ವಚನಗಳಲ್ಲಿ ಬಹು ಧರ್ಮಗಳಿಲ್ಲ, ಒಂದೇ ಧರ್ಮ ; ಅದು ಜೀವನ ಧರ್ಮ ; ಬಹು ಮತಗಳಿಲ್ಲ, ಒಂದೇ ಮತ, ಅದು ಮಾನವ ಮತ ಬಹು ಪಥಗಳಿಲ್ಲ, ಒಂದೇ ಪಥ, ಅದು ಶಿವಪಥ ! ಕಾಣದ ಕೈಯೊಂದು ಕಾಯುತ್ತಿದೆ ಎಂಬ ಭಕ್ತನ

ಪರಮ ಶ್ರದ್ಧೆ ಉದ್ದಕ್ಕೂ ತೋರುತ್ತದೆ, ಈ ಶ್ರದ್ಧೆ ಮುಗ್ಧತೆಯಾದರೂ ಬಲವಾದದ್ದು, ಅದು ಧರ್ಮಜಡ ವಾದದ್ದಲ್ಲ, ಜೀವನ ವಿವೇಕದ್ದು,

ತೊಟ್ಟಿಲಲ್ಲಿರುವ ಹಸುಗೂಸಿಗೂ
ತನ್ನ ತಾಯಿಯೊಬ್ಬಳಿಹಳೆಂಬ ತಿಳಿವಳಿಕೆ
ಯಿರುವಂತೆ

ಪಟ್ಟಿಯೊಳಗಣ ಕುರಿಮರಿಗೂ
ಕಾಯ್ವ ಕುರುಬನೊಬ್ಬನಿಹನೆಂಬ ತಿಳಿವಳಿಕೆ
ಯಿರುವಂತೆ

ನೀನು ನನಗಿರುವಿಯೆಂಬ ತಿಳಿವಳಿಕೆ ನನಗೆ
ಕೈ ಕೆಲಸದಲ್ಲಿದ್ದರೂ ತಾಯಿಯ ಮನ
ತೊಟ್ಟಿಲದ ಕಂದನಲ್ಲಿರುವಂತೆ
ಸೃಷ್ಟಿಕಾರ್ಯ ನಿರತನಾಗಿಯೂ ನೀನು
ನನ್ನ ಯೋಗಕ್ಷೇಮ ರತನೆಂಬ ನಂಬಿಕೆ ನನಗೆ॥

ಎನ್ನುವ ಅವರಲ್ಲಿರುವ ದೈವ ಶ್ರದ್ಧೆ ಅನನ್ಯವಾದದು, ಅನುಕರಣೀಯವಾದುದು.

ಸಿದ್ಧಯ್ಯ ಪುರಾಣಿಕರು ವಚನಗಳನ್ನು ತುಂಬ ಶೋಕೆ ತೂಕದಿಂದ ಹೆಣೆದಿದ್ದಾರೆ. ಅವರ ಗಾಢ ವಾದ ಲೋಕಾನುಭವ, ಬಹುಶ್ರುತತ್ವಗಳು ಅಲ್ಲಿ ಹರ ಳುಗಟ್ಟಿವೆ. "ಆದಷ್ಟು ಅಡಕವಾಗಿ ಆದರೂ ಸ್ಪಷ್ಟ ವಾಗಿ, ಸಮುಚಿತ ಪದ ಭೂಯಿಷ್ಟವಾಗಿ, ಅಭಿವ್ಯಕ್ತಿ ವೈವಿಧ್ಯದಿಂದ ಸುಸ್ಪಷ್ಟವಾಗಿ ಹೃದ್ಯತೆಗೆ ಹತ್ತಿರವಾಗಿ ರಲೆಂದು ಹವಣಿಸಿದ್ದೇನೆ... ಕನ್ನಡ ನುಡಿಯ ಹೊಸ ಸಾಧ್ಯತೆಗಳನ್ನು ಸೂರೆಗೊಂಡಿರದಿದ್ದರೂ ಅದರಲ್ಲಿದ್ದ ಬೆಡಗುಗಳನ್ನು ಬಳಸಿಕೊಳ್ಳಲು ಬಹಳಷ್ಟು ಶ್ರಮಿಸಿ ದ್ದೇನೆ... ಬಹಳ ಎಚ್ಚರಿಕೆಯಿಂದ ಒಂದೊಂದು ಸಾಲನ್ನು ತೀಕ್ಷ್ಣ ಪರೀಕ್ಷಣಕ್ಕೆ ಗುರಿಪಡಿಸುತ್ತಾ ಮುಂದುವರಿದಿದ್ದೇನೆ. ಹೀಗಿದ್ದೂ ಇವುಗಳಲ್ಲಿ ಬಯ ಸಿದ ಭಾಷೆ ಬರಲ್ಲೇ ಇಲ್ಲವೆಂಬ ಕೊರಗು ನನಗೆ" (ಆರಂಭದ ಮಾತು, xxii) ಎಂಬ ಅವರ ಮಾತುಗಳಲ್ಲಿ ಅವರ ಉದ್ದೇಶ ಸ್ಪಷ್ಟವಾಗಿದೆ,

ಅವರ ಸೌಜನ್ಯದ ಮಾತುಗಳು ಅವರಿಗೆ ಶೋಭೆ ಯೆನಿಸಿವೆ, ಆದರೆ ಪುರಾಣಿಕರು ತಮ್ಮ ವಚನಗಳಿಂದ ಆಧುನಿಕ ವಚನಕಾರರ ಶ್ರೇಣಿಯಲ್ಲಿ ಸ್ಥಿರವಾದ ಸ್ಥಾನ ವನ್ನು ಗಳಿಸಿದ್ದಾರೆಂಬ ಮಾತಂತೂ ನಿಜ. ಸಿದ್ಧಯ್ಯ ಪುರಾಣಿಕರು ಉತ್ತಮ ಕವಿ ಹಾಗೂ ದಾರ್ಶನಿಕ. ಇವೆರಡರ ಸಾಮರಸ್ಯವನ್ನು ನಾವು ಅವರ ವಚನಗಳು ಆಧುನಿಕ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ,

ಆಧುನಿಕ ವಚನಕಾರರ ವೈಶಿಷ್ಟ್ಯಗಳನ್ನು ಡಾ॥ ಹಾ.ಮಾ. ನಾಯಕರು ಪಟ್ಟಿ ಮಾಡುತ್ತಾ ಪುರಾಣಿಕರ ಬಗ್ಗೆ ಹೇಳಿರುವ ಮಾತು ಮನನೀಯವಾಗಿದೆ. "ಮುಖ್ಯ ಆಧುನಿಕ ವಚನಕಾರರಾದ ಶ್ರೀ ಜ.ಚ.ನಿ ಅವರಲ್ಲಿ ಚನ್ನ ಬಸವಣ್ಣನ ಪಾರಿಭಾಷಿಕತೆಯಿದೆ. ; ರಂಗಣ್ಣನವರಲ್ಲಿ ಬಸವಣ್ಣನವರ ವ್ಯಾವಹಾರಿಕತೆಯಿದೆ : ಪರಮೇಶ್ವರ ಭಟ್ಟರಲ್ಲಿ ಅಕ್ಕಮಹಾದೇವಿಯ ಕಲಾತ್ಮಕತೆಯಿದೆ, ಸಿದ್ಧಯ್ಯ ಪುರಾಣಿಕರಲ್ಲಾದರೋ ಅಲ್ಲಮನ ಅನುಭಾವ ನಿಗೂಢತೆ ಸುಳಿಯುತ್ತವೆ (ಮುನ್ನುಡಿ xix), □

# ಕಾವ್ಯಾನಂದ - ಒಂದು ನೆನಪು

ಲೇಖಕಿ : ಶ್ರೀಮತಿ ಎಸ್. ಕೆ. ರಮಾದೇವಮ್ಮ

ಎತ್ತರವಾದ ಭವ್ಯ ವ್ಯಕ್ತಿತ್ವ, ನಗುಮುಖ, ಗಂಭೀರ ಮನೋಭಾವ, ಮುಗ್ಧ ಮನೋಭಾವ, ಮೇಲು ಕೀಳುಗಳೆಂಬ ಭೇದವಿಲ್ಲದೆ ಎಲ್ಲರೊಡನೆಯೂ ಬೆರೆತು ಸಂತೋಷದಿಂದಿರುತ್ತಿದ್ದರು. ವ್ಯಕ್ತಿಗತ ಏನೇ ಕಷ್ಟವಿರಲಿ ಅದು ಯಾರಿಗೂ ಪ್ರಕಟವಾಗುತ್ತಿರಲಿಲ್ಲ.

ಐ. ಎ. ಎಸ್. ಅಧಿಕಾರಿಯಾಗಿ. ಸರಕಾರದ ನಾನಾ ಇಲಾಖೆಗಳಲ್ಲಿ. ವಿವಿಧ ಹುದ್ದೆಗಳಲ್ಲಿ ಅಧಿಕಾರ ನಿರ್ವಹಿಸಿ, ಒಬ್ಬ ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರನಾಗಿ, ಸಾಹಿತ್ಯ ಲೋಕದಲ್ಲಿ ಹೆಸರು ಮಾಡಿದ ಪುರಾಣಿಕರ ಪಾಂಡಿತ್ಯ ಅಪಾರವಾದುದು.

ಅಷ್ಟು ದೊಡ್ಡ ವ್ಯಕ್ತಿ ಒಂದಿನಿತಾದರೂ ದೊಡ್ಡಸ್ಥಿಕೆಗಳನ್ನು ತೋರದೆ, ಸಾಮಾನ್ಯರೊಡನೆ ಬೆರೆತು. ಸಾಮಾನ್ಯರಂತೆ ಎಲ್ಲರೊಡನೆಯೂ ಪ್ರೀತಿ ವಿಶ್ವಾಸಗಳಿಂದ ಬೆರೆಯುತ್ತಿದ್ದರು. ಕಾವ್ಯಾನಂದರ ಸರಳತೆ, ಸೌಹಾರ್ದತೆಗಳ ಮೂರ್ತಿಯಾತ, ಹಸುಗೂಸಿನಂತೆ ಮುಗ್ದ ಸ್ವಭಾವವುಳ್ಳ ಮುಖವನ್ನು ಯಾರುತಾನೆ ಮರೆಯಲು ಸಾಧ್ಯ.

"ಪುಟ್ಟಿಸುವುದಾದರೆ ನನ್ನನ್ನು ಕನ್ನಡ ನಾಡಿನಲ್ಲಿ ಹುಟ್ಟಿಸು ತಂದೆ" ಎಂದು ಸಿದ್ದೇಶ್ವರನನ್ನು ಮೊರೆ ಹೊಕ್ಕ ಸದ್ವಿನಯ ಮೂರ್ತಿ ಕಾವ್ಯಾನಂದ, ಕನ್ನಡ ನಾಡು ನುಡಿಗೆ ಸಂಬಂಧಿಸಿದ ಯಾದವೀ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಜೀವನಪೂರ್ತಿ ಶ್ರಧ್ಧೆಯಿಂದ ದುಡಿದರು, "ಕಾವ್ಯಾನಂದ"

ನಗುವ ಹೂಗಳ ನೋಡಿ, ನಗುವ ಮಕ್ಕಳ ಜೋಡಿ, ನಗುವ ನೆರೆ ತೆರೆ ನೋಡಿ, 'ನಗಲು ಕಲಿ, ನಗಿಸ ಕಲಿ' ಎಂದು ತಾನು ಹೇಳಿದಂತೆ ನಗುವ ಮಕ್ಕಳ ಜೊತೆ ಬೆರೆತು ಮಕ್ಕಳಿಗಾಗಿ ರಚಿಸಿದ ಕಾವ್ಯಾನಂದರ ಕಾವ್ಯಗಳು ಜನಪ್ರಿಯವಾಗಿವೆ. ಅವರ 'ಶರಣಚರಣಾಮೃತ' 'ವಚನೋದ್ಯಾನ' ಹಾಗೂ "ಮರುಳಸಿದ್ಧನ ಕಂತೆ" ಎಂಬ ರಚನೆಗಳು ಚಿಂತನಶೀಲ ಗ್ರಂಥಗಳಾಗಿವೆ. ಇವರು ಪ್ರತಿಭಾನ್ವಿತರು, ಚಿಂತನಶೀಲರು, ಅನುಭವಿಗಳು. ಆಧುನಿಕ ವಚನಕಾರರು, ಎಲ್ಲಕ್ಕಿಂತ ಹೆಚ್ಚಾಗಿ ಮಾನವತಾವಾದಿಗಳು.

'ಮರುಳಸಿದ್ಧನ ಕಂತೆ' ಎಂಬ ಪುಸ್ತಕದಲ್ಲಿ ಪುರಾಣಿಕರು ಹೀಗೆ ಹೇಳುತ್ತಾರೆ. "ಮಂಕುತಿಮ್ಮನಿಗೆ ಒಬ್ಬ ತಮ್ಮನನ್ನು ತಂದಿರುವೆ, ಎಂದು. ಅವನೇ ಮರುಳು ಸಿದ್ಧ". ಇದು ನಿಜವಾಗಿಯೂ ಸರಿಯಾದ ಮಾತೇ. ಡಿ. ವಿ. ಜಿ. ಯವರು ತಮ್ಮ ಅನುಭವಗಳಿಗೆ ಮಂಕುತಿಮ್ಮನಲ್ಲಿ ರೂಪು ಕೊಟ್ಟಂತೆ, ಪುರಾಣಿಕರು ಮರುಳುಸಿದ್ಧನಲ್ಲಿ ಅನುಭವ ತರಂಗಿಣಿಯನ್ನು ಹರಿಸಿದ್ದಾರೆ.

"ಧರಣಿಗೆ ಶರಣೆನ್ನು, ಭರತಮಾತೆಗೆ ಬಾಗು, ಕರುನಾಡಿಗೆ ಗರ್ಜಿಸಲು, ಸದ್ಭಕ್ತಿಸದುವೇ". ಎಂಬ ವಾಕ್ಯ ಅವರ ಮಾನವ ಪ್ರೇಮ ಹಾಗೂ ದೇಶ ಪ್ರೇಮಕ್ಕೆ ಸಾಕ್ಷಿಯಾಗಿದೆ.

"ನೀನರಿಯದಂತೆಯೇ ನಿನಗಾಗಿ ದುಡಿಯುತಿರುವ ರೂವಾರಿ. ಹೊರನಾಡ ಶ್ರಮಿಕ, ಕೃಷಿಕರಿಗೆ ಮಾನವ ಕುಟುಂಬವನ್ನು ಉಳಿಸಿ ಬೆಳೆಸುವ ಸಕಲ ಪ್ರಾಣಿಕೋಟಿಗೆ ನಮಿಸು", ಎಂಬ ವಾಕ್ಯಗಳಿಂದ ಅವರಿಗೆ ಶ್ರಮಿಕ ಹಾಗೂ ಕೃಷಿಕರ ಬಗ್ಗೆ ಮತ್ತು ಜೀವಕೋಟಿಯ ಬಗ್ಗೆ ಇರುವ ಕೃತಜ್ಞತೆ ವ್ಯಕ್ತವಾಗುತ್ತದೆ.

"ಹೃದಯದಲಿ ಚಲುವಿರಲಿ, ವದನದಲ್ಲಿ ಚಲುವಿರಲಿ" ಎಂದು ಹಾಡುತ್ತಾ, ಆ ಒಲವು ಚೆಲುವುಗಳನ್ನು ತಮ್ಮ ವ್ಯಕ್ತಿತ್ವದಲ್ಲೇ ರೂಡಿಸಿಕೊಂಡು, ಮಾದರಿಯಾಗಿ ಬಾಳಿ, 'ಸದಯತೆಯ ಸ್ವರ್ಗದಲಿ, ಸುರರಾಗಿ ಬಾಳಲಿ ಸದ್ಗುಣದ ಸಜ್ಜನರು" ಎಂದು ಹರಸುತ್ತಾ ಈ ಲೇಖನವನ್ನು ಬಿಟ್ಟುಹೋದರು. ಕಾವ್ಯಾನಂದ. ಆದರೆ, ಆ ಕಾವ್ಯಾನಂದರ ನೆನಪು ಎಂದೆಂದಿಗೂ ಹಸಿರಾಗಿದೆ. ★

# ನೈಜ ಮಾನವತಾವಾದಿ ಸಿದ್ಧಯ್ಯ ಪುರಾಣಿಕರು

ಲೇಖಕರು : ವ್ಯಾಖ್ಯಾನ ವಿಭೂಷಣ **ಪಂಡಿತ ಶ್ರೀ ಕೆ. ಪಿ. ಶಿವಲಿಂಗಯ್ಯ**, ಎಂ.ಎ., ಬಿ.ಇಡಿ.
(ಪುಲಿಕೇಶಿ)

ನಂಬು ಕನ್ನಡವನ್ನು ನಂಬು ಕನ್ನಡ ಜನವ
ನಂಬು ಕನ್ನಡನಾಡ ಭವಿತವ್ಯವನ್ನು
ನಂಬು ಕನ್ನಡ ಕುಲವ ನಂಬು ಕನ್ನಡ ಕಲೆಯ
ನಂಬು ಕನ್ನಡದಮಲ ಕಾವ್ಯವನ್ನು

ಕನ್ನಡ ನಂಬಿಕೆಯು ಭಿನ್ನತೆಗಳನು ಬೆಸೆದು
ಒಂದುಗೂಡಿಸಿತೆಲ್ಲ ಕನ್ನಡದ ಸೇವೆ
ಕನ್ನಡದ ನಂಬಿಕೆಯು ಕೈಹಿಡಿದು ನಡೆಸೀತು
ಉನ್ನತಿಯ ಶಿಖರಕ್ಕೆ ಕನ್ನಡದ ಕುಲವ

ಅಮೃತ ಮಂಥನದಲ್ಲಿ ವಿಷವು ಹುಟ್ಟಿದ ಹಾಗೆ
ಇಂದು ಮೂಡಿದೆ ನಮ್ಮ ನಾಡಿನಲ್ಲಿ
ಆ ಕುಲವು ಈ ಕುಲವು ಎಂಬ ಕೋಲಾಹಲವು
ಬೀಡು ಬಿಟ್ಟಿದೆ ಮತಿಯ ಕೇಡಿನಲ್ಲಿ

ಆದರಿದು ಸ್ಥಿರವಲ್ಲ ನಮಗೆ ಇದು ತರವಲ್ಲ
ಇಂದೊ ನಾಳೆಯೊ ಮತ್ತೆ ಕನ್ನಡಿಗರೆಲ್ಲ
ಒಂದೆ ಕನ್ನಡ ನೆಲವು ಒಂದೆ ಕನ್ನಡ ಕುಲವು
ಎಂದು ಗರ್ಜಿಸಿ ತಹರು ಕನ್ನಡಕೆಗೆಲ್ಲ

ನೂರು ಕುಲಗಳು ಸೇರಿ ಕನ್ನಡದ ಕುಲವಾಗಿ
ಭಾರತಕ್ಕೆ ಬಲವಾಗಿ ಬೆಳಗುತಿಹುದು
ಈ ಕುಲವ ಒಡೆಯದಿರಿ ಹೋರಾಡಿ ನುಡಿಯದಿರಿ
ಎಂದು ಕನ್ನಡ ಕಹಳೆ ಮೊಳಗುತಿಹದು

ಎಲ್ಲರಿಗೆ ನೆಲೆಯಹುದು ಎಲ್ಲರಿಗೆ ಬೆಲೆಯಹುದು
ಸಿರಿಯು ಚಿಮ್ಮುವ ನಮ್ಮ ನಾಡಿನಲ್ಲಿ
ಸ್ವಾರ್ಥಕ್ಕೆ ಮರುಳಾಗಿ ವ್ಯರ್ಥ ಕಡಿದಾಡದಿರಿ
ಈ ಚಿನ್ನ ರೇಶಿಮೆಯ ಬೀಡಿನಲ್ಲಿ

ಏನಾದರೂ ಗಳಿಸು ಎಂತಾದರೂ ಗಳಿಸು
ಕನ್ನಡದ ಕುಲವನ್ನು ಮಾತ್ರ ಉಳಿಸು
ಕನ್ನಡದ ಮೂಲಕವೆ ಕನ್ನಡಿಗ ನೇಳಿಗೆಯ
ಕನ್ನಡಪಿ ನಂಬಿಕೆಯನುಳಿಸಿ ಬೆಳೆಸು

ಕನ್ನಡಕೆ ನೆಲವಕ್ಕೆ ಕನ್ನಡಕೆ ಒಂದಕ್ಕೆ
ಕನ್ನಡದ ಕುಲ ನಿತ್ಯ ಸತ್ಯವಕ್ಕೆ
ಕನ್ನಡದ ಪ್ರೇಮವೇ ಕನ್ನಡಿಗರುಸಿರಕ್ಕೆ
ಬರದಿರಲಿ ಎಂದಿಗೂ ಕನ್ನಡಕೆ ಧಕ್ಕೆ !

'ಕಾವ್ಯಾನಂದ'ರ ಈ ಕವನ ಬಲು ಅಪರೂಪದ್ದು ಹಾಗೂ ಪ್ರಸಿದ್ಧವಾದುದು; ಈ ಲೇಖಕನೇ ಸ್ಥಾಪಿಸಿ ಬೆಳೆಸಿರುವ 'ವಾಗ್ವಿಲಾಸ ಪ್ರಕಾಶನ' 1966ರಲ್ಲಿ ಪ್ರಕಟಿಸಿದ 100 ಜನ ಕನ್ನಡ ಕವಿಗಳ ಕವನಗಳಿರುವ 'ಕನ್ನಡ ಕವಿ-ಕಾವ್ಯದರ್ಶನಕ್ಕೆ' ಪುರಾಣಿಕರು ಕೊಟ್ಟ ಕವನವಿದು.

ಕನ್ನಡದ ಬಗೆಗೆ ಇಷ್ಟೊಂದು ಕಳಕಳಿಯಿರುವ ಕಾವ್ಯಾನಂದರು ಜನ್ಮತಾಳಿದ್ದು ರಾಯಚೂರು ಜಿಲ್ಲೆಯ "ದ್ಯಾಂಪುರ"ದಲ್ಲಿ ಪುರಾಣ ರಚಕರಾದ ಚೆನ್ನಕವಿಗಳು ಇವರ ಅಜ್ಜಂದಿರು (ತಂದೆಯವರ ಕಕ್ಕ ಅಂದರೆ ಚಿಕ್ಕಪ್ಪನವರು) ತಂದೆ ಸುಪ್ರಸಿದ್ಧ ಪುರಾಣಿಕರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು. ತಾಯಿ ಹೆಸರಿಗೆ ತಕ್ಕಂತೆ ನಡೆಯಿದ್ದು ದಾನಮ್ಮನವರು. ಹೈದರಾಬಾದ್ ಕರ್ನಾಟಕದಲ್ಲಿ 1918ರಲ್ಲಿ ಹುಟ್ಟಿದ ಸಿದ್ಧಯ್ಯನವರು ಬಡತನದಲ್ಲಿಯೇ ಛಲದಿಂದ ಕಷ್ಟಪಟ್ಟು ತಪಸ್ವಿಯಂತೆ ವಿದ್ಯಾಭ್ಯಾಸ ಮಾಡಿದರು. ನಿಜಾಮರ ಸರ್ಕಾರದಲ್ಲಿ ಇವರು ತಹಶೀಲ್ದಾರರಾಗಿ ಆಯ್ಕೆಗೊಂಡುದೇ ಒಂದು ಪವಾಡ ! ರಝಾಕಾರರ ಹಾವಳಿಯಲ್ಲಿ ಬದುಕುಳಿದು ಯಶಸ್ವಿಯಾಗಿ ನೌಕರಿ ಮಾಡಿದ್ದು ಹಾಗೂ ಅನೇಕರಿಗೆ (ಜೀವ) ರಕ್ಷಣೆಯಿತ್ತದ್ದು ನಿಜಕ್ಕೂ ಒಂದು ಇತಿ

ಹಾಸವೆ ! ! "ನಿದ್ರೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ" ಎನ್ನುವ ಕವಿವಾಣಿ ಇವರ ಪಾಲಿಗೆ ಅಕ್ಷರಶಃ ನಿಜವಾಗಿ ಬಿಟ್ಟಿತಂತೆ !

ಧಾರವಾಡ ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾ ಸ್ವಾಮಿಗಳವರ ಕೃಪೆಯಿಂದ ಶ್ರೀಮಂತಿ ಗಿರಿಜಾ ದೇವಿಯವರನ್ನು ವಿವಾಹವಾದಿ ವಿಜಯಲಕ್ಷ್ಮಿ (ಈಗ ವಿಜಯಾ ನಂದೀಶ್ವರ್). ಶಿವಗೀತಾ ಭಾರತಿ ಮತ್ತು ಪ್ರಸನ್ನಕುಮಾರ ಎಂಬ ಪುಣ್ಯ ಸಂತಾನ ಪಡೆದರು. ಠರಶೂಕಾರರ ಹಾವಳಿಗೆ ಮುನ್ನವೇ ಪತ್ನಿ ಪುತ್ರರು ರೈಲಿನಲ್ಲಿ ಪ್ರಯಾಣ ಮಾಡುವಂತೆ ಕರುಣಿಸಿದ ವಿಶ್ವಾತ್ಮ ನನ್ನು ಕುರಿತು ಕಾವ್ಯಾನಂದರ ಹೃದಯಾಕಾಶದಿಂದ ಹೊರಬಂದ ನುಡಿಮುತ್ತು ಇಂತಿದೆ :

"ನೀನು ಕಾಯಲೆಳಸಿದರೆ ಕೊಲ್ಲುವವರಾರಯ್ಯ ?
ನೀನು ಕೊಲ್ಲಬಯಸಿದರೆ ಕಾಯುವವರಾರಯ್ಯ ?
ನೀನು ಎತ್ತಿ ಹಿಡಿದರೆ ಇಳಿಸುವವರಾರಯ್ಯ ?
ನೀನು ಕೆಳಗೊತ್ತಿದರೆ ಮೇಲೆತ್ತುವವರಾರಯ್ಯ ?
ನೀನು ಕ್ಷಮಿಸಿದರೆ ಶಿಕ್ಷಿಸುವವರಾರಯ್ಯ ?
ನೀನು ಶಿಕ್ಷಿಸ ಬೆಳಸಿದರೆ ರಕ್ಷಿಸುವವರಾರಯ್ಯ ?
ಸ್ವತಂತ್ರ ಧೀರ ಸಿದ್ಧೇಶ್ವರಾ, ರಕ್ಷಿಸು ಇಲ್ಲವೆ ಶಿಕ್ಷಿಸು-
ಕೃಪಾ ಕಟಾಕ್ಷದಿಂದ ವೀಕ್ಷಿಸಯ್ಯ !"

ತಹಶೀಲ್ದಾರ್ ಆಗಿ ಸರಕಾರಿ ಸೇವೆಗೆ ಪದಾರ್ಪಣ ಮಾಡಿದ ಸಿದ್ದಯ್ಯನವರು ಡೆಪ್ಯುಟಿ ಕಲೆಕ್ಟರ್, ಡೆಪ್ಯುಟಿ ಕಮೀಷನರ್, ಕಾರ್ಮಿಕ ಇಲಾಖೆಯ ಕಮೀಷನರ್, ಸಾರಿಗೆ ಇಲಾಖೆಯ ಮುಖ್ಯಸ್ಥರು ಹೀಗೆ ನಾನಾ ಹುದ್ದೆ ಗಳಲ್ಲಿ ಸೇವೆ ಸಲ್ಲಿಸುವಾಗಲೆಲ್ಲ ಬಡವರಿಗೆ, ದೀನದಲಿತ ರಿಗೆ ಮರುಗಿ ಒಳಿತು-ಗೈಯುವ ಕಾರ್ಯ ಕೈಗೊಂಡಿರು ದವು ಅವರ ಮಾನವೀಯಂತೆಗೆ ಸಾಕ್ಷಿಯಾಗಿದೆ.

ಸೇವಾ ಜೀವನ ಮುಗಿಯುತ್ತ ಬಂದಾಗ ಅವರು ಬರೆದ ಒಂದು ವಚನ ನಿಂತಿದೆ :

"ಸುಖದೊಡನೆ ಸರಸವಾಡುವಾಗಿನ ದುಃಖವನ್ನು
ಅನುಭವಿಸಿದೆ ;
ದುಃಖದೊಡನೆ ಹೋರಾಡುವಾಗಿನ ಸುಖವನ್ನು
ಅನುಭವಿಸಿದೆ ;
ಸುಖ ದುಃಖಗಳನ್ನು ಸುದ್ದಿಯನ್ನೇ ಮರೆತಾಗಿನ
ಆನಂದವನ್ನೂ ಅನುಭವಿಸಿದೆ ;
ಗೆಲವನ್ನು ದಕ್ಕಿಸಿಕೊಳ್ಳವಾಗಿನ ದುಃಖವನ್ನು
ಅನುಭವಿಸಿದೆ ;
ಸೋಲಿನೊಡನೆ ಸೆಣಸುವಾಗಿನ ಸೊಗವನ್ನು
ಅನುಭವಿಸಿದೆ ;
ಸೋಲು ಗೆಲುವುಗಳನ್ನು ಮೀರಿವಾಗಿನ ಮಹಃ
ಪ್ರಸಾದವನ್ನೂ ಅನುಭವಿಸಿದೆ ;"-

ಹೀಗೆ ಸುಖ-ದುಃಖಗಳ ಅನುಭವದ ಅಡುಗೆಯು ಪಾಕವೇ ಶ್ರೀ ಪುರಾಣಿಕರ ಸೇವಾ ಜೀವನ ಎಂಬುದು ವಿದಿತವಾಗುತ್ತದೆ.

"ಕಲ್ಲೋಲ ಮಾಲೆ" ಕವನ ಸಂಕಲನದಲ್ಲಿನ ಒಂದೆರಡು ತುಣುಕುಗಳ ಇಣುಕು ನೋಟ :

ಬೆಳೆವುದದು ಭೂಮಿಗುಣ
ಬೆಳೆದು ಬೆಳಕಾಗುವುದೆ ಬಾಳಗುಣವು
ಮೊಳೆವುದದು ಬೀಜಗುಣ
ಬೆಳೆದು ಸವಿಯಾಗುವುದೆ ಕಾಣಗುಣವು
ಉರಿವುದದು ಅಗ್ನಿಗುಣ
ಉರಿದು ಬೆಳಕಾಗುವುದೆ ಜ್ಯೋತಿಗುಣವು
ಸವಿಯುಹುದು ನುಡಿಯುಗುಣ
ಸವಿಯು ಬೆಳಕಾಗುವುದೆ ಗೀತಗುಣವು"

ಬೆಳಕಾಗುವುದು-ಸವಿಯಾಗುವುದು- ಜ ಗ ತ್ತಿ ಗೆ ಪ್ರತಿಯೊಬ್ಬ ಜೀವಿಯೂ ಸಲ್ಲಿಸಬೇಕಾದ ಕಾಣಿಕೆಯು ಅದೇ ನಿಜವಾದ ಮಾನವೀಯಂತೆ.

ಬಾಳಕಡಲಲಿ ಮುಳುಗಿ ಮೂರು ಮುತ್ತನು ತಂದೆ
"ಸ್ನೇಹ, ಸ್ಮರಣೆ, ಸಮತೆ" ಎಂದು ಕರೆದೆ !
ಬಾಳ ಬನದಲಿ ತಿರುಗಿ ಮೂರು ಫಲಗಳ ತಂದೆ
"ದೀನ-ಚೆಲುವು ಒಲವುಗಳು" ಎಂದು ಬರೆದೆ (ಒರೆದೆ) !
ಬಾಳಿನಾಗಸದಲ್ಲಿ ಮೂರು ನಕ್ಷತ್ರಗಳ
"ಒಲಿ-ಒಲಿಸು-ಕೂಡಿನಲಿ" ಎಂದು ಹೆಸರು !

ಬಾಳ ಭಾಂಡಾರದಲಿ ಮೂರು ರತ್ನಗಳುಂಟು–
"ಪರಿಕೆ-ನಂಬಂ-ನಂಬಿಕೆ"ಗಳೆಂದು ಉಸಿರು !

ಜೀವನದಲ್ಲಿ ಕಂಡುಂಡ ಅನುಭವಗಳನ್ನು ಇಂತು ಕವನಿಸಿ ಹೇಳುವಾಗ ಸಹಿತ ಜೀವನ ಸಾಫಲ್ಯ ಸಂದೇಶ ಗಳನ್ನು ಈ ಮೇಲೆ ಕಂಡಂತೆ ಸಾರಿದ್ದಾರೆ ಕಾವ್ಯಾ ನಂದರು.

ಮಾನವ ಬರು ಬರುತ್ತ ಸಹಜ ಸದ್ಭಾವಗಳನ್ನು ಕಳೆದುಕೊಂಡು ತೀರ ಕಳಪೆಯವನಾಗಿ ಬಾಳುತ್ತಿರು ವುದು ಕವಿಹೃದಯದ ಇವರಿಗೆ ಅಸಹ್ಯವೆನಿಸುವುದು ಸಹಜ :

"ವಿದ್ಯೆ ಬಂತು, ವಿನಯ ಹೋಯ್ತು ;
ಬುದ್ಧಿ ಬಂತು, ಶ್ರದ್ಧೆ ಹೋಯ್ತು ;
ಶ್ರದ್ಧೆ ಬಂತು. ವಿವೇಚನೆ ಹೋಯ್ತು ;
ಸಮೃದ್ಧಿ ಬಂತು ಸಂಸ್ಕೃತಿ ಹೋಯ್ತು ;
ವಿಜ್ಞಾನ ಬಂತು, ಸಮಾಧಾನ ಹೋಯ್ತು ;
ಶರೀರ ಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ ಹೋಯ್ತು ;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ
ಹೋಯ್ತು ;
ಬೋಧನೆ ಬಂತು, ಸಾಧನೆ ಹೋಯ್ತು ;
ಮಾತು ಬಂತು, ಕೃತಿ ಹೋಯ್ತು ;
ಜಾತಿ ಬಂತು, ಪ್ರೀತಿ ಹೋಯ್ತು ;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು ;
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರ ಧೀರ ಸಿದ್ಧೇಶ್ವರ ಹೋದ !"

ತಮ್ಮ ಹೃದಯಾಂತರಾಳದಲ್ಲಿ ಕುಡಿದಡೆದ ಸಹ ಸಾಭಿಪ್ರಾಯವನ್ನು ಈ ಮೇಲಿನ ವಚನ ಭಾಗದಲ್ಲಿ ಮನಸಂಬುಗುವಂತೆ ಮನಬಿಚ್ಚಿ ನುಡಿದಿದ್ದಾರೆ ಸಿದ್ಧಯ್ಯ ಪುರಾಣಿಕರು. ಅವರ ಜೀವಿತ ಬೆಲ್ಲದಚ್ಚು ಇದ್ದಂತೆ, ಎತ್ತಣಿಂದ ಸವಿದರೂ ಸಿಹಿಯು ! ಮಾನವೀಯತೆಯ ವೃಷ್ಟಿಯೆ !!

1981ರಲ್ಲಿಯೇ ಅವರನ್ನು ಕುರಿತು-ನಾನು-ನನ್ನ ಎರಡನೆಯ ಮಗಳು ಸೌ॥ ಎಸ್. ಎನ್. ಲೀಲಾವತಿಯ ಮದುವೆಯಲ್ಲಿ ಪ್ರಕಟಿಸಿದ "ಪಿಳ್ಳಂಗೋವಿ" ಕವನ ಸಂಕಲನದಲ್ಲಿ ಈ ಕೆಳಕಂಡಂತೆ ಸರಳವಾಗ್ವಿಲಾಸದಲ್ಲಿ ಪದ್ಯ ರಚಿಸಿರುತ್ತೇನೆ ;

## ವಿದ್ಯಾ ವಿನಯ ಸಂಪನ್ನರು

ಭುವನದ ಭಾಗ್ಯದೊಳವತರಿಸಿದ ಕವಿ
ಸುವಿವೇಚನೆಯಿಂ ಲಭಿಸುವವ
ಭವತಾರಕಥಾ ಗ್ರಂಥವ ಸೃಜಿಸಿದ
ಶಿವಶರಣ ಚರಿತಾಮೃತವ ॥ ೧ ॥

ಚೆನ್ನ ಕವಿಗಳ ಮೊಮ್ಮಗನಲ್ಲವೆ
ಮನ್ನೆಯ ಕಲ್ಲಿನಾಥಜನು
ಉನ್ನತ ವಚನೋದ್ಯಾನಕೆ ಲಭಿಸಿತು
ಕನ್ನಡ ಭಾಷಾ–ಪ್ರಶಸ್ತಿಯಂದು ॥ ೨ ॥

ಕೃತಿಗಳ ರಚಿಸುವ ಕಾವ್ಯಾನಂದರು
ಅತಿಶಯ ಕಾಯಕ ವೆಸಗಿಹರು
ಮತಿಯುಂತ ವಿದ್ಯಾ–ವಿನಯ ಸಂಪನ್ನರು
ಖುತಕ ನವರತವು ದುಡಿಯುವರು ॥ ೩ ॥

ಪಂಡಿತ ಸಮತೆಯ ದರ್ಶಿಪನೆನ್ನುವ
ಖಂಡಿತ ವಾಕ್ಯವು ಶೋಭಿಸಿದೆ
ಚಂಡ–ಪ್ರಚಂಡದ ಮನವನು ಸೆಳೆಯುವ
ಪಿಂಡವು ಸಿದ್ಧಿಯ ಸಾಧಿಸಿದೆ ॥ ೪ ॥

ಮಾನವೀಯತೆಯನ್ನೆ ಹಾಸುಹೊಕ್ಕಾಗಿಸಿದ
ಮಾನೋನ್ನತರು ಹಿರಿಯ ಕವಿಗಳಿವರು
ಸಾನುರಾಗದಿ ಕಿರಿಯರಿಗೆ ಮಾರ್ಗದರ್ಶನವ
ಊನವಿಲ್ಲದೆ ಮಾಡಿ ತೋರಿಸಿದರು ॥ ೫ ॥

# ಡಾ|| ಸಿದ್ಧಯ್ಯ ಪುರಾಣಿಕ ಅವರ ಕನ್ನಡ ನಿಘಂಟು ಸೇವೆ

ಶ್ರೀ ಎನ್. ಬಸವರಾಧ್ಯ ಪ್ರಧಾನ ಸಂಪಾದಕ, ಕನ್ನಡ ನಿಘಂಟು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಡಾ॥ ಸಿದ್ದಯ್ಯ ಪುರಾಣಿಕ ಅವರು ಕನ್ನಡದ ಶ್ರೇಷ್ಠಕವಿಗಳು ; ಹಿರಿಯ ಸಾಹಿತಿಗಳು, ದಕ್ಷ ಆಡಳಿತಗಾರರು : ಗಣ್ಯವಚನಕಾರರು. ಶ್ರೀಯುತರ ವಿದ್ವತ್ತಿಗೆ ಸಂದ ಪುರಸ್ಕಾರಗಳು ಹಲವಾರು. ಅವುಗಳಲ್ಲಿ ಭಾರತೀಯ ಭಾಷಾ ಪರಿಷತ್ತಿನ ಭಿಲ್ವಾರ ಪ್ರಶಸ್ತಿ, ಪ್ರೊ. ಸ. ಸ. ಮಾಳವಾಡ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನ ಇವು ವು.

ಜಲಪಾತ, ಮಾನಸಸರೋವರ, ಮೊದಲು ಮಾನವನಾಗು, ಕರುಣಾಶ್ರಾವಣ, ರಜತರೇಖೆ. ವಚನೋದ್ಯಾನ, ಶರಣಚರಿತಾಮೃತ ಹರ್ಡೇಕರ್ ಮಂಜಪ್ಪ ಇವೇ ಮೊದಲಾದ ಶ್ರೇಷ್ಠ ಕೃತಿಗಳನ್ನು ರಚಿಸಿದ ಕೀರ್ತಿ ಶ್ರೀಯುತರದು. ಡಾ॥ ಸಿದ್ಧಯ್ಯ ಪುರಾಣಿಕರ ಮನೆತನ ಸಾಹಿತ್ಯ ಪರಂಪರೆಗೆ ಪ್ರಸಿದ್ಧವಾದುದು. ಶ್ರೀಯುತರ ಪಿತಾಮಹರಾದ ದ್ಯಾಂಪುರದ ಕಲ್ಲಿನಾಥ ಶಾಸ್ತ್ರಿಗಳು ಶ್ರೇಷ್ಠಕಾವ್ಯವನ್ನು ರಚಿಸಿರುವುದು ಸರ್ವವಿದಿತವಾದುದು. ತಮ್ಮ ಪೂರ್ವಜನರ ಸಂಸ್ಕಾರ ಪಾಂಡಿತ್ಯಗಳನ್ನು ಗರ್ಭೀಕರಿಸಿಕೊಂಡು ಮಹತ್ತರವಾದ ಕೃತಿಗಳನ್ನು ಕನ್ನಡಕ್ಕೆ ನೀಡಿದ ಶ್ರೇಯಸ್ಸು ಡಾ॥ ಸಿದ್ಧಯ್ಯಪುರಾಣಿಕ ಅವರದು.

ಡಾ॥ ಸಿದ್ಧಯ್ಯಪುರಾಣಿಕ ಅವರು ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ ಕನ್ನಡ ನಿಘಂಟಿಗೆ ಪ್ರಾಣಸ್ವರೂಪರಾಗಿ ದುಡಿದಿದ್ದಾರೆ. ಶ್ರೀಯುತರು ಕನ್ನಡ ನಿಘಂಟು ಸಂಪಾದಕ ಸಮಿತಿಯಲ್ಲಿ ಸರ್ಕಾರದ ಪ್ರತಿನಿಧಿಯಾಗಿದ್ದುದಷ್ಟೇ ಅಲ್ಲದೆ ನಿಘಂಟು ಯೋಜನೆ ಒಪ್ಪಂದಕ್ಕೆ ಕರ್ನಾಟಕ ಸರ್ಕಾರದ ಪರವಾಗಿ ಸಹಿಮಾಡಿ ನಿಘಂಟಿಗೆ ಜೀವದಾನಮಾಡಿದ್ದಾರೆ.

ಡಾ॥ ಸಿದ್ಧಯ್ಯಪುರಾಣಿಕರು ಬಹುಭಾಷಾ ಪಂಡಿತರು. ಕನ್ನಡ, ಸಂಸ್ಕೃತ, ಇಂಗ್ಲಿಷ್, ಉರ್ದು, ಹಿಂದಿ ಮೊದಲಾದ ಭಾಗಗಳಲ್ಲಿ ಸಾಕಷ್ಟು ಪರಿಶ್ರಮ ಪಡೆದಿದ್ದರು. ಕನ್ನಡದಲ್ಲಿ ಹೇಗೋ ಹಾಗೇ ಉರ್ದುವಿನಲ್ಲಿಯೂ ಅಪಾರ ಪಾಂಡಿತ್ಯವನ್ನು ಪಡೆದಿದ್ದರು. ಉರ್ದು ಅವರಿಗೆ ವಾಜೋವಿಧೇಯವಾಗಿತ್ತು. ಪ್ರಸ್ತುತ ಕನ್ನಡ ನಿಘಂಟಿಗೆ ಶ್ರೀಯುತರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ಕರ್ನಾಟಕದಲ್ಲಿ ಮೊಗಲರ ಆಳ್ವಿಕೆ ಇದ್ದಾಗ ಅನೇಕ ಪಾರಸಿ ಉರ್ದುಶಬ್ದಗಳು ಕನ್ನಡದಲ್ಲಿ ಬಳಕೆ ಬಂದ ರೂಢಿಯಲ್ಲಿದ್ದುವು ಇವು ಸರ್ಕಾರಿ ದಾಖಲೆಗಳಲ್ಲಿಯೂ ಕನ್ನಡ ಕೃತಿಗಳಲ್ಲಿಯೂ ಹಾಸುಹೊಕ್ಕಾಗಿ ಸೇರಿಹೋಗಿದ್ದುವು. ಕನ್ನಡ ನಿಘಂಟಿನಲ್ಲಿ ಈ ಶಬ್ದಗಳ ನಿರ್ದಿಷ್ಟವಾದ ಅರ್ಥವಿವರಣೆ ನೀಡಬೇಕಾದ ಸಂದರ್ಭಗಳಲ್ಲಿ ಡಾ|| ಸಿದ್ದಯ್ಯಪುರಾಣಿಕರು ಮಿಗಿಲಾದ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ನಿಘಂಟಿನಲ್ಲಿ ಸೇರ್ಪಡೆಯಾಗಿರುವ ಈ ಉರ್ದು ಪಾರಸಿಶಬ್ದಗಳ ಸರಿಯಾದ ಅರ್ಥವನ್ನೂ ನಿಷ್ಪತ್ತಿಯನ್ನೂ ಶ್ರೀಯುತರು ಲೀಲಾಜಾಲವಾಗಿ ವಿವರಿಸಿ ಹೇಳುತ್ತಿದ್ದರು. ಹೀಗಾಗಿ ಈ ಶಬ್ದಗಳ ಸರಿಯಾದ ಅರ್ಥ ನಿಷ್ಪತ್ತಿಗಳನ್ನು ನಿಘಂಟಿನಲ್ಲಿ ದಾಖಲಿಸುವುದು ಸಾಧ್ಯವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಸಮಿತಿಯ ಸದಸ್ಯರಾಗಿ ಬಹುಕಾಲ ಸೇವೆಸಲ್ಲಿಸಿದ ಶ್ರೀಯುತರು ನಿಘಂಟಿನ ಬಗೆಗೆ ಅಪಾರವಾದ ಅಭಿಮಾನವನ್ನು ತಾಳಿ ಈ ನಿಘಂಟಿನ ಸರ್ವತೋಮುಖವಾದ ಅಭಿವೃದ್ಧಿಗೆ ತಮ್ಮ ಶಾಶ್ವತ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ನಿಘಂಟಿನ ಚರಿತ್ರೆಯಲ್ಲಿ ಡಾ॥ ಸಿದ್ಧಯ್ಯಪುರಾಣಿಕ ಅವರ ಹೆಸರು ಅವರು ಸಲ್ಲಿಸಿರುವ ಅನುಪಮ ಸೇವೆಯಿಂದ ಚಿರಸ್ಥಾಯಿಯಾಗಿ ಉಳಿಯುವಂತಾಗಿದೆ.

# ಶುದ್ಧ ಹೃದಯದ ಸ್ನೇಹಜೀವಿ ಡಾ|| ಸಿದ್ಧಯ್ಯ ಪುರಾಣಿಕ

**ಲೇ|| ಶ್ರೀ ಎನ್. ಕೆ. ಕುಲಕರ್ಣಿ**

'ಮೊದಲು ಮಾನವನಾಗು' ಎಂಬ ಹೊಸ ಮೀಸಲಾತಿ ಮಂತ್ರವನ್ನು ಕೊಟ್ಟ ಕಾವ್ಯರ್ಷಿ, ನಮ್ಮ ಕಾವ್ಯಾನಂದರು ತಮ್ಮ ವಚನೋದ್ಯಾನದಲ್ಲಿ ಸಾವಿರದ ಪುಷ್ಪಗಳನ್ನರಳಿಸಿ ಅಳಿಸಲಾರದ ಕೀರ್ತಿ ಮಕರಂದವನ್ನು ಬಿಟ್ಟು ಹೋದವರು. ಓದಿ ಬ್ರಾಹ್ಮಣನಾಗು ಕಾದಿ ಕ್ಷತ್ರಿಯನಾಗು ...ಏನಾದರೂ ಆಗು ಮೊದಲು ಮಾನವನಾಗು ಎಂತಹ ದಿವ್ಯ ಮಂತ್ರ ಇದು ! ಮನುಷ್ಯ ಜಾತಿ ತಾನೊಂದೆ ವಲಂ ಎಂದು ಸಾವಿರ ವರ್ಷಗಳಿಗಿಂತ ಪೂರ್ವದಲ್ಲಿ ಪಂಪ ಮಹಾಕವಿ ಸಾರಿದ. ಆಗ ಚಿನ್ನಪ್ಪ ರೆಡ್ಡಿ ಆಯೋಗದಲ್ಲಿ ನಮೂದಿಸಲ್ಪಟ್ಟ ನೂರಾರು ಜಾತಿಗಳಿರಲಿಲ್ಲ. ಇಂದಿನ ಸಂದರ್ಭದಲ್ಲಿ ಈ ಮೀಸಲಾತಿ ಸಂದರ್ಭದಲ್ಲಿ ೫೦%೬೦%೮೦%(ಬಹುಶಃ ಹೊಸ ಸಶತಮಾನದ ಹೊತ್ತಿಗೆ ೧೦೦%)ಗಳ ಮೇಲಾಟದ ಕಾಲದಲ್ಲಿ ನಮ್ಮ ಕಾವ್ಯಾನಂದರ "ಮೊದಲು ಮಾನವನಾಗು" ಎಂಬ ಮಂತ್ರ ವಚನಕ್ಕೆ ಹೆಚ್ಚಿನ ಮಹತ್ವ ಬಂದಿದೆ.

ವಯಸ್ಸಿನ ೭೦ಕ್ಕೆ ಡಾ. ಸಿದ್ದಯ್ಯ ಪುರಾಣಿಕ ಅವರಿಗೆ ಆಗಲೇ ಡೆಪ್ಯುಟಿ ಕಮೀಷನರ್, ಲೇಬರ್ ಕಮೀಷನರ್ ಅಂತಹ ಅಧಿಕಾರ ಪ್ರಾಪ್ತಿಯಾಗಿ ಹೋಗಿದ್ದು ಸಾಹಿತ್ಯ ಗುಣ ಗೌರವಕ್ಕಾಗಿ ಡಾಕ್ಟರೇಟ್ ೧೯೭೫ರಲ್ಲಿ ಲಭ್ಯವಾಗಿತ್ತು–ಕರ್ನಾಟಕ ವಿ.ವಿ. ದಿಂದ ಪಂಚಭಾಷಾ ವಿಶಾರದರೆನಿಸಿ ಕನ್ನಡಕ್ಕಾಗಿ ಕೈಯೆತ್ತಿ, ಕೊರಳೆತ್ತಿ ಗೋಕಾಕ ಚಳವಳಿಯ ಮುಂಚೂಣಿ ಸ್ಥಾನ. ರಾಜ್ಯ ಪ್ರಶಸ್ತಿ 'ವಚನೋದ್ಯಾನಕ್ಕಾಗಿ' ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಭಾರತೀಯ ಭಾಷಾ ಪ್ರಶಸ್ತಿ ನಾಡಿನ ನಾಲ್ಕೆಡೆಗಳಲ್ಲೂ ಪುರಸ್ಕಾರ, ಸತ್ಕಾರ, ಸನ್ಮಾನಗಳು ! [illegible]ನೆಯ ಗುಲ್ಬರ್ಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ! ಸುಮಾರು ಮೂವತ್ತರಷ್ಟು ಸಾಹಿತ್ಯ ರಚನೆ ಗದ್ಯ, ಪದ್ಯ, ನಾಟಕ, ಕಥೆ, ಕಾದಂಬರಿ, ಅನುವಾದಗಳನ್ನೊಳಗೊಂಡು ಕೇಂದ್ರ ಸರ್ಕಾರದಿಂದ ಮಕ್ಕಳ ಗ್ರಂಥ ಮಾಣಿಕ್ಯಕ್ಕಾಗಿ ಪ್ರಶಸ್ತಿ ! [ಅದರ ಹೆಸರು 'ಕೊಟ್ಟ–ತುಪ್ಪಗಳೇ !' ಉತ್ತರ ಕರ್ನಾಟಕ ಮಕ್ಕಳ ಚಟ_ನುಡಿ] ಹಾಗಾದರೆ ೭೦ಕ್ಕೆ ಇನ್ನಾವುದರ ಕೊರತೆ ಆಯುಷ್ಯ ರೇಖೆಯ ಕೊರತೆಯೊಂದೇ ಅದನ್ನು ಮಾತ್ರ ದೈವ ಎನ್ನಬೇಕು. ಉಳಿದುದೆಲ್ಲಾ ಪುರುಷಾಯತ್ತ !

ಎಂತಹ ಸ್ನೇಹಜೀವಿ ನಮ್ಮ ಸಿದ್ದಯ್ಯನವರು! ಅವರೊಡನೆ ಸೋದರತನದ ಸರಸವನ್ನೂ ಇತ್ತೀಚೆಗಂತೂ ಪುಟ್ಟಾಪೂರ ಸವಿದಿದ್ದೆ. ಅಣ್ಣ ಎಂದೇ ನನ್ನನ್ನು ಸಂಬೋಧಿಸಿ ಬರೆದ ಅವರ ಪತ್ರ ಪತ್ರಾಕ್ಷರಗಳು ಅಕ್ಷರದ ಅಕ್ಕರೆಯನ್ನು ಇನ್ನೂ ನನಗೆ ಉಣಿಸುತ್ತದೆ. 'ಶ್ರೀ ಗಿರಿ'ಯು ಅಲಿಯಾಸ್ಕರ ರೋಡ್‌ನಿಂದ ಸ್ವಲ್ಪ ಬದಲಾವಣೆಗೊಂಡು ರಾಜಾಜಿನಗರದ ಮಗಳ ಮನೆಯತ್ತ [ಚೈತ್ರ ಕುಂಜ?] ನಡೆದರೂ ಮನೆಯಲ್ಲಿ ದೀರ್ಘಕಾಲದ ಪಾರ್ಶ್ವವಾಯು ಬಾಧೆಯಿಂದ ನರಳುತ್ತಿರುವ ಪತ್ನಿಯ ನೆರವಿಗೆಂದು ಮತ್ತೆ 'ಶ್ರೀ ಗಿರಿ'ಯು ನೇರುವರು. 'ಮೈಯಲ್ಲಿ ಅಷ್ಟು ಸರಿಯಿಲ್ಲ' ಎಂದು ಪ್ರತಿ ಪತ್ರದ ಒಕ್ಕಣೆ ಇದ್ದದ್ದೆ. ನನಗೆ ಯಾಕೋ ಹಂಬಲ ಅವರನ್ನು ಕಾಣಬೇಕೆಂದು ಅತವಕ ತಾಳದೆ ಬರೆಯುತ್ತಿದ್ದೆ. ಅಂತೂ ಒಮ್ಮೆ ಬೆಳಗಾವಿಗೆಂದು ಹೊರಟವರು ದಾರವಾಡದ ಎಮ್ಮಿಕೆರೆಗೆ ಪಯಣ ಮುರಿದರು. ಮನೆಯೊಳಗೆ ಬಂದರು. ರಾತ್ರಿಯಾಗಿ ಹೋಗಿತ್ತು. ಊಟಕ್ಕೆ ಎಬ್ಬಿಸಿದೆ ಇಲ್ಲ ಎನ್ನೇ ಅವರೇ ಇಲ್ಲಿ ನಮ್ಮ ಬೀಗರಿದ್ದಾರೆ. ಅಲ್ಲಿಯೇ ಉಂಡು ವಿಶ್ರಾಂತಿ ಪಡೆದು ಬೆಳಿಗ್ಗೆ ಬೆಳಗಾವಿಗೆ ಪಯಣ ಬೆಳೆಸುತ್ತೇನೆ ಎಂದರು. 'ಏನಾದರೂ ಸ್ವಲ್ಪ ಮಾತ್ರ ತಕ್ಕೊಳ್ಳುತ್ತೇನೆ" ಎಂದು ನನ್ನನ್ನು ಸಮಾಧಾನ ಮಾಡಿದರು. ಆಯಿತು. ಅಷ್ಟೇ ಸೋದರ್ಯದ ಸರಸ, ಸಾಹಿತ್ಯ ಸಲ್ಲಾಪ, ಅವರ ಮರುಳ ಸಿದ್ದನ ವಚನಗಳ ವಿಮರ್ಶೆ ಮಾಡಿದ್ದರೆ ಮುಕ್ತ ಕಂಠದ ಮೆಚ್ಚುಗೆ ಕೃತಜ್ಞತೆ ವ್ಯಕ್ತ ಮಾಡಿ ತಮ್ಮ ಹೊಸ ವಚನಗಳ ಪ್ರಕಟಿತ ಕೃತಿಯನ್ನು ನೇಹದ ನೆನಪಿದೆಂದು ಕೊಟ್ಟರು. ನಾನು ಬರೆದ ದ.ರಾ. ಬೇಂದ್ರೆ ಗ್ರಂಥವನ್ನು ಕೊಟ್ಟೆ. ನಮ್ಮ ಬೆಂಗಳೂರಿನ ಬಂಗಾರದ ದಿನಗಳನ್ನು ಸವಿ ಸವಿದು ಮೆಲುಕು ಹಾಕಿದೆವು.

೧೯೫೭–೫೮ರ ಸಾಲು ! ಅದೇ ಡೆಪ್ಯುಟಿ ಕಮೀಷನರ ಪದೋನ್ನತಿ ಪಡೆದಿದ್ದರು. ಬೆಂಗಳೂರು ನೆಹರೂ

ನಗರದಲ್ಲಿಯೇ ಆದರೂ ನೆರೆಯ ಬಂಧುವಾಗಿ ನೆಲಸಿದ್ದರು. ವಿಧಾನಸೌಧದ ಸರಕಾರಿ ಕಾರ್ಯದರ್ಶಿ ಹುದ್ದೆಯಲ್ಲಿದ್ದರು. ಇ.ರಾ. [ಇಟಗಿ ರಾಘವೇಂದ್ರ] ಅವರೂ ಅಲ್ಲಿಯೇ ವಾಸ. ನಾವು ಮೂವರೂ ನಿತ್ಯ ಪ್ರಭಾತ ಸಂಚಾರ ಹೊರಡುವುದು ಅಲೆದಾಟದೊಂದಿಗೆ ಕಾವ್ಯ ಶಾಸ್ತ್ರ ವಿನೋದ ! ಉರ್ದು ಮುಕ್ತಕಗಳನ್ನು ಹೇಳಿ ಅರ್ಥೈಸುವರು. ತಮ್ಮ ಆಫೀಸಿನ ವಿನೋದಗಳನ್ನು ಹೇಳುವರು. [ಕೈಕೆಳಗಿನ ಒಬ್ಬ ಅಧಿಕಾರಿ ಟೂರ್ ಮೇಲೆ ಹೋದಾಗೊಮ್ಮೆ ತಮ್ಮ ಪತ್ನಿಯೊಂದಿಗೆ ಪ್ರವಾಸ ಮಾಡುತ್ತಿದ್ದರಂತೆ ! ಅಲ್ಲಿ ಟಿ.ಎ. ಡಿ.ಎ. ನಿಮ್ಮೊಬ್ಬರಿಗೆ ಸಿಗತದ ಇಬ್ಬರೂ ಯಾಕೆ ಹೋಗ್ತೀರಿ ? ಪಾಪ ಮನೆಯವರಿಗೂ ತೊಂದರೆ ಎಂದಾಗ ಆ ಅಧಿಕಾರಿ ಉತ್ತರಿಸಿದರು. ಇಲ್ಲಾ ಸರ್ ! ನಮ್ಮ ಮನೆಯಲ್ಲಿ ಒಂದೇ ಡಬಲ್ ಬೆಡ್ ಇದೆ. ಪ್ರವಾಸದಲ್ಲಿ ನನಗೆ ಗಾದಿ ಬೇಕಾಗುತ್ತದೆ. ಅದಕ್ಕಾಗಿ ಆಕೆಯನ್ನೂ ಜೊತೆಗೆ ಒಯ್ಯಲೇ ಬೇಕಾಗುತ್ತದೆ. ಎಂದು ಈ ಉತ್ತರಕ್ಕೆ ನಗದೆ ಇನ್ನೇನು?] ತಮ್ಮ ಗುರುಗಳಾದ ಮಾಸ್ತಿ ನರಸಿಂಹರಾಯರನ್ನು ಕುಶನೂರು ವಿದ್ಯಾಗುರು ಪಿ.ಬಿ, ದೇಸಾಯಿ ಅವರನ್ನೂ ಪ್ರಾತಃ ಸ್ಮರಣೀಯರೆಂಬಂತೆ ನೆನಸುವರು, ತಮ್ಮ ದ್ಯಾಂಪುರದ ಹಳ್ಳಿಯ ಶಾಲೆ ಶಾಲಾ ಗುರುಗಳನ್ನೂ ಪ್ರಥಮ ಗುರುವಾಗಿದ್ದ ತಮ್ಮ ತಂದೆಯವರನ್ನೂ ನೆನೆಯುವರು. ಉಸ್ಮಾನಿಯಾ ವಿಶ್ವವಿದ್ಯಾಲಯದ ಕಾಲೇಜ್ ಪ್ರಿನ್ಸಿಪಾಲರು ಮುಹಮ್ಮದೀಯರಾಗಿದ್ದರೂ ಸಿದಯ್ಯನವರನ್ನು ಔದಾರ್ಯ. ಪ್ರೀತಿ, ವಾತ್ಸಲ್ಯಗಳಿಂದ ನಡೆಸಿಕೊಂಡು ನಲ್ದಿನಗಳನ್ನೂ ಮೆಲುಕು ಹಾಕುವರು.

ನನ್ನ ಬೆಂಗಳೂರು ವಾಸದಲ್ಲಿ ಸಿದ್ದಯ್ಯನವರ ಸ್ನಿಗ್ಧ ಸ್ನೇಹ ಸಹವಾಸದಲ್ಲಿ ಅವರ ಎರಡು ಗಣ್ಯ ಗುಣಗಳನ್ನು ನಾನು ಕಂಡುಕೊಂಡು ಮೆಚ್ಚಿಕೊಂಡಿದ್ದೆ ಅವರ ಅಧ್ಯಯನ ಶೀಲತೆ ಮತ್ತು ಜಿಜ್ಞಾಸೆ ಪಂಪ ಕವಿಯ ವಿಕ್ರಮಾರ್ಜುನ ವಿಜಯವನ್ನು ಪದ್ಯ ಪದ್ಯ ಸಾದ್ಯಂತವಾಗಿ ಓದ ಬಯಸಿದ ಅವರಿಗೆ ನಮ್ಮ ಪಂಡಿತ ಮಿತ್ರ ಚಕ್ರವರ್ತಿ ಮೇಷ್ಟ್ರು ನೆರವಿಗೆ ಬಂದರು. ಪ್ರತಿ ರವಿವಾರ ನಮ್ಮ ಮನೆಯಲ್ಲಿ ಪಂಪ ಕಾವ್ಯ ಪಾಠ ವರ್ಷಾನುಗಟ್ಟಲೆ ನಡೆಯಿತು. ಒಂದೊಂದು ಪಂಪನ ಹೊಸ ದೇಸಿ ಪದವನ್ನು ಸಿದ್ದಯ್ಯನವರು ಬಾಯಿ ಚಪ್ಪರಿಸಿ ಸವಿಯುವರು, ರಾಣಿಯ ಕಾಲ್ಬೆರಳ ಉಗುರುಗಳು ಮಿಂಚು ಮೆಡಕಿದಂತೆ ಎಂದು ಮೇಷ್ಟ್ರು ಓದಿದಾಗ ಇವರಿಗೆ ಮಿಂಚನ್ನೇ ಸವಿ ಪದಾರ್ಥದಂತೆ ಸವಿದು, ಉಂಡು ತೇಗಿದ ಸಂತಸ ! ಸಂಸ್ಕೃತ ಅಧ್ಯಯನದ ಬಗೆಗೂ ಸಿದ್ದಯ್ಯನವರಿಗಿದ್ದ ಅಭಿರುಚಿ ಅಪಾರ ! ಬಾಣ ಕಾದುಬರಿಯನ್ನು ಚರ್ಕವರ್ತಿ ಮೇಷ್ಟ್ರು ಓದಿ ತೋರಿಸುವಾಗ ಅವರ ಲಯಬದ್ಧ ವಾಚನ ಸಂಗೀತದ ಸವಿಯಂತೆ ಸವಿಯಂತೆ ಗದ್ಯ ವಾಚನದ ಲಯಬದ್ಧ ಪದ್ಧತಿಯನ್ನು ತೋರುವುದಕ್ಕಾಗಿಯೇ ಪಂಡಿತ ಚಕ್ರವರ್ತಿಗಳು ರಾಮಾನುಜ ಗದ್ಯವನ್ನೂ ಓದಿ ತೋರಿಸುವರು ! ಏನು ಪದಪುಂಜಗಳ ಮಂಜುಳ ಮಾಧುರ್ಯ ಅದು !

ಗುಣಾ ಪೂಜಾಸ್ಥಾನಂ ಎಂಬುದನ್ನು ಸಿದ್ದಯ್ಯನವರು ಆಚರಿಸಿ ತೋರಿಸಿದರು. ಪಂಡಿತ ಚಕ್ರವರ್ತಿಗಳ ಗುರುಗುಣ ಗೌರವದಿಂದ ಇದ ಬ್ರಾಹ್ಮಣ ಇವರು ವೀರ ಶೈವ. ಇವ ಇನ್ನೊಬ್ಬ ಎಂಬ ಭೇದ ಅವರಲ್ಲಿ ಬೆದಕಿದರೂ ದೊರೆಯದಂಥದು. ಅವರ ಶ್ರೀಮತಿ ಗಿರಿಜಾದೇವಿಯವರು ಅಷ್ಟೆ. ನನ್ನ ಮನೆಯಾಕೆಯೊಡನೆ ಅವರ ಸ್ನೇಹ-ಶಾಪಿಂಗ್, ಸೀರೆ ಖರೀದಿ !

ಅವರ "ಮಾನಸ ಸರೋವರ" ಪ್ರಕಟವಾದಾಗ ನಮ್ಮ ಮನೆಯಲ್ಲೇ ಅದರ ಬಿಡುಗಡೆ ಅದರೊಳಗಿನ ಕಲ್ಲುಸಕ್ಕರೆ ಹಳಕಿನಂತಹ ಭಾವಗೀತೆಗಳನ್ನು ಓದಿ ತೋರಿಸಿದರು. ತಮ್ಮ ಮೇಲೆ ಭಾವ ಬೀರಿದ ಬೇಂದ್ರೆ ಕಾವ್ಯದ ಛಾಯೆಯನ್ನು ಗುರುತಿಸಿದಾಗ ಅವರಿಗೆ ಸಂತೋಷ. ಮಾಸ್ತಿ ನರಸಿಂಹರಾಯರೊಂದಿಗೆ ಅವರು ಸಂಪಾದಿಸಿದ್ದ ಒಂದು ಪದ್ಯ ಸಂಕಲನ ನನಗೆ ತೀರದ ಪಾಥೇಯವೆಂಬಂತೆ ನನ್ನ ಬಾಳ ಪಯಣದ ಸಂಗಾತಿಯನ್ನಾಗಿ ಮಾಡಿದ್ದರು.

"ಶ್ರೀ'ಗಿರಿ" ನಿರ್ಮಾಣವಾದ ಮೇಲೆ ಸಿದ್ದಯ್ಯನವರು ಬೆಂಗಳೂರಿನಲ್ಲಿದ್ದೇ ನಮ್ಮಿಂದ ದೂರವಾದಂತೆನಿಸಿದರು. ಆದರೆ "ಶ್ರೀಗಿರಿಯಲ್ಲಿ ನಮ್ಮಲ್ಲಿ ನಡೆಯುತ್ತಿದ್ದ ರವಿವಾರದ ಪಂಡಿತ ಪೂಜೆ ಅವಿಚ್ಛಿನ್ನವಾಗಿ ನಡೆದು ಬಂತು. ಕವಿ ಪು.ತಿ.ನ. ಪೂಜೆಗೊಂಡರು. ಮಾಸ್ತಿ ಮರು ಭೇಟಿ ಕೊಟ್ಟರು. ಕವಿ ಬೇಂದ್ರೆ ಅವರು ಭೆಟ್ಟಿಕೊಟ್ಟು ಸ್ಫೂರ್ತಿ ನೀಡಿದರು.

೫೮ನೇ ಸಾಹಿತ್ಯ ಸಮ್ಮೇಳನ ಗುಲ್ಬರ್ಗಾದಲ್ಲಿ ನಾನೂ ಒಂದು ಗೋಷ್ಠಿಯ ಉದ್ಘಾಟಕ ಅಧ್ಯಕ್ಷೀಯ ಭಾಷಣದ ಕೊನೆಯ ಒಂದು ವಾಕ್ಯ ನನ್ನ ಹೃದಯ ವನ್ನು ಮುಟ್ಟಿ ಮುಟ್ಟಿ ಸ್ಪರ್ಶ ಹರ್ಷದ ಚಿಲುಮೆ ಮಾಡಿತು. ಅ ವಾಕ್ಯವೆಂದರೆ ಪಂಡಿತ ಕವಿಗಳು ಹಿಂದೆ ರಾಜರ ಆಸ್ಥಾನದಲ್ಲಿ ಕಂಕಣಗಳಿಂದ ಪುರಸ್ಕೃತರಾಗುತ್ತಿ ದ್ದರು. ಇಂದು ಈ ಕಾವ್ಯಾನಂದ ಬೇಡುವುದು ತನ್ನ ಮುಗರ ಕಣ್‌ಕಣವನ್ನು !' ಏನು ಸುಂದರ ಕಾವ್ಯ ಈ ವಾಕ್ಯ ! ಅಧ್ಯಕ್ಷೀಯಂ ಭಾಷಣ ಮುಗಿಯುತ್ತಲೇ ವೇದಿಕೆಯೇರಿ ಸ್ನೇಹಿತ ಸೋದರ ಸಿದಯ್ಯನವರನ್ನು ಈ ವಾಕ್ಯಕ್ಕಾಗಿ ತಬ್ಬಿಕೊಂಡರೆ ಅವರೂ ನನಗೆ ಕಣ್‌ಕಣ ವನ್ನೇ ನೀಡಿದರು. ಧನ್ಯ ಎಂದುಕೊಂಡೆ. ನಿಮ್ಮ ಕುಮಾರವ್ಯಾಸ ಭಾರತದ ಒಂದು ಪ್ರತಿ ಬೇಕು ಎಂದು ಕೇಳಿದರು. ಹೊರಗೆ ಸಮಾಜ ಪುಸ್ತಕಾಲಯದ ಸ್ಟಾಲ್ ನಿಂದ ಪುಸ್ತಕ ತಂದು ಕಾಣಿಕೆಯಾಗಿ ಅರ್ಪಿಸಿದೆ ! ನನ್ನ 'ಕುಮಾರವ್ಯಾಸಕೋಶ'ವನ್ನು ಈ ಮೊದಲೇ ಬರೆದು ತರಿಸಿಕೊಂಡಿದ್ದರು.

"ಭಾರತವೀರ" ಸಿದ್ದಯ್ಯ ಪುರಾಣಿಕರ ಸ್ಮರಣೀಯ ನಾಟಕ ದೇಶಾಭಿಮಾನ ದೇಶದ ಏಕತೆಗಳ ಗಟ್ಟಿ ತನವನ್ನು ಘೋಷಿಸುವ ಐತಿಹಾಸಿಕ ನಾಟಕ. ಗುಪ್ತರ ಸಾಮ್ರಾಟ ಬಾಲಾದಿತ್ಯ ಹೂಣರ ದೊರೆ ಮಿಹಿರ ಕುಲ ವನ್ನು ಸೋಲಿಸಿದ ಸುಂದರ ಐತಿಹಾಸಿಕ ವಸ್ತು. ಚೀನಾ ಆಕ್ರಮಣದ ಸಂಮರ್ಭದಲ್ಲಿ ಪ್ರಧಾನಿ ನೆಹರೂ ಅವರ ಒಂದು ಖಾಸಗಿ ಸಭೆಯಲ್ಲಿ ದಿಲ್ಲಿಯಲ್ಲಿ ಉಪಸ್ಥಿತರಿದ್ದು ಅವರ ವಜ್ರವಾಣಿಯಿಂದ ಸ್ಫೂರ್ತರಾಗಿ ಆರುತಿಂಗಳು ಭಾರತ ಇತಿಹಾಸದ ಶೋಧನೆ ಮಾಡುತ್ತ ಅಧ್ಯಯನ ನಡೆಸಿ "ಭಾರತ ವೀರ" ಎಂಬ ನಾಟಕ ರಚಿಸಿದರು. ನೈಜಾಮುರಾಜ್ಯದ ರಜಾಕಾರ ಹಾವಳಿಯನ್ನು ಖುದ್ದಾಗಿ ನೋಡಿದ ಕವಿ. ಹಳದಿ ಆಕ್ರಮಣದ ಹಿನ್ನೆಲೆ ಯಲ್ಲಿ ತಮ್ಮ ದೇಶಾಭಿಮಾನದ ಉತ್ಕಟತೆಯನ್ನು ಉದಾತ್ತವಾಗಿ ಚಿತ್ರಿಸಿದರು. 'ರಾಷ್ಟ್ರದ ರಕ್ಷಣೆಯ ಪ್ರಯತ್ನಗಳಿಗೆ ಪ್ರಚೋದಕವಾಗಲಿ ರಾಷ್ಟ್ರದಲ್ಲಿ ಐಕ ಮತ್ಯ ಬಂಧು ಭಾವನೆಗಳು ಬಲಗೊಂಡು ನಿರಂತರವಾಗಿ ನೆಲೆಗೊಳ್ಳಲಿ ಎಂಬ ಹಾರೈಕೆಯಿಂದ ಈ ನಾಟಕ ರಚಿಸಿರು ದಾಗಿ ಹೇಳಿದರು. ಕೆಚ್ಚಿನ ಕನ್ನಡಿಗನ ಈ ರಾಷ್ಟ್ರಪ್ರೇಮ ಕವಿ ಮುಗಳಿ ಅವರ ಈ ಸಾಲುಗಳನ್ನು ನೆನಪಿಗೆ ತರುತ್ತದೆ.

ವಿಶ್ವಮಾತೆಗೆ ಮಣಿದು
ಭಾರಕ್ಕೆ ಕೈ ಮುಗಿದು
ಹೆತ್ತಾಯಿ ಕನ್ನಡಕೆ ಬಾಳ
ಕಾಣಿಕೆಯಿಂದ
ನಾಡವರು ನಾವು ಕರುನಾಡವರು

೫–೯–೯೪ ಶಿಕ್ಷಕರ ದಿನ ಹತ್ತು ವರ್ಷಗಳ ಹಿಂದೆ ಅದರ್ಶ ಶಿಕ್ಷಕರಾಗಿ ಬದುಕಿ ಶಿಕ್ಷಣ ಪ್ರಪಂಚಕ್ಕೆ ಬಾಳ ಕಾಣಿಕೆ ನೀಡಿದ ನನ್ನ ಬಾಲ್ಯ ಸ್ನೇಹಿತ ಪ್ರೊ, ಟಿ. ರೂಬೆನ್ ಕಣ್ಮರೆಯಾಗಿ ಈ ಸಲದ ಶಿಕ್ಷಕರ ದಿನಾಚರಣೆಗೆ ಸರಿಯಾಗಿ ಹತ್ತು ವರ್ಷಗಳು ಅಧ್ಯಯನಶೀಲ ಆದರ್ಶ ವಿದ್ಯಾರ್ಥಿ ದೆಸೆಯಿಂದ ಬೆಳೆದ ಉನ್ನತ ಹುದ್ದೆಯ "ಶ್ರೀಗಿರಿಗೇರಿ" ಶಿಕ್ಷಕರ ದಿನಾಚರಣೆಯಂದೇ ಕನ್ನಡ ತಾಯಿಗೆ ತಮ್ಮ ಬಾಳ ಕಾಣಿಕೆಯಿತ್ತರು. ಸಿದ್ಧಕವಿ ಸಿದ್ಧಯ್ಯ ಪುರಾಣಿಕ ಕಾವ್ಯಾನಂದರು.

(ಕರ್ಮವೀರ ಕೃಪೆಯಿಂದ)

# ಡಾ॥ ಸಿದ್ಧಯ್ಯ ಪುರಾಣಿಕ - ಒಂದು ನೆನಪು

ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ

ಭಾರತೀಯ ಭಾಷೆಯ ಯಾವುದೇ ಭಾಷೆಯ ಶ್ರೇಷ್ಠ ಕೃತಿಗೆ ಭಾರತೀಯ ಮಟ್ಟದ ಗೌರವವನ್ನು ನೀಡುವ ಒಂದು ಪ್ರಯತ್ನ ಮೊದಲಾದದ್ದು ಜ್ಞಾನ ಪೀಠ ಪ್ರಶಸ್ತಿಯಿಂದ.

ಇಂಥದೇ ಮತ್ತೊಂದು ಪ್ರಶಸ್ತಿ ಭಾರತೀಯ ಭಾಷೆಗಳಲ್ಲಿ ಶ್ರೇಷ್ಠವಾದ ಸಾಹಿತ್ಯ ಕೃತಿಗೆಂದು ಆರಂಭವಾದ ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತು ಆರಂಭಿಸಿದ ಭಿಲ್ವಾರಾ ಪ್ರಶಸ್ತಿ. 1980ರಲ್ಲಿ ಇದು ಮೊದಲು ಆರಂಭವಾದಾಗ ಮೊದಲ ಪ್ರಶಸ್ತಿಗೆ ಪಾತ್ರವಾದವರು ಯಾರು ಗೊತ್ತೆ ? ಗುಲಬರ್ಗ ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರದ ಬಡ ಕುಟುಂಬವೊಂದರಲ್ಲಿ ಜನಿಸಿದ ಡಾ॥ ಸಿದ್ಧಯ್ಯ ಪುರಾಣಿಕರು. ಅವರ ವಚನ ಸಂಕಲನ-ವಚನೋದ್ಯಾನಕ್ಕೆ ಅದು ಪ್ರಾಪ್ತವಾಯಿತು. ಕನ್ನಡಕ್ಕೆ ಭಾರತಮಟ್ಟದ ಗೌರವವನ್ನು ತಂದುಕೊಟ್ಟ ಈ ಕೃತಿ ಕನ್ನಡದ ಅತ್ಯದ್ಭುತ ಸಾಹಿತ್ಯ ಪ್ರಕಾರವಾದ ವಚನ ಪ್ರಕಾರಕ್ಕೆ ಸೇರಿರುವುದು ಅರ್ಥಪೂರ್ಣವಾದುದು.

ವಚನಸಾಹಿತ್ಯ, ಭಾಷೆ ಸಾಹಿತ್ಯಗಳ ದೃಷ್ಟಿಯಿಂದಲೇ ಅಲ್ಲದೆ ಬದುಕು ಹಾಗೂ ಸಾಹಿತ್ಯಗಳಿಗಿರುವ ಸಂಕೀರ್ಣ ಸಂಬಂಧಗಳನ್ನೂ, ಭಾಷೆಯ ಅಭಿವ್ಯಕ್ತಿ ಶಕ್ತಿಯ ವಿಶಿಷ್ಟ ಸ್ಥಿತಿಗಳನ್ನೂ, ಮೆರೆಯುವ ವಿಶಿಷ್ಟ ಅದ್ಭುತ ಸಾಹಿತ್ಯ. ಈ ಸಾಹಿತ್ಯ 12ನೇ ಶತಮಾನದಲ್ಲಿ ನಡೆದ ಶರಣಕ್ರಾಂತಿಯ ಉಪವಸ್ತುವಾದರೂ ಸಾಹಿತ್ಯಕವಾದ ಅದರ ವಿಶಿಷ್ಟತೆ ಅದ್ಭುತವಾದದ್ದು. ದುರ್ದೈವವೆಂದರೆ ಇಂಥ ವಚನ ಸೃಷ್ಟಿ ಬಸವಣ್ಣನವರು ಕಲ್ಯಾಣವನ್ನು ಬಿಡಬೇಕಾಗಿ ಬಂದಾಗ ಇದ್ದಕ್ಕಿದ್ದಂತೆ ನಿಂತುಹೋದದ್ದು, ಮತ್ತದು ಮೊಳೆತು ವಚನ ಸೃಜನಶೀಲವಾಗಲು ತೋಟದ ಸಿದ್ಧಲಿಂಗಯತಿಯರಿಗೆ ಕಾಯಬೇಕಾಯಿತು. ತೋಂಟದ ಸಿದ್ಧಲಿಂಗನ ವಚನವನ್ನು ಮತ್ತೆ ಸೃಜನಶೀಲವಾಗಿ ಬಳಸಿದ ಪ್ರತಿಭಾವಂತನಾದರೂ ವಚನ ವಚನಗಳಿಗೆ ಹನ್ನೆರಡನೆಯ ಶತಮಾನದ ವಚನಗಳಿಗಿರುವ ಸಮಾಜೋ-ಧಾರ್ಮಿಕ ಆಧ್ಯಾತ್ಮಿಕ-ಸಾಹಿತ್ಯ-ನೈತಿಕ ಹಾಗೂ ಭಾಷಿಕವಾದ ಸಂಕೀರ್ಣ ಆಯಾಮಗಳಿಲ್ಲ; ಸಾಮಾಜಿಕವಾದ ಕಳಕಳಿ ಜವಾಬ್ದಾರಿಗಳು ಹಾಗೂ ಬದುಕಿನ ಬದ್ಧತೆಗಳು ಅದೇ ಪ್ರಮಾಣದಲ್ಲಿ ಇಲ್ಲ. ಈ ಹಿನ್ನೆಲೆಯಲ್ಲಿ ಸಿದ್ಧಲಿಂಗನ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವಾಗಿ ಸಿದ್ಧಲಿಂಗನ ಧಾರ್ಮಿಕ ಅಗತ್ಯಗಳಿಗೆ ದುಡಿಯುವ ಮಾಧ್ಯಮವಾಗಿರುವುದು ವೇದ್ಯವಾಗುತ್ತದೆ.

ಇಷ್ಟನ್ನು ಹೇಳುವುದಕ್ಕೆ ಕಾರಣ ಎಂದರೆ ಆಧುನಿಕ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವಾಗಿ ಮಾತ್ರ ರಚನೆಯಾಗಿವೆಯೆಂಬುದನ್ನು ಸೂಚಿಸುವುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಸಿದ್ಧಯ್ಯ ಪುರಾಣಿಕರು ವಚನೋದ್ಯಾನವನ್ನು ತೋಂಟದ ಸಿದ್ಧಲಿಂಗಯತಿಗೆ ಅರ್ಪಿಸಿರುವುದು ಅರ್ಥಪೂರ್ಣವಾಗಿದೆ.

ಹೊಸಗನ್ನಡ ವಚನಗಳನ್ನು ಬರೆದವರಲ್ಲಿ ಡಾ॥ ಸಿದ್ಧಯ್ಯ ಪುರಾಣಿಕರೇ ಮೊದಲಿಗರೇನೂ ಅಲ್ಲ. ಡಾ॥ ಎಲ್. ವಿ. ರಂಗಣ್ಣನವರು ತಮ್ಮ ಸೃಜನಶೀಲತೆಗೆ ವಚನವೊಂದನ್ನೇ ಮಾಧ್ಯಮವಾಗಿ ಮಾಡಿಕೊಂಡರು. ಆಧುನಿಕವಾದ ಅನೇಕ ಕಾರ್ಯ ತಂತ್ರಗಳನ್ನವರು ವಚನಗಳಲ್ಲಿ ಪ್ರಯೋಗಿಸಿದ್ದಾರೆ. ಇನ್ನೊಬ್ಬ ಪ್ರಮುಖ ವಚನಕಾರರೆಂದರೆ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು. ಈ ಪಟ್ಟಿ ಹೀಗೆ ಬೆಳೆಯುತ್ತ ಹೋಗುವುದಾದರೂ ಆಧುನಿಕ ವಚನಕಾರರಲ್ಲಿ ಪ್ರಮುಖರಾದವರಲ್ಲಿ ಅತ್ಯಂತ ಗಮನಾರ್ಹವಾದ ಹೆಸರು ಸಿದ್ಧಯ್ಯ ಪುರಾಣಿಕರದು.

ವಚನೋದ್ಯಾನದ ಈ ಕೆಲವು ವಚನಗಳನ್ನು ಗಮನಿಸಿ :

1) ನನಗೆ ತೋರಿದಂತೆ ಬರೆದರೆ ಅದು ರಚನೆ

ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ
ಸ್ವತಂತ್ರಧೀರ ಸಿದ್ಧೇಶ್ವರ ಪ್ರಭುವೇ

2) ವಿದ್ಯೆ ಬಂತು, ವಿನಯ ಹೋಯಿತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರ ಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ
ಹೋಯ್ತು;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ
ಹೋಯ್ತು;
ಬೋಧನೆ ಬಂತು, ಸಾಧನೆ ಹೋಯ್ತು;
ಮಾತು ಬಂತು, ಕೃತಿ ಹೋಯ್ತು;
ಜಾತಿ ಬಂತು, ನೀತಿ ಹೋಯ್ತು;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು;
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರಧೀರ ಸಿದ್ಧೇಶ್ವರ ಹೋದ.

ಮೊದಲನೆಯ ವಚನ ದೇವವಾಣಿ ಜನವಾಣಿಯಾಗಲು ನಿರಾಕರಿಸಿದಾಗ ಜನವಾಣಿಯನ್ನೇ ದೇವವಾಣಿಯಾಗಿ ಮಾಡಿದರು. ವಚನಕಾರರು ಎಂಬ ಪ್ರೊ.ಬಸವರಾಜರ ಮಾತನ್ನು ನೆನೆಯುವಂತೆ ಮಾಡುತ್ತದೆ. ನಾವು ಮಾತಾಡಿದರೆ ಯಾವುದು ಕೇವಲ ಮಾತಾಗಿ ಉಳಿಯುತ್ತದೆಯೋ ಅದೇ ವಚನವಾಗುತ್ತದೆ. ದೇವವಾಣಿ ಯಾವಾಗ ಎಂಬುದನ್ನು ತುಂಬ ಅರ್ಥಪೂರ್ಣವಾಗಿ ಮೂರೇ ಸಾಲುಗಳಲ್ಲಿ ಈ ವಚನ ಸೂಚಿಸುತ್ತದೆ.

ಎರಡನೆಯ ವಚನವಂತು ಜಾನಪದ ಹಾಡೊಂದರ ಸೂತ್ರವೊಂದನ್ನು ಬಳಸಿಕೊಂಡು, ಅತ್ಯಪೂರ್ವ ವಚನವಾಗಿಬಿಟ್ಟಿದೆ. ಮೊದಲ ವಚನದಲ್ಲಿ ವಚನದ ಮೌಲ್ಯವನ್ನು ಇತ್ಯಾತ್ಮಕವಾಗಿಯೂ, ಎಂದರೆ ವಚನದಲ್ಲಿ ನೇತ್ಯಾತ್ಮಕವಾಗಿಯೂ ಧ್ವನಿಸುವ ಇಂಥ ವಚನಗಳಲ್ಲೂ ನೋಡಿದಾಗ ವಚನ ಸಿದ್ಧಯ್ಯ ಪುರಾಣಿಕರ ಪ್ರತಿಭೆಗೆ ಎಷ್ಟು ಸಹಜವಾದ ಅಭಿವ್ಯಕ್ತಿಯಾಗಿದೆ ಎಂಬುದು ಮನವರಿಕೆಯಾಗುತ್ತದೆ.

ಫಲವಿತ್ತ ರೆಂಬೆ ಬಾಗುತ್ತದೆ
ಗೊನೆ ಹೊತ್ತ ಬಾಳೆ ಬಾಗುತ್ತದೆ
ತೆನೆ ಹೊತ್ತ ದಂಟು ಬಾಗುತ್ತದೆ
ಏನೇನೋ ಇಲ್ಲದುದು ಬೀಗುತ್ತದೆ ನೋಡಾ
ಸ್ವತಂತ್ರ ಧೀರ ಸಿದ್ಧೇಶ್ವರಾ.

ಈ ವಚನದ ಸೊಗಸಂತೂ ಧ್ಯಾನಯೋಗ್ಯವಾದುದು.

ಹಣ್ಣನ್ನು ಕೊಟ್ಟ ರೆಂಬೆ ಬೀಗುವುದಿಲ್ಲ, ನಮ್ರವಾಗಿ ಬಾಗುತ್ತದೆ. ಹಾಗೆಯೇ ಗೊನೆಯನ್ನು ಹೊತ್ತ ಬಾಳೆಯೂ ನೆಲದವರೆಗೂ ಬಾಗುತ್ತದೆ. ಮತ್ತೆ ತೆನೆಯನ್ನು ಹೊತ್ತ ದಂಟು ಕೂಡ ಬಾಗುತ್ತದೆ. ಈ ಮೂರು ಸಂದರ್ಭಗಳಲ್ಲಿ ಸಮೃದ್ಧಿಯನ್ನು ತ್ಯಾಗಗಳ ನಮ್ರತೆ ಒಂದು ಕಡೆ ದುರಹಂಕಾರದ ಸೊಕ್ಕು ಒಂದು ಕಡೆ. ಬಾಗು ಮತ್ತೂ ಬೀಗು ಎಂಬ ಪದಗಳನ್ನು ಮುಖಾಮುಖಿಯಾಗಿಸಿ ಅರ್ಥಪೂರ್ಣವಾಗಿಸುತ್ತದೆ. ಆರಂಭದ ಕ್ರಿಯಾಪದಗಳು ಇತ್ತ, ಹೊತ್ತ ಮತ್ತು ಹೆತ್ತ ಎಂಬುವುಗಳಲ್ಲಿ ಪದದ ಬಳಕೆಯ ವೈವಿಧ್ಯದ ಜೊತೆಗೆ ಅರ್ಥಸ್ವಾರಸ್ಯ ಕೂಡ ಹೆಚ್ಚುವುದು ಈ ವಚನದ ವೈಶಿಷ್ಟ್ಯ.

ಇದೇ ಸಂಕಲನದ ಇನ್ನೂ ಕೆಲವು ಉದಾಹರಣೆಗಳನ್ನು ನೋಡಿ :

1) ಹೂವು ತನ್ನೆದೆಯ ತೆರೆದರೆ
ಅದು ಸುಗಂಧ ಮಕರಂದಗಳ ಸುಗ್ಗಿ
ಸಿಂಪುಗಳ ತನ್ನೆದೆಯ ತೆರೆದರೆ
ಮುತ್ತುಗಳು ಬರುವವು ನುಗ್ಗಿ
ಹನುಮ ತನ್ನೆದೆಯ ತೆರೆದರೆ ಸೀತಾರಾಮರ ಚಿತ್ರ
ಇರುಳು ತನ್ನೆದೆಯ ತೆರೆದರೆ ಕೋಟಿ ಕೋಟಿ
ನಕ್ಷತ್ರ
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು ನಿಧಿ ನಿಧಾನ
ನಿನ್ನ ವರಪ್ರಧಾನ
ನನ್ನೆದೆಯಲ್ಲಿ ನೀನಾದರೂ ಇರಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ

2) ದಾನವರನ್ನಾಗಿ ಮಾಡಿ ದಾಸಿಗೇರಿಸದಿರು
ಮಾನವರನ್ನಾಗಿ ಮಾಡಿ ರಸತಾಳಕ್ಕೆ ಕಳಿಸದಿರು

ಮಾನವರನ್ನಾಗಿ ಮಾಡಿ ಇಡೀ ಸುಂದರ
ಜಗತ್ತಿನಲ್ಲಿ

ಉಳಿಸಿ ಬೆಳೆಸಿ ಬೆಳಗಿಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ.

3) ಹಳೆರೆಕ್ಕೆ ಕಳಚಿದವು ಹೊಸರೆಕ್ಕೆ
ಕೊನರಿದವು

ಹಕ್ಕಿಮಾತ್ರ ಮೊದಲಿನದೇ ಅಯ್ಯ
ನಿನ್ನ ಹೆಸರಲ್ಲಿ ಹಳೆಹೊಸ ಗ್ರಂಥಪಂಥಗಳೂ
ವೇದ್ಧಾಂತ ಸಿದ್ಧಾಂತ ರಾದ್ಧಾಂತಗಳಲ್ಲಿ
ಹುಟ್ಟಿದರೂ

ನೀನು ಮಾತ್ರ ಮೊದಲಿಗ
ಮೂಲಿಗರಲ್ಲಿ ಮೂಲಿಗನಯ್ಯ ಸ್ವತಂತ್ರಧೀರ
ಸಿದ್ಧೇಶ್ವರಾ

4) ಹೋಮುಗನಂಥ ವಿಶ್ವಕವಿಗಳು ಭಿಕ್ಷೆ
ಬೇಡಬೇಕು

ಹೆಂಡ ಮಾರುವವರು ಲಕ್ಷಾಧೀಶರಾಗಬೇಕು
ಇದು ನಿನ್ನ ಸಾಮಾಜಿಕ ನ್ಯಾಯವೇನಯ್ಯ
ದುಡಿದವರಿಗೆ ದುಗ್ಗಾಣಿ ದುಡಿಸಿಕೊಳ್ಳುವರಿಗೆ
ಅಷ್ಟೈಶ್ವರ್ಯ

ಇದೇ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯ?

ಮೇಲಿನ ನಾಲ್ಕು ವಚನಗಳು ವಿಷಯ ವೈವಿಧ್ಯ ವನ್ನೂ ಅಭಿವ್ಯಕ್ತಿಯ ಸೊಬಗನ್ನೂ ಮನಗಾಣಿಸಿ ಆಧು ನಿಕ ವಚನಗಳಲ್ಲಿ ಸಿದ್ಧಯ್ಯ ಪುರಾಣಿಕರ ಪ್ರಾಮುಖ್ಯದ ಬಗ್ಗೆ ಗಮನಹರಿಸುವಂತೆ ಮಾಡುತ್ತದೆ.

ಅವರ ಎಂಟನೆಯ ವಚನ ಸಂಕಲನ–ವಚನ ನಂದನ, ಇದನ್ನು ಡಾ|| ಶಿವಕುಮಾರಸ್ವಾಮಿಗಳಿಗೆ ಅರ್ಪಿಸಿದ್ದಾರೆ.

ವಿಚಿತ್ರವೆಂದರೆ ಇಲ್ಲಿಯ ವಚನಗಳು ವಚನೋ ತ್ತಮದತ್ತ ಮುಕ್ತಾಭಿವ್ಯಕ್ತಿಯಿಂದ ಛಂದೋಬದ್ಧತೆ ಯತ್ತ ಹೊರಳುತ್ತಿರುವುದು. ಇದರಲ್ಲಿ 475 ವಚನ ಳಲ್ಲಿ ವಸ್ತು ವೈವಿಧ್ಯವೇನೋ ವಿಪುಲವಾಗಿದೆ, ಆದರೆ ವಚನೋದ್ಯಾನದಲ್ಲಿ ಕಂಡು ಬರುವ ಸಹಜ ಚೆಲುವು ಈ ಸಂಕಲನದಲ್ಲಿ ಕಾಣುವುದು ಬಹಳ ಕಡಿಮೆಯೇ.

ಈ ಎರಡು ವಚನಗಳ ಸಂಕಲನಗಳನ್ನು ಗಮನಿಸಿ ದರೆ ವಚನ ಪ್ರಕಾರ ಅವರ ಪ್ರತಿಭೆಗೆ ಹೇಳಿ ಮಾಡಿಸಿ ದಂಥ ಅಭಿವ್ಯಕ್ತ ಮಾಧ್ಯಮವಾಗಿದೆಯೆನ್ನಿಸುತ್ತದೆ.

ಕನ್ನಡ ಕವಿತೆಯ ಬಗ್ಗೆ ಒಮ್ಮೆ ಮಾತನಾಡುತ್ತಿ ದ್ದಾಗ ನವ್ಯ, ದಲಿತ, ಬಂಡಾಯ ಹಾಗೂ ನವ್ಯೋತ್ತರಗಳ ಪಂಥಗಳನ್ನು ಹಾದು ಬಂದ ನಿಮಗೆ ಈ ಪಂಥಗಳ ಬಗೆಗೆ ಏನನ್ನಿಸುತ್ತದೆ ಎಂದಾಗ ಅವರ ಮಾತು ಸ್ಪಷ್ಟವಾಗಿತ್ತು. ಕನ್ನಡ ಕಾವ್ಯದ ಸಾಹಿತ್ಯವನ್ನೂ ತತ್ವಮಯತೆಯನ್ನೂ ಉಳಿಸಿಕೊಳ್ಳಲು ಹೆಣಗಿದ ತಿರುವುಗಳು ಅವು ಎಂದು ಅವರು ನುಡಿದರು. ಮಂಕು ತಿಮ್ಮನ ಕಗ್ಗದ ರೀತಿಯಲ್ಲಿ ಮರುಳು ಸಿದ್ಧನ ಕಂತೆಯನ್ನು ಪ್ರಕಟಿಸಿದ್ದರೂ ನನ್ನ ಮನಸ್ಸನ್ನು ತುಂಬಿಕೊಂಡಿರುವುದು ಶರಣಸಾಹಿತ್ಯ ಎಂದದ್ದುಂಟು ಇತ್ತೀಚಿಗೆ ಅವರು ಬರೆದ ಇನ್ನೂ ಅನೇಕ ವಚನಗಳು ಪ್ರಕಟವಾಗಿಲ್ಲ. ಅಷ್ಟೇ ಅಲ್ಲ ತಮ್ಮ ಎಲ್ಲ ವಚನಗಳ ಸಮಗ್ರ ಸಂಪುಟವೊಂದು ಪ್ರಕಟವಾಗಬೇಕೆ ನ್ನುವ ಆಸೆ ಅವರದಾಗಿತ್ತು.

ಶರಣರು ಅವರ ಮನಸ್ಸಿನ ಮೇಲೆ ಬೀರಿದ್ದ ಪ್ರಭಾವ ಅದರಲ್ಲೂ ಕರ್ನಾಟಕದ ಗಾಂಧಿಯೆಂದೇ ಖ್ಯಾತರಾಗಿದ್ದ ಶರಣ ಹರ್ಡೇಕರ ಮಂಜಪ್ಪನವರ ಪ್ರಬಾವ ತೀವ್ರವಾಗಿತ್ತು. ಮಂಜಪ್ಪನವರನ್ನು ಕುರಿತು ಬರೆದಿರುವ ಜೀವನ ಚರಿತ್ರೆ ಆತ್ಮೀಯತೆಯಿಂದ ಕೂಡಿದು ದಾಗಿದೆ. ಸಿದ್ಧರಾಮ ಮತ್ತು ಮಹದೇವಿಯಕ್ಕರನ್ನು ಕುರಿತ ಜೀವನ ಚರಿತ್ರೆಗಳೂ ಚೊಕ್ಕವಾದುವುಗಳಾಗಿದ್ದರೆ ಬಸವಣ್ಣನವರ ಜೀವನ ಮತ್ತು ಸಂದೇಶ ಎಂಬ ಕೃತಿ ಬಸವಣ್ಣನವರ ಬಗೆಗೆ ಎದ್ದಿದ್ದ ವಿವಾದಗಳ ಬಗೆಗೆ ಈವ ರೆಗೂ ಬಂದ ಗ್ರಂಥಗಳ ಸಾರವನ್ನೂ ಒಳಗೊಂಡು ಇನ್ನಷ್ಟು ಸಾರವತ್ತಾಗಿದೆ.

ಶರಣ ಚರಿತಾಮೃತ ಕುರಿತ ಮಾದರ ಚೆನ್ನಯ್ಯ ನಿಂದ ಹಿಡಿದು ಇಂದಿನ ಶರಣರವರೆಗೆ ಎಪ್ಪತ್ತಕ್ಕೂ ಹೆಚ್ಚು ಶರಣರ ಸೊಗಸಾದ ಜೀವನಚಿತ್ರಗಳನ್ನು ನೀಡಿದೆ. ಸರಳವೂ ಮನೋಜ್ಞವೂ ನೇರವೂ ಆದ ಇಲ್ಲಿಯ ಬರವಣಿಗೆಯ ಹಿಂದೆ ಅಧ್ಯಯನದ ಹರಹಿದೆ ಶರಣರನ್ನು ಕುರಿತ ಪುಟ್ಟ ವಿಶ್ವಕೋಶದಂತಿರುವ ಈ ಕೃತಿ ಸಂಗ್ರಹಾರ್ಹವಾದುದು.

ಸಿದ್ಧಯ್ಯ ಪುರಾಣಿಕರು ಕೇವಲ ಶರಣ ಸಾಹಿತ್ಯಕ್ಕೇ ಮೀಸಲಾದವರಲ್ಲ. ಜಲಪಾತದಿಂದ ಹಿಡಿದು ಜಂಗಮದವರೆಗೆ ಅವರು ಪ್ರಕಟಿಸಿರುವ ಆರು ಕವನ ಸಂಕಲನಗಳು ನವೋದಯ ಕಾವ್ಯದ ಹಾದಿಯಲ್ಲಿ ಕ್ರಮಿಸಿ ಬಂದಿವೆ. ಮೊದಲು ಮಾನವನಾಗು, ಅವಿಭಕ್ತಂ ವಿಭಕ್ತೇಷು ಎಂಬಂಥ ಕವನಗಳು ಯಶಸ್ವಿಯೂ ಜನಪ್ರಿಯವೂ ಆಗಿರುವುದು ಅವುಗಳ ಗೀತ ಗುಣಕ್ಕೆ ಮಾತ್ರವಲ್ಲ; ಆ ಕವಿತೆಗಳಲ್ಲಿರುವ ಜೀವನವನ್ನು ಕುರಿತ ಕಾಳಜಿ ಗಾಢವಾದ ಎಂಬುದನ್ನು ಮರೆಯುವಂತಿಲ್ಲ.

ಸಿದ್ಧಯ್ಯ ಪುರಾಣಿಕರು ಒಳ್ಳೆಯ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ನಾಟಕಗಳನ್ನು ಎರಡು ಕಥಾ ಸಂಕಲನಗಳನ್ನು ಒಂದು ಐತಿಹಾಸಿಕ ಕಾದಂಬರಿಯನ್ನು ರಚಿಸಿದ್ದಾರೆ. ನಿರಂತರವಾದ ಸಾಹಿತ್ಯ ರಚನೆ ಅವರದು.

ಶಿಶು ಸಾಹಿತ್ಯ ಕ್ಷೇತ್ರ ಕನ್ನಡದಲ್ಲಿ ಇನ್ನೂ ಸ್ವಲ್ಪಮಟ್ಟಿಗೆ ನಿರ್ಲಕ್ಷಿತವಾಗಿಯೇ ಇರುವ ಕ್ಷೇತ್ರ. ಈ ಕ್ಷೇತ್ರದಲ್ಲಿ ಕೈಯಾಡಿಸಿರುವ ಸಿದ್ಧಯ್ಯ ಪುರಾಣಿಕರು ಐದು ಕೃತಿಗಳನ್ನು ರಚಿಸಿದ್ದಾರೆ. ಅವರ ಮೊದಲ ಶಿಶು ಗೀತೆಗಳ ಸಂಕಲನ ತುಪ್ಪಾ ರೊಟ್ಟಿಗೋಗೇನೆ ಭಾರತ ಸರ್ಕಾರದ ಪ್ರಶಸ್ತಿ ಪಡೆದಿದೆ. "ನನ್ನಯ ಕೋಲಿದು ಅಜ್ಜನ ಕುದುರೆ" ಎಂಬ ಶಿಶುಗೀತೆಗಳು ಶಿಶುಲೋಕದಲ್ಲಿ ಜನಪ್ರಿಯವಾಗಲು ಕಾರಣ ಸಿದ್ಧಯ್ಯ ಪುರಾಣಿಕರು ಕಾಣುವ ಮುಗ್ಧರೂ ಕುತೂಹಲಕರವೂ ಆದ ಶಿಶು ಲೋಕ, ಬಗೆಬಗೆಯ ತಿಂಡಿಗಳ ವರ್ಣನೆಯೊಂದಿಗೆ ಬೆಳೆಯುವ ಅವರ ಶಿಶುಗೀತೆ "ಗೆಳೆಯರ ಊಟಕೆ ಕರೆಯುವೆ ಅಮ್ಮಾ" ಎಂಬುದು ಕನ್ನಡದ ವಿವಿಧ ಬಗೆಯ ಭಕ್ಷ್ಯಗಳ ವೈವಿಧ್ಯದಿಂದ ಚಿತ್ತಾಕರ್ಷಕವಾಗಿದೆ.

ಸಿದ್ಧಯ್ಯ ಪುರಾಣಿಕರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಪದವೀಧರ. 1943ರಲ್ಲಿ ತಹಸೀಲ್ದಾರರಾಗಿ ಆಯ್ಕೆಯಾದ ಅವರು ಹೈದರಾಬಾದ್ ಮತ್ತು ಕರ್ನಾಟಕದ ವಿವಿಧ ಕ್ಷೇತ್ರ ಹಾಗೂ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಕರ್ನಾಟಕದ ಸೇವೆಗೆ ಸೇರುವವರೆಗೂ ಹೈದರಾಬಾದ್–ಕರ್ನಾಟಕದಲ್ಲೆ ಕೆಲಸ ಮಾಡಿದರು. ಈ ಮನೋಧರ್ಮವನ್ನುಳ್ಳ ಇವರಿಗೆ ಆಡಳಿತದ ಅಧಿಕಾರ ಸೇವೆಯು ಅವಕಾಶಗಳನ್ನು ತೆರೆದುದೇ ಅಲ್ಲದೆ ನಿರ್ಲಕ್ಷಿತವಾಗಿದ್ದ ಕನ್ನಡ ಪ್ರದೇಶಗಳ ಕಡೆಗೆ ಗಮನ ಹರಿಸುವಂತೆ ಮಾಡಿತು. ಹೈದರಾಬಾದ್ ಪ್ರದೇಶದ ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯರಾದ ಮಾಸ್ತಿ ನರಸಿಂಗರಾವ್ ಮೊದಲಾದವರ ಜೊತೆಗೂಡಿ ಸ್ಥಾಪಿಸಿ ಮನೆಯನ್ನೇ ಕಾರ್ಯಾಲಯವಾಗಿ ಮಾಡಿಕೊಂಡು ಕನ್ನಡಕ್ಕಾಗಿ ದುಡಿದದ್ದು ಗಮನಾರ್ಹ. ಡಾ॥ ಶಿವರಾಮ ಕಾರಂತ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಬಿ.ಎಂ ಶ್ರೀ., ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ವಿ. ಸೀತಾರಾಮಯ್ಯ, ಅ.ನ.ಕೃ., ವಿನಾಯಕ ಕೃಷ್ಣ ಗೋಕಾಕ, ಎ. ಎನ್. ಮೂರ್ತಿರಾವ್, ಬೇಟಗೇರಿ ಕೃಷ್ಣಶರ್ಮ, ರಂ. ಶ್ರೀ. ಮುಗಳಿ, ಸಿ. ಕೆ. ವೆಂಕಟರಾಮಯ್ಯ, ಜೋಳದ ರಾಶಿ ದೊಡ್ಡನಗೌಡ, ಉತ್ತಂಗಿ ಚನ್ನಪ್ಪ, ತವಗ ಭೀಮ ಸೇನರಾವ್, ಎಸ್. ಕೆ. ಕರೀಂಖಾನ್ ಇವರು ಈ ಅವಧಿಯಲ್ಲಿ ಸಿದ್ಧಯ್ಯ ಪುರಾಣಿಕರಿಂದ ಆಹ್ವಾನಿತರಾಗಿ ಕನ್ನಡದ ಕಂಪನ್ನು ಹೈದರಾಬಾದ್, ಕರ್ನಾಟಕದಲ್ಲಿಯೂ ಹರಡಿದವರಲ್ಲಿ ಪ್ರಮುಖರೆಂಬುದನ್ನು ನೆನೆದರೆ ಸಿದ್ಧಯ್ಯನವರು ಮಾಡಿದ ಕನ್ನಡದ ಕೆಲಸದ ಬಹುಮುಖದ ಪರಿಚಯವಾದೀತು.

ಸಿದ್ಧಯ್ಯ ಪುರಾಣಿಕರ ತಮ್ಮ ಅಧಿಕಾರದ ಅವಧಿಯಲ್ಲಿ ಕನ್ನಡಕ್ಕಾಗಿ ಕೆಲಸ ಮಾಡುವ ಯಾವ ಸಂದರ್ಭವನ್ನೂ ನಿರುಪಯುಕ್ತಗೊಳಿಸಿ ಕೊಂಡವರಲ್ಲ.

ಶಿಕ್ಷಣ ಇಲಾಖೆಯಲ್ಲಿದ್ದಾಗ ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶ ಯೋಜನೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು ಯೋಜನೆಗಳು ಕಾರ್ಯರೂಪಕ್ಕೆ ಬರಲು ನೆರವಾದರು. ಸುಲಭ ಬೆಲೆಯಲ್ಲಿ ಕನ್ನಡದ ಪುಸ್ತಕಗಳು ಕನ್ನಡ ಜನತೆಗೆ ದೊರೆಯುವ ಯೋಜನೆಯ ಹಿಂದೆಯೂ ಇವರ ಕೈಯಿದೆ. ರಾಘವಾಂಕನ ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ಉತ್ತಂಗಿ ಚನ್ನಪ್ಪನವರು ಸಂಪಾದಿಸಿದ ಸರ್ವಜ್ಞ ವಚನಗಳು ಈ ರೀತಿ ಪ್ರಕಟವಾದ ಕೃತಿಗಳಲ್ಲಿ ಮುಖ್ಯವಾದುವು.

ಇವರ ಈ ಕನ್ನಡಾಭಿಮಾನವನ್ನು ಗ್ರಹಿಸಿಯೇ ಸರ್ಕಾರ ಇವರನ್ನು ಕರ್ನಾಟಕದ ಗಡಿ ಸಮಿತಿ, ಕನ್ನಡ ಪ್ರಾಧಿಕಾರ ಸಮಿತಿ, ಡಾ॥ ಸರೋಜಿನಿ ಮಹಿಷಿ ಮೊದಲಾದ ಸಮಿತಿಗಳ ಸದಸ್ಯರನ್ನಾಗಿ ನೇಮಿಸಿತು.

ಹೈದರಾಬಾದಿನ ಸೇವೆಯಿಂದ ಕರ್ನಾಟಕ ಸೇವೆಯನ್ನು ಸಿದ್ಧಯ್ಯ ಪುರಾಣಿಕರು ಆರಿಸಿಕೊಳ್ಳುವುದಕ್ಕೆ ಮುಖ್ಯ ಕಾರಣ ಅವರ ಕನ್ನಡದ ಅಭಿಮಾನವೇ, ಸೇವಾ ಹಿರಿತನದಲ್ಲಿ ತೊಡಕುಗಳುಂಟಾದರೂ ಕನ್ನಡದ ಅಭಿಮಾನದಲ್ಲಿ ಅದನ್ನು ಮರೆತವರು ಅವರು.

ಕನ್ನಡದ ಕೆಲಸ ಅವರಿಗೆ ಎಷ್ಟು ಪ್ರಿಯವಾದುದೆಂದರೆ ತಮ್ಮ ಇಳಿವಯಸ್ಸಿನಲ್ಲೂ ಗೋಕಾಕ್ ಚಳುವಳಿಯಲ್ಲಿ ಧುಮುಕಿದರು. ಅಷ್ಟೇ ಅಲ್ಲ, ಕನ್ನಡದ ಹಿತವನ್ನು ಕಾಪಾಡಲು ಡಾ॥ ದೇ. ಜ. ಗೌ. ಅವರೊಂದಿಗೆ ಲೋಕಸೇವಾ ಆಯೋಗದ ಎದುರು ನಿರಶನ ಸತ್ಯಾಗ್ರಹವನ್ನು ಆಚರಿಸಿ ಯಶಸ್ವಿಯೂ ಆದರು. ಕನ್ನಡ ಕ್ರೈಸ್ತರ ಸಮಸ್ಯೆಗಳಾಗಲಿ ಕೃಷ್ಣಾ-ಕಾವೇರಿ–ಜಲಸಮಸ್ಯೆಯಾಗಲೀ, ಕಾರ್ಖಾನೆಗಳಲ್ಲಿರುವ ಕನ್ನಡಿಗರ ಸಮಸ್ಯೆಗಳಾಗಲಿ, ಕರ್ನಾಟಕಕ್ಕೆ ಧಾಳಿಯಿಡುತ್ತಿರುವ ಅನ್ಯಭಾಷೀಯರ ಸಮಸ್ಯೆಯಾಗಲಿ ಅವರು ಅವುಗಳ ಬಗ್ಗೆ ತಲಸ್ಪರ್ಶಿಯಾಗಿ ಬಲ್ಲವರು. ಮತ್ತು ಅಷ್ಟೇ ಅಧಿಕಾರಯುತರಾಗಿ ಮಾತಾಡಬಲ್ಲವರು, ಒಂದರ್ಥದಲ್ಲಿ ಕನ್ನಡದ ಒಂದು ಅರ್ಥಪೂರ್ಣವಾದ ಧ್ವನಿ ಅವರದು.

ಸಿದ್ಧಯ್ಯ ಪುರಾಣಿಕರು ತುಂಬ ಒಳ್ಳೆಯ ವಾಗ್ಮಿಗಳಾಗಿದ್ದರು. ಉರ್ದುವಿನಲ್ಲಾಗಲೀ, ಕನ್ನಡದಲ್ಲಾಗಲೀ, ಅತ್ಯಂತ ಪರಿಣಾಮಕಾರಿಯಾಗಿ ಮಾತಾಡಬಲ್ಲರಾಗಿದ್ದರು. ಅನುಭವ, ವಿದ್ವತ್ತು, ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚಿನವರೆಗೂ ದೊರಕುವ ಅಂಕಿ ಅಂಶಗಳು ವಿವರ, ಖಚಿತವಾದ ವಿವೇಚನಾ ಶಕ್ತಿಗಳಿಂದ ಕೂಡಿದ ಅವರ ವಾಗ್ಮಿತೆಗೆ ಕವಿಹೃದಯದ ಲೇಪವೂ ಸೇರಿ ಪರಿಣಾಮ ರಮಣೀಯತೆ ಹೇಳುತ್ತಿತ್ತು.

ಉರ್ದು ಸಾಹಿತ್ಯದಲ್ಲಿ ಅವರಿಗಿದ್ದ ಪಾಂಡಿತ್ಯ ಅಮೋಘವಾದುದು. ಅತ್ಯಂತ ಹೃದ್ಯವಾಗಿ ಅವರು ಆ ಸಾಹಿತ್ಯವನ್ನು ಪರಿಚಯಿಸಬಲ್ಲವರಾಗಿದ್ದರು.

ನಿವೃತ್ತಿಯ ನಂತರ ಕನ್ನಡದ ಹಿತ ಹಾಗೂ ಸಾಹಿತ್ಯಾಧ್ಯಯನ ಹಾಗೂ ಸೃಷ್ಟಿಗೆ ತಮ್ಮನ್ನು ಪರಿಪೂರ್ಣವಾಗಿ ಅರ್ಪಿಸಿಕೊಂಡಿದ್ದವರು ಸಿದ್ದಯ್ಯನವರು. ಅವರು ಹೈದರಾಬಾದ್, ಕರ್ನಾಟಕ ಪ್ರದೇಶದಲ್ಲಿ ಕಟ್ಟಿ ಬೆಳೆಸಿದ ಕನ್ನಡದ ಸಂಘಟನೆಗಳು ಬಹಳ. ಅವರು ಪದಾಧಿಕಾರಿಗಳಾಗಿದ್ದ ಸಂಸ್ಥೆಗಳ ವಿವರವಾದ ಪಟ್ಟಿಯನ್ನು ಗಮನಿಸಿದರೆ ಅವರ ಕನ್ನಡದ ಹಾಗೂ ಸಾಹಿತ್ಯ ಪರವಾದ ಆಸಕ್ತಿಗಳ ಒಂದು ಮುಖವೇ ಕಾಣುತ್ತದೆ.

ತಮ್ಮ ಎಪ್ಪತ್ತೇಳು ವರ್ಷಗಳ ತುಂಬು ಜೀವನದ ಹಾದಿಯಲ್ಲಿ ಅವರು ಪಡೆದ ಗೌರವ–ಪ್ರಶಸ್ತಿಗಳು ವಿಪುಲವಾಗಿದೆ.

ಹೈದರಾಬಾದ್ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯಿಂದ ಹಿಡಿದು ಗುಲಬರ್ಗಾದಲ್ಲಿ ನಡೆದ 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆವರೆಗೆ ಅವರು ಗೌರವಿಸಲ್ಪಟ್ಟಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ಪದವಿಯನ್ನು ನೀಡಿ ಗೌರವಿಸಿದೆ.

ಬೆಂಗಳೂರಿನ ಆಲಿ ಆಸ್ಕರ್ ರಸ್ತೆಯಲ್ಲಿರುವ ಅವರ ಮನೆ ಸಾಹಿತ್ಯ ಸಲ್ಲಾಪಕ್ಕೆ, ಕನ್ನಡ ಪರವಾದ ಚಿಂತನಕ್ಕೆ ಹಾಗೂ ಸಜ್ಜನಿಕೆಗೆ ಕೇಂದ್ರವೆನ್ನಿಸಿತ್ತು. ತಮ್ಮ ಮಡದಿಯ ತೀವ್ರ ಅಸ್ವಾಸ್ಥ್ಯ, ತಮ್ಮ ಅನಾರೋಗ್ಯದ ಅಡಚಣೆಗಳ ಮಧ್ಯೆಯೂ ತಮ್ಮ ಎಂದಿನ ಅಧ್ಯಯನಶೀಲತೆಯನ್ನು ಬಿಡದ ಸರಸ ಸಜ್ಜನಿಕೆಗೆ ಹೆಸರಾದ ಪುರಾಣಿಕರು 4-9–1994ರ ಮಧ್ಯರಾತ್ರಿಯಿಂದ ಈಗ ಕೇವಲ ಸ್ಮೃತಿಯಾಗಿ ಹೋಗಿದ್ದಾರೆ. ಕನ್ನಡದ ಇಂದಿನ ಸಮಸ್ಯೆಗಳ ಅಗಾಧತೆಯನ್ನು ನೋಡಿ ಗಾಬರಿಗೊಳ್ಳುವಾಗಲೆಲ್ಲ ಅವರು ನಮ್ಮೊಡನಿಲ್ಲದಿರುವ ನೋವು ತೀವ್ರವಾಗುತ್ತದೆ.

(ಕನ್ನಡ ಗಂಗೋತ್ರಿ ಕೃಪೆಯಿಂದ)

Dr. SIDDAIAH PURANIK

# Kannada was his breath

– Prof. G. S. SIDDALINGAIAH

*Dr. Siddaiah Puranik was a great literary figure dedicated to the cause of Kannada language and literature. Himself a popular Vacanakara, his work for encyclopedia and dictionary and other literary publications is quite well known. His contribution as a poet is very significant. To the last he worked as a dedicated solidier for the cause of advancement of Kannada in all spheres of life.*

Dr. Siddaiah puranik had not been enjoying good health recently. He was suffering from slip disc. When one of his friends made enquires about his health he quipped that his regular term of life span had expired and he was enjoying only the grace period. He said that he was mainly depending upon the accessaries to see, hear, walk and munch. Apparently he was commenting on the spectacals and the dentures etc., she was using. In fact his lady who was down from paralystic stroke was sitting quiet, by his side, during that time. His 'spare parts'. I wonder had any refrence to them both!

Tiil the day of his death. Dr. Puranik was deeply interested and involved in literature and the cause of kannada.

He was born on 18-6-1918 in a village, called Dyampura Raichur District. His parents were poor but the rich cultural background of the parents and the family helped this village boy to bloom into a highly talented writer and scholar.

GOAL-VIDYA

As Instance that took place during boyhood days is worth mentioning, One day his class teacher wanted to judge the aptitude of his students, asked them to write down briefly, on their slates, what they actually want to achieve. The teacher went through the answers of all the students. When Puranik's classmates varied in their answers from cash, fruit and food etc. Puranik made his teacher sit up by his answer he wanted VIDYA (knowledge). Probably the seed was already sown for the future literature.

Throughout Sri Puranik was a hard working student. He mastered

Kannada, Sanskrit· Urdu and English languages·

He was a graduate from the Usmania University of Hydrabad and was selected as a probationay Tahasidar of the erstwhile Hydrabad State in 1943 and worked thereafter in savaral capacities of the revenue department. He opted to the services of the State of Karnataka and retired as Transport and Labour Commissioner of the State.

He served the cause of people. Services rendered by him in the capacity of Deputy Commissioner of Coorg and Belgaum Districts were memorable·

His love for Kannada was not accidental. He was aware of the problems of the Kannada speaking people of the then Hyderbad State which was under the rule of the Navab· Urdu was the State language and the Kannada speaking people of Gulbarga. Bidar and Raichur Districts were denied of their just right.

With the guidance and co-operation of the persons like Manavi Narasinga Rao he founded Kannada Sahitya Parishad of Hyderbad area and organised a number of cultural Programmes. Dr· D. R. Bendre, Dr. R. S. Mugali, Dr· V. K· Gokak, Prof· B· M. Srikantaiah, Prof. T N· Srikantaiah, Prof. A· N· Murthy Rao, A. N· Krishana Rao, Prof· V. Sitaramaiah are a few of the literary luminaries who toured those areas and delivered lectures on Kannada literture and calture and inspried them. The then Chief Ministers Sri K· Hanumantaiah and S. Nijalingappa were also tnvited to inspire people of that area· Three annual, parishad conferences were also oganised.

The credit should go to Dr· Puranik· Soon after the unification of Kannada speaking areas, this Parishad was merged with Kannada Sahitya Parishad and the fund of that organisation was donated to to sahitya parishad to organise a series of lectures in the name of Manavi Narasinga Rao.

## DEDICATED WORK

Dr. Siddaiah Puranik never missed any opportunity to serve the cause of Kannada in general and the people of the state in particular. Whether it was starting a scheme of Encyclopedia of Kannada of the Mysore University or the Kannada-Kannada Dictionary of the Kannada Sahitya Parishad he used his good offices. He had his hand in the publication of Kan-

nada books like Vacana's of Sarvajna, collection of Vacanas, Jaimini Bharata, Harishchandra Kavya which were made available to the people of Karnataka at a subsidised rate. It was for this reason that the Government of Karnataka utilised his services, even after his retirement and nominated him as a Member to the committees namely. Border Committee, Sarojini Mahishi Committee the Authority of Kannada and the Kannada - Kannada Dictionary Committee of Kannada Sahitya Parishad.

Dr. Puranik took keen interest in Gokak agitation and later served on that committee also. His interest and the involvement in the welfare of Kannada language and people had endeared him to the people of Karnataka. He was throughly aware of the problems of the Kannada speaking people working in various factories of the State and Central Goverments and was always ready to respond to the needs of those people. He was taking active part in the agitations also.

## EMINENT SPEAKER

Dr. Siddaiah Puranik was one of our eminent orators. Whether it was Kannada, Urdu or English, he would speak with the same eloquence and efficiency.

The preparation he would make before giving any talk made his lectures very important and the facts and figures he would present were authentic. Whether it was the problem of Krishna or Kaveri waters, the plight and challenges of Kannada speaking people of Kolar and Bangalore districts are the problems concerning the medium of instructions he would speak very effectively with upto date facts and figures. And the lectures would be memorable because of the poetic touch the speaker was capable of.

Even though his health was failing he never shirked from the responsibilities and he accepted the presidentship of Vikasa Vedike during later days.

Dr. Siddaiah Puranika was not only know for his love for Kannada. He belongs to the tradition of Administrators like Masti Venkatesha Iyengar, Navaratna Ramarao and H. L. Nagegowda. In addition to the administrative skills they have contributed to literature and culture also. Dr. Puranik's talent as a writer and vacanakara have been praise worthy.

## OCEAN OF VACANAS

Dr. Siddaiah as was stated earlier was fortunate in having a creative atmosphere at home. He nurtured it with wide reading Sharanas and their Vacanas lured his talent and the result was important work called Sharanacharitamrita. This was written for the benefit of adults. It includes biographical notes and the achievements of more than sixty sharanas starting from the 11th century Madara Channaiah to the genius of the modern days. The simplicity and the clarity of expression makes this work vivid to all the people. Abundent information, the book contains, makes this work a small encyclopedia of Sharanas.

Dr. Siddaiah Puranik had published five other biogrophies. The books on Siddarama and Galib are writen for the children. The book on Galib gives a vivid biographical account of the poet, Galib. The book on Allamaprabhu is more concerned with the achievements of Allama than this biography.

Hardekar Manjappa-highlights the achievements of Manjappa who was called the Gandhi of Karnataka.

Basava and his message is another important biography. Dr. Puranik highlights the importance of the message of Basava and its relevance to life. Dr. Siddaiah makes use of all the material available on the controvercial aspects of the life of Basava and tries to establish the greatness of Basava.

## KAVYANANDA

In his pen name is 'Kavyananda' Dr. Puranik has published seven collections of poems. Modalu Manavanagu, Avibhaktam Vibhakteshu and other poems. They are very popular for their thoughts content and lyrical quality. The poem, M o d a l u Manavanagu has been famous for its humanism and singing quality. His expression falls in line with Kuvempu and Sali Ramachandra Rao and are good examples of modern Kannada romantic poetry. Love of life, hope and humanism are the chief sources of the poetic genius.

Dr. Puranik's contribution to children literature is note worthy. His first collection of poems. 'TUPPA ROTTI GE GE GE' brought him the central government award. Ajjana Kolidu Nannaya Kudure and other poems are very popular among children. The three poems which unfold the pictures of

the fruits, dishes and the sweets that are very special to Karnataka are very interesting.

Dr. Puranik had written a historical novel. He had published two collections of short stories also.

His vacanas appear to be special contribution to Kannada literature. He had published three collections of Vacanas. And his signature line is Swatantra Dheera Siddheswara. He has dedicated the first collection of vacanas, vacanodyana, to Totada Siddhalinga which is very significant.

Vacana movement which reached its pinnacle in the 12th century had vanished soon after Basava was made to leave Kalyana. It took four centuries to revive the vacana movement and Totada Siddalinga was the person who revived it with a change.

## VACANAKARA

Actually vacana was not meant to be literary form for the Saranas of 12th century. Their concern for life compelled them to open up a new path which revolutionalized the life of that century. Saranas were a dedicated group of like minded persons who had the fortune of having the leadership of Basava who was a highly talented writer. The concern they had for the people made them choose the language of the people and establish a dialogue to bring in a sea change in life. Rich traditional background of literatures helped them evolve vacana movement which is unique in many respects. Soon after Basava was made to move out of Kalyana. Vacana movement melted into the thin air. It had to wait for Totada Siddhalinga to get revived in the 16th century. Though Siddhaliga wrote vacanas and revived that form. his vacanas lack the social concerns and obligations of the vacanas of 12th century could write vacanas Siddalinga only as a literary form to meet the religious needs of the day. When we think of the vacanas of 20th century, we must be aware of this limitation of the form.

## LYRICAL QUALITY

Dr. Siddaiah is not the first vacanakara of modern Kannada. Kuvempu, D. R. Bendre, S. V. Ranganna, S. V. Parameswara Bhatta and Siddaiah Puranik are a few important names who have contributed significantly to this field.

Vacana form appears to suit to the lyrical talents of Siddaiah. His first collection of Vacanas is full of

flashes of lyrical poetry. Humility and introseption of the poet make these vacanas simple and effective. This collection brought him the national recognition by receiving the Bhilwara award. And this award was instituted by the Bharatiya Bhasha Parishad of Calcutta for the best book of the year in Indian Languages.

His second collection is Vacananandana and is dedicated to Dr. Shivakumara Swamiji of Siddhaganga. What is strange (with this collection) is that most of the Vacanas tend towards set metrical forms, and the poetic quality is very much lacking.

But the third collection. Vacanaarama, appears to be Dr. Siddhaiah's mature work. The memories of Gitanjali and Fruits Gathering appear to be lurking in the mind of the poet. But the outcome is really remarkable.

This collection has been dedicated to Akka, Anna, Allama who are known for their excellence. The introspection and the bliss of contentment of the poet, add to the lyrical qualities of the Vacanas and make them unique among modern Vacanas. It is interesting to note that atleast a few of Vacanas of this collection show the qualities of 12th century Vacanas and make Siddhaiah Puranik a significant Vacanakara of modern Kannada.

## LIVING REFERENCE

Dr. Siddaiah Puranik had been honoured by the Sahitya Academy of the State. He was a recepient of the Rajyothsava award also. He was honoured by the Karnataka University with honourary doctorate in 1974. He was the President of Akhlia Bharatha Kannada Sahitya Sammelan held at Gulbarga.

He was a living reference boo as far as the development of Kannada and the problems of Kannadigas. His eruditions never stopped We have last an abundant graner of information with regard to th subject discussed. Ali Askar Roa in which he was living had almos become a place of pilgrimage t the people who had taken up th cause of Kannada and Kannadiga

# ಕವಿ ಮತ್ತು ದಾರ್ಶನಿಕ ಡಾ|| ಸಿದ್ಧಯ್ಯ ಪುರಾಣಿಕ

ಸಾ. ಶಿ. ಮರುಳಯ್ಯ

ಪ್ರಿಯ ಶ್ರೀ ಮರುಳಯ್ಯನವರಲ್ಲಿ ವಿಜ್ಞಾಪನೆಗಳು. ತಮ್ಮ ಪತ್ರ ತಲುತು. ಬರೆಯಲು ತಡವಾದುಕ್ಕಾಗಿ ಕ್ಷಮೆಯಿರಲಿ.

ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆ. ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ಇಂತಹ ಪ್ರತಿಭಾಶಾಲಿ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೆ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲೂ ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೆ ಉಳಿದಿದೆ. ಅವರ 'ವಚನೋಧ್ಯಾನ'ದ ವಚನಗಳು ನನಗೆ ತುಂಬಾ ಸಂತೋಷವನ್ನು ನೀಡಿವೆ.

ನನ್ನ ಮಿತ್ರರಾದ ಗುಜರಾತಿ ಕವಿ ಶ್ರೀ ಉಮಾಶಂಕರ ಜೊಶಿಯವರು ಭಾರತದ ವಿವಿಧ ಭಾಷೆಗಳಿಂದ ವಚನಗಳನ್ನು ಆಯ್ದುಕೊಂಡು ಗುಜರಾತಿ ಭಾಷೆಗೆ ಅನುವಾದ ಮಾಡಿ ವ್ಯಾಖ್ಯಾನ ಸಹಿತವಾಗಿ ಪ್ರಕಟಿಸಿದರು. ಕನ್ನಡದಿಂದ ಅವರು ಆರಿಸಿದ್ದು ಮಿತ್ರ ಶ್ರೀ ಸಿದ್ಧಯ್ಯ ಪುರಾಣಿಕರ ಕವನ ಎಂದು ತಿಳಿದಾಗ ನಾನು ಹರ್ಷಪುಳಕಿತನಾದೆ !

ಕನ್ನಡನಾಡಿಗೆ ನಾಲ್ಕು ದಶಕಗಳಿಂದಲೂ ಹೆಚ್ಚು ಕಾಲ ಉತ್ತಮ ಸಾಹಿತ್ಯವನ್ನೂ ಸಂಸ್ಕೃತಿಯ ಆದರ್ಶವನ್ನೂ ಶ್ರೀ ಸಿದ್ಧಯ್ಯ ಪುರಾಣಿಕರು ನೀಡಿದ್ದಾರೆ. ಜೊತೆಗೆ ದಕ್ಷ ಆಡಳಿತಗಾರರೆಂದು ಪ್ರಖ್ಯಾತಿಯನ್ನೂ ಪಡೆದಿದ್ದಾರೆ. ಆಡಳಿತದಲ್ಲಿ ದಕ್ಷತೆಯ ಜೊತೆಗೆ ಸ್ವಚ್ಛತೆಯನ್ನೂ ಬೆರೆಸುವುದು ಸಾಧ್ಯ ಎಂಬುದಕ್ಕೆ ಶ್ರೀ ಪುರಾಣಿಕರು ಉತ್ತಮ ನಿದರ್ಶನವಾಗಿದ್ದಾರೆ. ಅವರು ಶುಭ್ರ ಜೀವನವನ್ನು ಅನುಸರಿಸಿದರೆ ನಮ್ಮ ಸಾರ್ವಜನಿಕ ಜೀವನವು ಉನ್ನತ ಮಟ್ಟಕ್ಕೆ ಏರುವುದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀ ಸಿದ್ಧಯ್ಯ ಪುರಾಣಿಕರಿಗೆ ಎಲ್ಲಾ ರೀತಿಯ ಮಂಗಳಗಳೂ ದೊರಕಲಿ ಎಂದು ಹೃತ್ಪೂರ್ವವಾಗಿ ಹಾರೈಸುತ್ತೇನೆ.

ಉದಯರವಿ  
1-5-1981

ವಿಶ್ವಾಸಪೂರ್ವಕವಾಗಿ ನಿಮ್ಮ  
ಕುವೆಂಪು

ಪುರಾಣಿಕ ಸಿದ್ಧಯ್ಯನವರು ಹುಟ್ಟಿದ್ದು 18 ಜೂನ್ 1918ರಲ್ಲಿ, ರಾಯಚೂರು ಜಿಲ್ಲೆಯ ಯಲಬುರಗಿ ತಾಲ್ಲೂಕಿನ ದ್ಯಾಂಪುರ ಎಂಬ ಗ್ರಾಮದಲ್ಲಿ, ತಂದೆ ಶ್ರೀ ಕಲ್ಲಿನಾಥ ಶಾಸ್ತ್ರಿಗಳು, ತಾಯಿ ಶ್ರೀಮತಿ ದಾನಮ್ಮನವರು. ಲಾಗಾಯ್ತಿನಿಂದಲೂ ಹಳ್ಳಿಗಳಲ್ಲಿ ಪುರಾಣ ಪುಣ್ಯ ಕಥೆಗಳನ್ನು ಹೇಳಿಕೊಂಡು ಬರುತ್ತಿದ್ದುದರಿಂದ ಇವರದು 'ಪುರಾಣಿಕರ' ಮನೆತನವೆಂದೇ ಪ್ರಸಿದ್ಧವಾಗಿತ್ತು. ಇವರದು ಸುಂದರ ಸಾರಸ್ವತ ಮನೆತನ. ತಂದೆ ಕಲ್ಲಿನಾಥ ಶಾಸ್ತ್ರಿಗಳು ನಾಟಕಕಾರರು, ತಾತ ಕವಿರತ್ನ ಚಿನ್ನಕವಿಗಳು, ಸೋದರಮಾವ ಕಾಲ ಕಾಲೇಶ್ವರ ಶಾಸ್ತ್ರಿಗಳು ಪ್ರಸಿದ್ಧ ಪುರಾಣಾಗಮ ವೇದ ವೇದಾಂತ ಪಾರಂಗತರು. ಇಂತಹ ಪ್ರತಿಭಾ ಪರಿಸರ ಬಾಲಕ ಸಿದ್ಧಯ್ಯನವರ ಮೇಲೆ ವಿಶೇಷ ಪ್ರಭಾವ ಬೀರಿತು. ಇವರು ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಶಿಕ್ಷಕರು ಎಲ್ಲಾ ಮಕ್ಕಳನ್ನೂ ಕೇಳಿದರಂತೆ 'ನಿಮಗೇನು ಬೇಕು?!' ಎಂದು. ಮಿಕ್ಕ ಮಕ್ಕಳೆಲ್ಲಾ ತಮ ತಮಗೆ ಇಷ್ಟವಾದದ್ದನ್ನು ಬರೆದಿದ್ದರೆ, ಬಾಲಕ ಸಿದ್ಧಯ್ಯ ಬರೆದಿದ್ದರಂತೆ 'ನನಗೆ ವಿದ್ಯೆ ಬೇಕು' ಎಂದು. ಎಳಮೆಯಲ್ಲೇ ತನ್ನ ಜ್ಞಾನ ತೃಷೆಯನ್ನು ಪ್ರಕಟಿಸಿದರು. ಮಗು ಇಂದು ಕರ್ನಾಟಕದ ಮಹಾ ಜ್ಞಾನಿ, ಮೇಧಾವಿ, ಮುತ್ಸದ್ದಿಗಳಲ್ಲಿ ಒಬ್ಬರಾದದ್ದು ಕನ್ನಡದ ಭಾಗ್ಯ ವಿಶೇಷ.

ಸಿದ್ಧಯ್ಯನವರಿಗೆ ಶ್ರೀಮತಿ ಗಿರಿಜಾದೇವಿಯವ ರೊಡನೆ 5-12-43ರಲ್ಲಿ ಮದುವೆಯಾಯಿತು. ಇವರ ಸೇವಾ ಸಾಮರ್ಥ್ಯವನ್ನು ಕರ್ನಾಟಕದ ಬಹುತೇಕ ಜಿಲ್ಲೆಯ ಜನರು ಕಂಡು ಪ್ರಶಂಸಿದ್ದಾರೆ. ಸೇವಾ ಕಾರ್ಯೋನ್ಮುಖರಾಗಿದ್ದಾಗಲೂ ಹಾಗೂ ನಿವೃತ್ತರಾದ ಮೇಲೂ ಅವರು ಎಂದೂ ಸಾಹಿತ್ಯ ಕ್ಷೇತ್ರದ ಸೇವೆಗೆ ಹಿಂಜರಿಯಲಿಲ್ಲ. ಫಲವತ್ತಾಗಿ ಅವರು ಕೃಷಿ ಮಾಡಿ ಕೊಂಡು ಬದಿದ್ದ ಸಾಹಿತ್ಯದಲ್ಲಿ ಅವರದೇ ಆದ ಕವನ ಸಂಕಲನಗಳು. ಆತ್ಮಾರ್ಪಣ, ಭಾರತವೀರ ಮುಂತಾದ ನಾಟಕಗಳು, ಹಲವರ ಜೀವನ ಚರಿತ್ರೆಗಳು, ವಚನೋ ಧ್ಯಾನ, ಆಚಾರ್ಯಕೃತಿ. ಕಾದಂಬರಿಗಳು ಮತ್ತು ಇತ್ತೀಚಿನ "ಮಗಳು ಸಿದ್ಧನ ಕಂತೆ", ಚರಗ ಮೊದಲಾದ ಕೃತಿರತ್ನಗಳು ಹಾಗೂ ವಿಶೇಷವಾಗಿ ಅವರ ಜ್ಞಾನದಂಕಣ ದಿಂದ ಹೊರಬಂದು ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿವೆ.

ಸಿದ್ಧಯ್ಯ ಪುರಾಣಿಕರಿಗೆ ಪ್ರಾಪ್ತವಾದ ಪ್ರಶಸ್ತಿ ಗಳು, ಗೌರವಗಳು ಹಲವು. 29-3-58ರಲ್ಲಿ ಐ.ಎ. ಎಸ್. ಪದವಿ ಪ್ರಾಪ್ತವಾಯಿತು. 1976ರಲ್ಲಿ ಕರ್ನಾ ಟಕ ವಿಶ್ವವಿದಾಲಯವು ಗೌರವ ಡಾಕ್ಟರೇಟ್ ಪದವಿ ಯನ್ನಿತ್ತು ಗೌರವಿಸಿತು. 1978ರಲ್ಲಿ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ 1980ರಲ್ಲಿ ಕಲ್ಕತ್ತೆಯ ಭಾಷಾ ಪರಿಷತ್ತು ನೀಡಿದ ಪ್ರಪ್ರಥಮ 'ಭಿಲ್ವಾರ್ ಪ್ರಶಸ್ತಿ' ಶ್ರೀಯುತರ 'ಕಾವ್ಯೋಧ್ಯಾನ' ಕೃತಿಗೆ ಪ್ರಾಪ್ತವಾಯಿತು. ಅನಂತರ 1981ರಲ್ಲಿ ಮಾಳವಾಡ ಪ್ರಶಸ್ತಿ ಲಭಿಸಿತು. ಡಾ॥ ಸಿದ್ಧಯ್ಯ ಪುರಾಣಿಕರ ಮಿತ್ರರು, ಬಂಧುಗಳು, ಅಭಿಮಾನಿಗಳು ಸೇರಿ 1981ರಲ್ಲಿ "ಕಾವ್ಯಾನಂದ" ಎಂಬ ಸಂಭಾವನಾ ಗ್ರಂಥವನ್ನರ್ಪಿಸಿ, ಅವರನ್ನು ಸನ್ಮಾನಿಸಿದರು. ಹೀಗೆ ಸಾರ್ವಜನಿಕರಿಂದ, ಸರ್ಕಾರ ದಿಂದ ಸಾಕಷ್ಟು ಮನ್ನಣೆ ಪಡೆದ ಡಾ॥ ಸಿದ್ಧಯ್ಯ ಪುರಾಣಿಕರು ತುಂಬು ಜನಪ್ರಿಯ ಕವಿಗಳೂ ಆಗಿದ್ದರು. ಅವರು "ಕಾವ್ಯಾನಂದ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು. ಅವರು ಕಲಿತದ್ದು ಉರ್ದುವಿನಲ್ಲಿ, ಬರೆದದ್ದು ಕನ್ನಡದಲ್ಲಿ. ಕಸುವುಳ್ಳ ಕನ್ನಡ, ಖನಿಬೆರೆತ ಅನುಭಾವ, ಅನುಭವದ ದೀಪ್ತಿನುಡಿ ಹಾಗೂ ಸುಭಶೈಲಿ ಇವು ಕನ್ನಡ ಸಾಹಿತ್ಯದಲ್ಲಿ ಡಾ॥ ಸಿದ್ಧಯ್ಯ ಪುರಾಣಿಕರಿಗೆ ಒಂದು ವಿಶಿಷ್ಟ ಸ್ಥಾನವನ್ನು ಮೀಸಲಿರಿಸಿವೆ.

—— ——

# ಮಾನವ ಪಾರಮ್ಯದ ಕವಿ, ಹೋರಾಟಗಾರ ಸಿದ್ಧಯ್ಯ ಪುರಾಣಿಕ

ಬಸವರಾಜ ಪುರಾಣಿಕ

"ಏನಾದರೂ ಆಗು, ಮೊದಲು ಮಾನವನಾಗು ಎಂದು ಕಾವ್ಯಾನಂದ ಕಾವ್ಯನಾಮದ ಸಿದ್ಧಯ್ಯ ಪುರಾಣಿಕರು ನರನು ಮನುಜನಾಗಲು ಗೆಯ್ಯಬೇಕಾದ ಸಾಧನೆಗೆ ಸಪ್ತಮಂತ್ರಗಳನ್ನು ಆವಿಷ್ಕರಿಸಿದ್ದು ಹೇಗೆ ?

"ಭಾರತ ಕರ್ನಾಟಕ"
ಇದು ನನ್ನ ಸಪ್ತಾಕ್ಷರಿ ಮಂತ್ರವಯ್ಯ;
'ಕನ್ನಡ-ಬಸವ'
ಇದು ನನ್ನ ಷಡಕ್ಷರೀ ಮಂತ್ರವಯ್ಯ;
'ಸತ್ಯ-ಸೌಂದರ್ಯ'
ಇದು ಪಂಚಾಕ್ಷರೀ ಮಂತ್ರವಯ್ಯ;
'ಪ್ರೀತಿ-ನೀತಿ'
ಇದು ನನ್ನ ಚತುರಕ್ಷರಿ ಮಂತ್ರವಯ್ಯ;
'ಜನತೆ'
ಇದು ನನ್ನ ತ್ರ್ಯಕ್ಷರೀ ಮಂತ್ರವಯ್ಯ;
ಇದು ನನ್ನ ದ್ವ್ಯಕ್ಷರೀ ಮಂತ್ರವಯ್ಯ;
'ನೀ'
ಇದು ನನ್ನ ಏಕಾಕ್ಷರೀ ಮಂತ್ರವಯ್ಯ;
'ಸ್ವತಂತ್ರಧೀರ ಸಿದ್ಧೇಶ್ವರಾ'

## ಕನ್ನಡ ಕುಲ

ಭಾರತಮಾತೆಯ ತನುಜಾತೆ ಕರ್ನಾಟಕದ ಸಂಸ್ಕೃತಿಯಲ್ಲಿ ಮಾನವನ ಭವ್ಯತೆ, ದಿವ್ಯತೆ, ಸನಾತನತೆಯನ್ನು ಗ್ರಹಿಸಿಕೊಂಡ ಪುರಾಣಿಕರು ಅದರ ಪೋಷಣೆ, ರಕ್ಷಣೆ ಅದರ ಮಹತಿಯ ಪ್ರಕರಣ. ವಿಸ್ತರಣಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜೀವನದ ಮೌಲ್ಯಗಳು ಕುಸಿಯುತ್ತಲಿದ್ದು ಅವು ರಾಜಕೀಯ ಚದುರಂಗದಾಟದಲ್ಲಿ ಇಂದು ಇನ್ನಷ್ಟು ಕಲುಷಿತಗೊಳ್ಳುತ್ತಿರುವುದನ್ನು ಕಂಡು ಪುರಾಣಿಕರು ಕನಲಿದರೂ ಯಾವುದರಲ್ಲಿಯೂ ದ್ವೇಷ ಬೆರೆಸದೆ ಸ್ನೇಹ ಸಿಂಚನದಿಂದ ನಾಡು ನುಡಿಗಳ ವಿಕಾಸಕ್ಕೆ ಹೋರಾಟ ನಡೆಸಿದರು. ಆರು ದಶಕಗಳ ಅವರ ಈ ಹೋರಾಟ ನಿಜಾಂ ರಾಜ್ಯದಲ್ಲಿ ಆರಂಭಗೊಂಡು ಅವರ ಕೊನೆಯ ಉಸಿರಿನವರೆಗೆ ಧೀರೋದಾತ್ತವಾಗಿ ನಡೆಯಿತು. ಕೊನೆಗಾಲದಲ್ಲಿ ಆರೋಗ್ಯದ ಅಸಹಕಾರವಿದ್ದರೂ ಅವರ ಅಂತರ್ಯದ ಛಲ, ಅಪಾರ ಅನುಭವ, ಯಾವುದೇ ಸಮಸ್ಯೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಕಲೆ, ಸಮಸ್ಯೆಗೆ ತಕ್ಕ ಪರಿಹಾರ ಹುಡುಕುವ ಸಹಜ ಕೌಶಲ–ಈ ಶಕ್ತಿ ಸಂಚಯ ಅವರಿಗೆ ಹೋರಾಟದಲ್ಲಿ ನೆರವು ನೀಡಿದವು. ನಾಡಿನಾದ್ಯಂತ ಅವರು ಹೊಂದಿದ್ದ ಸ್ನೇಹಿತರ ಅಭಿಮಾನಿಗಳ ಕಾಳಜಿ ಕಕ್ಕುಲತೆಗಳು ಅವರಿಗೆ ಬಲ ಕೊಟ್ಟವು. ಕನ್ನಡ ಕುಲದ ಏಳಿಗೆಗಾಗಿ ಅಹರ್ನಿಸಿ ದುಡಿದ ಪುರಾಣಿಕರು ಒಂದು ಅರ್ಥದಲ್ಲಿ "ಕನ್ನಡ ಕುಲ ದೀಕ್ಷಿತರು.

ಹೈಸ್ಕೂಲಿನಲ್ಲಿ ಗಣಿತವನ್ನೋದಿ ಇಂಜಿನಿಯರ್ ಆಗಬೇಕೆಂಬ ಅಭಿಲಾಷೆ ಹೊಂದಿದ್ದ ಪುರಾಣಿಕರಿಗೆ ಒಂದು ಸಲ ಕ್ಲಾಸಿನಲ್ಲಿ ಗಣಿತದ ಶಿಕ್ಷಕರು ಅವರ ಆತ್ಮಗೌರವವನ್ನು ಕೆಣಕಿದರು. ಅದನ್ನು ಸಹಿಸದ ಪುರಾಣಿಕರು ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡರು. ಆದರೆ ಗಣಿತದಲ್ಲಿ ಇದ್ದ ಆಸಕ್ತಿ ಅವರ ಕೃತಿಗಳಲ್ಲಿ ವೈಜ್ಞಾನಿಕತೆಯ ನೆಲೆ ಒದಗಿಸಿತೆನ್ನಬಹುದು. ಕನ್ನಡ ಅಧ್ಯಯನದ ನಂಟನ್ನು ಗಾಢವಾಗಿ ಬೆಳೆಯಿಸಿಕೊಂಡು ಬಿ.ಎ. ಮುಗಿಸಿದಾಗ ಕನ್ನಡ ಪ್ರಾಧ್ಯಾಪನವನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದ ಪುರಾಣಿಕರಿಗೆ ಕನ್ನಡದವರಿಂದಲೇ ಬೆನ್ನಲ್ಲಿ ಇರಿತ. ಎಂ.ಎಗೆ ಬದಲಾಗಿ ಇಂಗ್ಲೀಷನ್ನು ಆರಿಸಿಕೊಳ್ಳುವಷ್ಟು ಅವರ ಮನಸ್ಸು ಘಾಸಿಗೊಂಡಿತ್ತು. ಯೋಗಾಯೋಗದಿಂದ ಕನ್ನಡ ಪ್ರಾಧ್ಯಾಪನಕ್ಕೆ ದಕ್ಕದ ಪುರಾಣಿಕರು ನಿಜಾಂ ಸರ್ಕಾರದಲ್ಲಿ ಅಧಿಕಾರಿಯಾಗಿ ಆಯ್ಕೆಯಾದರು. ಪಾಲಿಗೆ ಬಂದ ವೃತ್ತಿಯನ್ನೇ "ಆಟವಾಡಿದ ಹಾಗೆ ಕಾಯಕವನ್ನಾಗಿ" ಮಾಡಿಕೊಂಡ ಪುರಾಣಿಕರ ಸೃಜನಶೀಲ ವ್ಯಕ್ತಿತ್ವಕ್ಕೆ ಹಲವಾರು ಮುಖಗಳಲ್ಲಿ ಅಭಿವ್ಯಕ್ತಗೊಳ್ಳುವ ಅವಕಾಶ ದೊರೆತವು.

## ವಿಶಿಷ್ಟ ಅನಿಸಿಕೆ

ಪುರಾಣಿಕರಿಗೆ ಸರ್ಕಾರದ ಅಧಿಕಾರವೆಂದರೆ ಶಾಸನ. ಕಾಯ್ದೆ ಕಟ್ಟಳೆಗಳ ಕಾನನದಲ್ಲಿಯ ಶುಷ್ಕವಾದ ಅಲೆದಾಟವಾಗಿರಲಿಲ್ಲ. ಟೀಕೆ ಟಿಪ್ಪಣಿ ಬರೆದು ಒಪ್ಪಿಸುವ ವೃತ್ತಿಯಾಗಿರಲಿಲ್ಲ. ಅದು ಅವರಿಗೆ ಜನತೆಯ ಆಶೋತ್ತರ ಪೂರೈಸುವ ಒಂದು ಮಾಧ್ಯಮವಾಗಿತ್ತು. "ಯಾವುದೇ ಒಂದು ಬೇಡಿಕೆಯು, ಅಹವಾಲಿನ ಪತ್ರವನ್ನು ಅಧಿಕಾರಿ ಕೈಗೆತ್ತಿಕೊಂಡಾಗ ಆತನಿಗೆ ಅದು ಬಿಳಿಯ ಕಾಗದದಲ್ಲಿ ಮೂಡಿದ ಹಲವು ಮಸಿಯ ಸಾಲುಗಳಾಗಿ ತೋರದೆ ಅದರ ಹಿಂದೆ ನಾಡಿನ ಮೂಲೆಯೊಂದರ ಯಾವುದೋ ಗ್ರಾಮಸ್ಥ, ಯಾರೋ ಅಸಹಾಯಕ ವ್ಯಕ್ತಿ ಅಥವಾ ಶೋಷಿತ ಮಹಿಳೆ ನೊಂದ ಹೃದಯದಿಂದ ತನ್ನ ಕತೆ ತೋಡಿಕೊಂಡಂತೆ ಭಾಸವಾಗಬೇಕು. ಅಂಥ ಗ್ರಹಿಸುವ ಮನೋಭಾವ ಅಧಿಕಾರಿಗೆ ಇರಬೇಕು. ಅಂದಾಗ ಮಾತ್ರ ಜನಪರ ಯೋಜನೆಗಳು ನಿಜ ಅರ್ಥದಲ್ಲಿ ಫಲ ನೀಡುತ್ತವೆ" ಎಂದು ಪುರಾಣಿಕರು ಆಡಳಿತದೊಂದಿಗೆ ಪದೇ ಪದೇ ಹೇಳುತ್ತಿದ್ದರು. 'ಇಮ್ಯಾಜಿನೇಶನ್' ಇರಬೇಕೆಂದು ಪುರಾಣಿಕರು ಹೇಳುತ್ತಿದ್ದರು. ಆಗ ಮಾತ್ರ ಕಾಯ್ದೆ ಕಾನೂನಿನ ಚೌಕಟ್ಟಿನಲ್ಲಿಯೇ ಯೋಜಿಸಬಹುದಾದ ಪ್ರಗತಿಪರ, ವಿಧಾಯಕ ಕಾರ್ಯಕ್ರಮಗಳು ಜನತೆಯನ್ನು ತಲುಪಲು ಸಾಧ್ಯವೆಂದು ಪುರಾಣಿಕರ ಅಧಿಕಾರದ ದಿನಗಳು ತೋರಿಸಿಕೊಟ್ಟವು.

ಪುರಾಣಿಕರ ಅಧಿಕಾರಾವಧಿಯಲ್ಲಿ ಬೆಳಗಾವಿಯ ಡೆಪ್ಯುಟಿ ಕಮೀಷನರ್‌ರಾಗಿ ಅವರು ಸಲ್ಲಿಸಿದ ಸೇವೆ ಮಹತ್ವದ್ದು. ಎರಡು ವರ್ಷದ ಸೇವೆಯಲ್ಲಿ ಸದಾ ಕನ್ನಡ–ಮರಾಠಿ ಭಾಷಾ ಗೊಂದಲ, ಗಡಿ–ಜಗಳ, ರಾಜಕೀಯ ಸಂಕೀರ್ಣತೆಗಳನ್ನೊಳಗೊಂಡ ಕಿಡಿ ಬಿದ್ದರೆ ಸಿಡಿದೇಳುವ 'ಜ್ವಾಲಾಮುಖಿ'ಯಂತಿರುವ ಈ ಜಿಲ್ಲೆಯಲ್ಲಿ ಪುರಾಣಿಕರು ಆಟವಾಡಿದಂತೆ ಎಲ್ಲ ಸಮಸ್ಯೆಗಳನ್ನು ಪರಿಹರಿಸಿದ ರೀತಿ, ಜಾಣ್ಮೆ ಇಂದಿಗೂ ಅಲ್ಲಿಯ ಜನ ಮರೆತಿಲ್ಲ. ಪುರಾಣಿಕರು ಅಧಿಕಾರ ವಹಿಸಿಕೊಂಡ ಕೆಲ ದಿನಗಳಲ್ಲಿಯೇ ಒಂದು ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಯನ್ನು ಗಮನಿಸಿದರು. ಮಹಾಜನ ವರದಿ ಜಾರಿಗೆ ಬಂದರೆ ಮಹಾ ರಾಷ್ಟ್ರಕ್ಕೆ ವರ್ಗವಾಗುತ್ತಿದ್ದ ಗಡಿ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ನಡೆದಿರಲಿಲ್ಲ. ಇಂದಿಲ್ಲ ನಾಳೆ ಪರ ರಾಜ್ಯಕ್ಕೆ ಹೋಗಲಿರುವ ಈ ಭಾಗದಲ್ಲೇಕೆ ಕರ್ನಾಟಕದ ಹಣ ಪೋಲು ಮಾಡುವುದು ? ಎಂಬ ಲೆಕ್ಕಾಚಾರವೇ ಒಂದು ಬಗೆಯ ಆಡಳಿತದ "ಶಿಷ್ಟಾಚಾರ"ವಾಗಿತ್ತು. ಪುರಾಣಿಕರು ಆ ಶಿಷ್ಟಾಚಾರವನ್ನು ಮುರಿದು ಅಷ್ಟು ದಿನಗಳವರೆಗೆ ಆಡಳಿತದ ಅವಜ್ಞೆಗೆ ಬಲಿಯಾಗಿದ್ದ ಆ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಭರಾಟೆಯಿಂದ ಆರಂಭಿಸಿದರು. ಎಲ್ಲರಿಗೂ ಆಶ್ಚರ್ಯವೇ. ಕನ್ನಡದ ಹಣ ನಾಳೆ ಮಹಾರಾಷ್ಟ್ರಕ್ಕೆ ಹೋಗಲಿರುವ ಪ್ರದೇಶದಲ್ಲೇಕೆ ಪೋಲಾಗಬೇಕು ? ಅದನ್ನೇ ಇತರ ಭಾಗಗಳಲ್ಲಿ ತೊಡಗಿಸಬಾರದೇಕೆ ?–ಹಲವಾರು ಸಂಘ-ಸಂಸ್ಥೆಗಳು ರಾಜಕೀಯ ವ್ಯಕ್ತಿಗಳ ತಕರಾರು. ಇದಕ್ಕೆ ಪುರಾಣಿಕರು ಕೊಟ್ಟ ಉತ್ತರ ಕಾವ್ಯಮಯವಾಗಿರುವಂತೆ ಆಡಳಿತಕ್ಕೆ ಹೊಸದು. "ಯಾವ ದಿನ ನಮ್ಮ ಮನೆಯಲ್ಲಿ ಹೆಣ್ಣು ಮಗು ಜನಿಸುತ್ತದೆಯೋ ಅಂದೇ ನಮಗೆ ಗೊತ್ತು ಆಕೆ ಒಂದಿಲ್ಲ ಒಂದು ದಿನ ಪರರ ಮನೆಗೆ ಸೇರುವ ಸೊತ್ತು. ಅದು ತಿಳಿದಿದ್ದರೂ ಆಕೆಯನ್ನು ಅಕ್ಕರತೆಯಿಂದ ಜತನದಿಂದ ಪೋಷಿಸಿ, ರಕ್ಷಿಸಿ, ಬೆಳೆಯಿಸಿ ಒಂದು ದಿನ ಆಕೆಯ ಮನೆಗೆ ಮನದುಂಬಿ ಕಳಿಸಿಕೊಡುತ್ತೇವೆ ಜಿಲ್ಲೆಯ ಈ ಭಾಗ ಮಹಾಜನ ವರದಿಯ ಅನಷ್ಟಾನದಿಂದ ಹೋಗುವುದು. ಭಾರತದ ಇನ್ನೊಂದು ಪ್ರಾಂತಕ್ಕೆ ವಿನಃ ಯಾವುದೋ ಪರದೇಶಕ್ಕಲ್ಲ. ಈ ಪ್ರದೇಶ ನಮ್ಮ ಮನೆಯ ಮಗಳಿದ್ದಂತೆ. ಆಕೆಯ ಪೋಷಣೆ ಸಂತೋಷಕರ ಹೊಣೆ", ಈ ಉತ್ತರ ಮಿಂಚಿನಂತೆ ತಕರಾರಿನವರ ಕಣ್ಣು ತೆರೆಯಿಸಿತು. ಇಂಥ ಸಮಭಾವದ ಸಮತಾವಾದದ ಆಡಳಿತ ನೀಡಿದ್ದರಿಂದಲೇ ಬೆಳಗಾವಿಯಿಂದ ಪುರಾಣಿಕರು ಬೆಂಗಳೂರಿಗೆ ವರ್ಗವಾದಾಗ ಎಲ್ಲ ಭಾಷೆಯ ಜನರು ಎಲ್ಲ ಪಕ್ಷದ ಜನರು ವರ್ಗಾವಣೆಯ ರದ್ದತಿಗೆ ಆಗ್ರಹಿಸಿದರು. ಆಶ್ಚರ್ಯದ ಮಾತೆಂದರೆ ಮರಾಠಿಗರೇ ಅಧಿಕ ಸಂಖ್ಯೆಯಲ್ಲಿರುವ ಬೆಳಗಾವಿ ಮುನ್ಸಿಪಾಲಿಟಿ ಪುರಾಣಿಕರ ವರ್ಗಾವಣೆಯ ರದ್ದತಿಗಾಗಿ ಸರ್ವಾನುಮತದ ನಿರ್ಣಯ ಕೈಗೊಂಡು ಬೆಂಗಳೂರಿಗೆ ಧಾವಿಸುವುದನ್ನು ಸ್ವಯಂ ಪುರಾಣಿಕರೇ ತಡೆಹಿಡಿಯಬೇಕಾಯಿತು. ಇದು ಅಚ್ಚ ಕನ್ನಡದ ಹೋರಾಟಗಾರ ಪುರಾಣಿಕರಿಗೆ ಸಂದ ಗೌರವ.

# ಅಪೂರ್ವ ಕಾವ್ಯ ಪ್ರತಿಭೆ

ಪುರಾಣಿಕರ ಚೇತನದ ಅಂತಃಸತ್ವ ಅವರ ಕಾವ್ಯ ಪ್ರತಿಭೆ. ಅದು ಒಂದು ದೃಷ್ಟಿಯಿಂದ ಅವರಿಗೆ ವಂಶದ ಬಳುವಳಿಯಾಗಿ ಬಂದಂತಿತ್ತು. ಅವರ ತಂದೆ ಕಲ್ಲಿನಾಥ ಶಾಸ್ತ್ರಿ, ಅಜ್ಜ ಚೆನ್ನಕವಿಶಿವ ಕವಿಗಳೆಂದು ನಾಮಾಂಕಿತರು. ಬಾಲ್ಯದಲ್ಲಿಯೇ ಆ ಪ್ರತಿಭೆ ಕೌಟುಂಬಿಕ ಪರಿಸರದಲ್ಲಿ ನಡೆಯುತ್ತಿದ್ದ ಕಾವ್ಯ ಕಲಾಪ, ಪುರಾಣ ರಚನೆ, ಅನುಭವ ಚರ್ಚೆಗಳಿಂದ ಉದ್ದೀಪನಗೊಂಡಿತು. ಪುರಾಣಿಕರಿಗೆ ಗೊತ್ತಿಲ್ಲದಂತೆ ಕಾವ್ಯಶಕ್ತಿ ಅಭಿವ್ಯಕ್ತಗೊಳ್ಳತೊಡಗಿತು.

ಕೆಲಕಾಲ ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಕರ್ನಾಟಕ ಗಾಂಧಿ ಎಂದು ಹೆಸರಾಗಿದ್ದ ಹರ್ಡೇಕರ ಮಂಜಪ್ಪನವರ ಆಶ್ರಯದಲ್ಲಿ ಸಿದ್ಧಯ್ಯನವರು ಇರಬೇಕಾಯಿತು. ಮಂಜಪ್ಪನವರ ವ್ಯಕ್ತಿತ್ವದಿಂದ ಪ್ರಭಾವಿತರಾದ ಪುರಾಣಿಕರ ಸೃಜನಶಕ್ತಿ ಹಲವಾರು ಮುಖಗಳಲ್ಲಿ ಸ್ಫುರಿಸತೊಡಗಿತು.

ಅವರ ಮೊದಲ ಕಾವ್ಯ ಸಂಕಲನ 'ಜಲಪಾತ'ದಲ್ಲಿಯೇ ವರಕವಿ ಬೇಂದ್ರೆಯವರು ಕಾವ್ಯಾನಂದರ ಕಾವ್ಯದಲ್ಲಿ ಭಾವನೆಯು ವಾಯುಗುಣವಿದೆ. ಎಂದು ಗುರುತಿಸಿದರು.

ಕಾವ್ಯಾನಂದರ ಯೌವನದ ಕಾವ್ಯ ಜಲಪಾತವಾಗಿ ಭೋರ್ಗರೆದು ಧುಮುಕ್ಕಿ ದರೆ, ಸಮಬುದ್ಧಿಯ ಮಧ್ಯಮ ಪ್ರಾಯಕ್ಕೆ ಅದು 'ತರುಣಾ ಶ್ರಾವಣ'ವಾಗಿ ಸುರಿಯಿತು. ಕವಿಯ ಭಾವನೆ, ವಿಜ್ಞಾನಿಯ ಬುದ್ಧಿಯೊಂದಿಗೆ ತತ್ವಜ್ಞಾನದ ಮನ ಸಂಗಮವಾಗುತ್ತಿದ್ದಂತೆ, ಅವರ ಕಾವ್ಯ 'ಮಾನಸ ಸರೋವರ'ದಲ್ಲಿ ತಂಗಿತು. ಅಲ್ಲಿಂದ ಸೆಲೆಯಿಟ್ಟು ಜರಿಯಾಗಿ, ದರಿಯಾಗಿ, ನದಿಯಾಗಿ ಹರಿದಾಗ ಇಕ್ಕೆಲದಲ್ಲಿ ವಚನೋಧ್ಯಾನ ನಳನಳಿಸಿತು. ವಚನನಂದನ ಕಂಗೊಳಿಸಿತು. ವಚನರಾಮಾಯಣ ಜೊತೆಯಾಯಿತು. ಅಲ್ಲಲ್ಲಿ ಹಾಲ್ದೆನೆ ಮೂಡಿದಾಗ ಬೆಳಗ ಚೆಲ್ಲಲು ಎಲ್ಲರೂ ಸೇರಿದರು.

ಕವಿಯ ಬಾಳಿನಲ್ಲಿ ಮರಳು ಕಡಿಮೆಯಾಗಿ ಅರಳು ಹೆಚ್ಚುತ್ತಿದ್ದಂತೆ, ಅರೆಮರಳುತನದ ಈ ಜಗದ ಸಂದಿಗ್ಧತೆ, ಸಂಕೀರ್ಣತೆ, ಅಸಂಬದ್ಧತೆ, ಸನಾತನತೆ, ಮಾನವೀಯತೆಗಳ ತೀಕ್ಷ್ಣ ಒಳನೋಟ ಕಾವ್ಯಾನಂದರ ಕಾವ್ಯದಲ್ಲಿ ಇನ್ನೊಂದು ಪ್ರಕಾರವನ್ನು ಪ್ರಕಟಗೊಳಿಸಿತು. ಉಮರ ಖಯ್ಯಾಮನ ರುಬಯ್ಯಾಗಳ ಮಾದರಿಯಲ್ಲಿ ಕವಿತೆಗಳನ್ನೊಳಗೊಂಡ ಮರಳಸಿದ್ಧನಕಂತೆ ಹೊರಬಂದಿತು. ಪುರಾಣಿಕರೇ ಹೇಳುವಂತೆ ಮರಳಸಿದ್ಧ ಡಿವಿಜಿಯವರ ಮಂಕುತಿಮ್ಮನಿಗೆ ಒಬ್ಬ ತಮ್ಮ, ಪ್ರತಿಸ್ಪರ್ಧಿಯಲ್ಲ. ಮರಳಸಿದ್ಧನಕಂತೆ ಈ ಬದುಕನು ಬಾಳನ್ನಾಗಿ ಮಾಡಿಕೊಳ್ಳಬೇಕೆಂಬುವ ಆಸಕ್ತರಿಗೆ ಭವರೋಗವೈದ್ಯನಂತಿದೆ.

ತಮ್ಮ ಕಾವ್ಯೋದ್ಯೋಗದಲ್ಲಿ ನಿರತರಾದ ಪುರಾಣಿಕರು ಮಗುವನ್ನು ಮರೆಯಲಿಲ್ಲ. "My name is TODAY" ಎಂದು ಒಕೊರಲಿನಿಂದ ಕೂಗುತ್ತಿರುವ ಮಗು ಪುರಾಣಿಕರ ಕಾವ್ಯ ವಾತ್ಸಲಕ್ಕೆ ಗುರಿಮೂಡಿಸಿತು. ಮಗುವಿನ ಬೆರಗುಗಣ್ಣಿಗೆ, ಬೆರಗು ಮನಸ್ಸಿಗೆ ಅಂಟಿಕೊಂಡು ಚಿರಕಾಲ ನೆನಪಿನಲ್ಲಿ ಉಳಿಯುವ ಉತ್ಕೃಷ್ಟ ಶಿಶು ಸಾಹಿತ್ಯ ಪುರಾಣಿಕರು ರಚಿಸಿದರು.

ಕಾವ್ಯಾನಂದರ ಕಾವ್ಯಕ್ಕೆ ಒಂದು ಅಪರೂಪದ ಮನ್ನಣೆ ದೊರೆತಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತರೂ ಶ್ರೇಷ್ಠ ಗುಜರಾತಿ ಕವಿಗಳೂ ಆದ ಶ್ರೀ ಉಮಾಶಂಕರ ಜೋಶಿಯವರು ಭಾರತೀಯ ವಿವಿಧ ಭಾಷೆಗಳಿಂದ ಕವನಗಳನ್ನು ಆಯ್ದುಕೊಂಡು ಗುಜರಾತಿ ಭಾಷೆಗೆ ಅನುವಾದ ಮಾಡಿ ವ್ಯಾಖ್ಯಾನ ಸಹಿತವಾಗಿ ಕಾವ್ಯಾಯನ ಎಂಬ ಶ್ರೇಷ್ಟ ಸಾಹಿತ್ಯ ಕೃತಿಯಲ್ಲಿ ಪ್ರಕಟಿಸಿದರು. ಅವರ ಆಯ್ಕೆಯಲ್ಲಿ ಕನ್ನಡದ ಏಕೈಕ ಪ್ರತಿನಿಧಿಯಗಿ ಕಾವ್ಯಾನಂದರ "ನಾನಾರು" ಎಂಬ ಕವಿತೆ ಪ್ರವೇಶಿಸಿದೆ. ಜೋಶಿಯವರು ಆ ಕವಿತೆಯನ್ನು ವಿನೂತನ ದೃಷ್ಟಿಯಿಂದ ವಿಮರ್ಶಿಸಿ ರಸಗ್ರಹಣ ಮಾಡಿದ್ದಾರೆ. ಇದು ಪುರಾಣಿಕ ಕಾವ್ಯಕ್ಕೆ ಸಂದ. ಕನ್ನಡಕೆ ಸಂದ ಅಪರೂಪದ ಉಚ್ಚ ಮನ್ನಣೆ ಆಗಿರುವದು.

ಕೆಲ ಕಾಲ ಪುರಾಣಿಕರು ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ಲೋಕವಾಣಿ ದೈನಿಕದಲ್ಲಿ

ಅವರು ಬರೆದ ಸಂಪಾದಕೀಯಂಗಳು ಅವರ ಸಮಂಜೋ ರಾಜಕೀಯ ಒಲವು ನಿಲವುಗಳಿಗೆ ಕನ್ನಡಿ ಹಿಡಿದಿವೆ.

ಪುರಾಣಿಕರು ಉಜ್ವಲ ವಾಗ್ಮಿಯಾಗಿದ್ದರು. ನ್ನಡ ಇಂಗ್ಲೀಷ್ ಹಾಗೂ ಉರ್ದು ಭಾಷೆಗಳಲ್ಲಿ ಅವರು ಖಾಗ್ದರಿ ಲೀಲಾಜಾಲವಾಗಿ ಶ್ರೋತೃಗಳ ಅಂತರಂಗ ಎನ್ನು ತುಂಬುತ್ತಿತ್ತು. ಶ್ರೋತೃ ಹಳ್ಳಿಗನಿರಲಿ ಅವಾತ್ ಗಾರ್ದೆ (avant grade); ರಸಜ್ಞನಿರಲಿ ಅವರವರ ಧಿಜ್ಞಾಪಾತಾಳಿಗಳಿಗೆ ಅನುಗುಣವಾಗಿ ಅನುರೂಪವಾಗಿ ಪುಣಿಕರು ನೀಡುತ್ತಿದ್ದ ವ್ಯಾಖ್ಯಾನ ರಸಾಯನ. ಅಬ್ದುಲ್ ಗಫೂರ್ ಖಾನ್ ಕರ್ನಾಟಕವನ್ನು ಸಂಚರಿಸಿ ದಾಗ ಅವರ ಉರ್ದು ಭಾಷಣವನ್ನು ಪುರಾಣಿಕರ ಎಕ್ಸ್‌ಟೆಂಪರ್ ಆಗಿ ಕನ್ನಡದಲ್ಲಿ ಅನುವಾದಿಸಿ ಸಶಕ್ತ ವಾಗಿ ನಿರೂಪಿಸಿದ್ದು ಅವರ ಭಾಷಾ ಪ್ರೌಢಿಮೆ ಹಾಗೂ ವಾಗ್ ಪ್ರೌಢಿಮೆಯ ದ್ಯೋತಕವಾಗುತ್ತಿತ್ತು.

ಪುರಾಣಿಕರು ತಮ್ಮ ಬಾಳಿನ ಸಂಗಪ್ರಸಂಗಗಳು ಸ್ನೇಹ ಸುಗಂಧವನ್ನೇ ಬೀರಿದರು; ತಮ್ಮ ಮಾತನ್ನು ಕೇಳಿವರ. ಓದಿದವರ ಭಾವ ಬುದ್ಧಿ ಮನಗಳಿತು ಪುಷ್ಟಿವರ್ಧನೆಯನ್ನು ನೀಡಿದರು. ಕೊನೆಗೆ ಕಾಲ ಬಂದಾಗ ಪೂರ್ಣವಾಗಿದ ಹಣ್ಣು ತುಂಬನ್ನು ಕಳಚು ಇಹದಿಂದ ಕಳಚಿ ಮುಕ್ತರಾಗಿ ತೆರಳಿದರು.

---

ಶರಣ ನಿದ್ದೆಗೈದಡೆ ಜಪ ಕಾಣಿರಣ್ಣಾ
ಶರಣ ಎದ್ದಿದ್ದರೆ ಶಿವರಾತ್ರಿ ಕಾಣಿರಣ್ಣಾ
ಶರಣ ನೋಡಿದರೆ ಪಾಪಕ್ಷಯ ಕಾಣಿರಣ್ಣಾ
ಶರಣ ನುಡಿದರೆ ಶಿವತತ್ವ ಶಿವಮಂತ್ರ ಕಾಣಿರಣ್ಣಾ
ಶರಣನ ಕಾಯವೆ ಕೈಲಾಸ ಕಾಣಿರಣ್ಣಾ
ಶಿವಶರಣನಿರ್ದ ಠಾವೇ ಅವಿಮುಕ್ತ ಕ್ಷೇತ್ರ

ಬೇಡಲು ಕನ್ನಡ ದಾಸಯ್ಯ ಬಂದಿಹ
ನೀಡಿರಮ್ಮಾ ! ತಡ ಮಾಡದಲೇ

..............................

ಅನ್ಯ ಭಾಷೆಗಳಂತೆ ಕನ್ನಡ ಭಾಷೆಗೆ
ಉನ್ನತಿಕೆಯ ತರಬೇಕೆಂದು
ಹೊನ್ನ ಕೂಡಿಸಲಿಕ್ಕೆ ಬಂದಿಹನಾತನು
ಮನ್ನಿಸಿ ಹಣವನ್ನು ಕೊಡಿರಮ್ಮ

..............................

ಚಿನ್ನದ ಕಡಗದ ಕೈಕಾಣನಿತ್ತಿತು
ರನ್ನದುಂಗುರದ ಕೈ ಇಲ್ಲೆಂದಿತು
ಹೊನ್ನ ಮಂಕಿಯ ಕೈ ಸುಮ್ಮನೆ ಕುಳಿತಿತು
ಇನ್ನೊಂದು ಬಳಗೈ ಹಣ ಕೊಟ್ಟಿತು

-ಶಾಂತಕವಿ
(ಚಿಂತನ ಗ್ರಂಥ ಕೃಪೆಯಿಂದ)

ಸೊಕ್ಕಿನಲ್ಲಿ ತಲೆಯೆತ್ತಿ ಜೊತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ !
ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆ ಬಿದ್ದು,
ಯಾವ ಮಂಕೋ ಕವಿದು ಹುದುಗಿರುವೆವಲ್ಲ ?
ರೊಕ್ಕ ಕೈಯೊಳಗಿಲ್ಲ, ಹುರುಡು ಮೈಯೊಳಗಿಲ್ಲ,
ಹೆಮ್ಮೆಯೊಂದನು ನೆಚ್ಚಿ ದೆಸೆಗೆಟ್ಟೆವಲ್ಲ !
ಅಕ್ಕತಂಗಿಯರೆಲ್ಲ ಮುಂದು ಮುಂದಾಗಿರಲು
ನಮ್ಮ ತಾಯೊಬ್ಬಳೇ ಸೊರಗಿರುವಳಲ್ಲ !
ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೆ ?
ಹಿರಿಯ ಹೆಸರನು ತಿರುಗಿ ಗಳಿಸಿಕೊಳ್ಳುವೆವೆ ?
ಸರಿಯವರ ತಲೆಮೆಟ್ಟಿ ಮುಂದೆ ನಿಲ್ಲುವೆವೆ ?
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೆ ?

-ತೀ. ನಂ. ಶ್ರೀಕಂಠಯ್ಯ
(ಎಚ್.ಎಂ.ಟಿ.ಯ ಸಾಹಿತ್ಯ ಗ್ರಂಥದಿಂದ)

# ಸಾಹಿತ್ಯದ ಮೂಲ ಪ್ರೇರಣೆ

ಡಾ|| ಜಿ. ಎಸ್. ಶಿವರುದ್ರಪ್ಪ

ಮನುಷ್ಯರಾದ ನಮಗೆ, ನಮ್ಮಲ್ಲಿ ಸಂಚಯನಗೊಳ್ಳುವ ಅನುಭವಗಳನ್ನು ಬೇರೆಯವರೆದುರು ತೋಡಿಕೊಳ್ಳುವುದರಲ್ಲಿ ಒಂದು ಬಗೆಯ ಸುಖವಿದೆ. ಈ ಸುಖಕ್ಕೆ ನಮ್ಮೊಳಗಿನ ಅನುಭವಗಳ ಒತ್ತಡದ ವೇದನೆಗೆ ಒದಗುವ ಬಿಡುಗಡೆ ಒಂದು ಕಾರಣವಾದರೆ, ಅದನ್ನ ಹತ್ತು ಜನದ ಜತೆಗೆ ಹಂಚಿಕೊಳ್ಳುವುದರಿಂದ ಬರುವ ಸಮಾಧಾನ ಇನ್ನೊಂದು ಕಾರಣವಿರಬಹುದು. ಹೀಗೆ ತನ್ನಲ್ಲಿನ ಅನುಭವಗಳನ್ನು ಸಮುಚಿತವಾದ ಭಾಷಾ ಮಾಧ್ಯಮದ ಮೂಲಕ ಪರಿಣಾಮಕಾರಿಯಾಗಿ ಬಿಡುಗಡೆ ಮಾಡಿಕೊಳ್ಳುವ ಕಲೆಗಾರಿಕೆಯನ್ನು ಸಾಹಿತ್ಯ ಎಂದು ಕರೆಯಬಹುದು.

ಅನುಭವಗಳನ್ನು ಬಹುಶಃ ಯಾರೂ ಹುಡುಕಿಕೊಂಡು ಹೋಗುವುದಿಲ್ಲ. ಲೋಕಕ್ಕೂ ನಮಗೂ ಒದಗುವ ನಿರಂತರ ಸಂಪರ್ಕ ಹಾಗೂ ಸಂಘರ್ಷಗಳ ಪರಿಣಾಮ ಗಳೇ ಅನುಭವಗಳಾಗಿ ಲಭಿಸುತ್ತವೆ. ಆದರೆ ಹೀಗೆ ನಮ್ಮಲ್ಲಿ ಬಂದು ಒದಗುವ ಎಷ್ಟೋ ಅನುಭವಗಳು, ನಮ್ಮ ಕ್ರಿಯೆ–ಪ್ರತಿಕ್ರಿಯೆಗಳ ಮೂಲಕ ಅಭಿವ್ಯಕ್ತವಾದರೆ, ಇನ್ನೆಷ್ಟೋ ನಮ್ಮ ಅಂತರಂಗದ ತಳಾತಲದಲ್ಲಿ ಮುಳುಗಿ ಹೋಗುತ್ತವೆ. ಆದರೆ ಯಾರು ತನ್ನಲ್ಲಿ ಸಂಚಯುಗೊಂಡ ಅನುಭವಗಳನ್ನು ಒಂದು ವ್ಯವಸ್ಥೆಗೆ ತಂದು, ಉಚಿತವಾದ ರೀತಿಯಲ್ಲಿ ಅಭಿವ್ಯಕ್ತಪಡಿಸುವ ಕುಶಲತೆಯನ್ನು ಸಾಧಿಸಿಕೊಳ್ಳುತ್ತಾನೆಯೋ ಅಂಥವನನ್ನು ಕವಿ, ಕಲೆಗಾರ ಎಂದು ಕರೆಯಬಹುದು. ಕಾವ್ಯ ಅಥವಾ ಕಲೆ ಎಂದರೆ, ತೀವ್ರವಾದ ಅನುಭವಗಳನ್ನು ಒಂದು ವ್ಯವಸ್ಥೆಗೆ ಒಳಪಡಿಸಿ. ರಮಣೀಯ್ಯವಾದ ಒಂದು ಆಕಾರವನ್ನು ಕೊಡುವ ಸಾಮರ್ಥ್ಯದ ಪರಿಣಾಮ ಎಂದಂತಾಯಿತು. ಯಾಕೆಂದರೆ ಮೂಲತಃ ನಮ್ಮಲ್ಲಿ ಸಂಚಯನಗೊಳ್ಳುವ ಅನುಭವಗಳಿಗೆ ಒಂದು ವ್ಯವಸ್ಥೆ ಇರುವುದಿಲ್ಲ. ಒಂದರ ಹಿಂದೊಂದು ಒಂದರ ಮೇಲೊಂದು ಬಂದು ಮನಸ್ಸಿನ ಉಗ್ರಾಣದಲ್ಲಿ ಜಮಾಯಿಸುವ ಅನುಭವಗಳು, ಅಸ್ತವ್ಯಸ್ತವೂ, ಅಖಚಿತವೂ ಆದ ಸಮೂಹ ಸ್ಥಿತಿಯಲ್ಲಿರುತ್ತವೆ. ಅವುಗಳಲ್ಲಿ ಯಾವುದನ್ನು ತಾನು ಅಭಿವ್ಯಕ್ತಿಗೆ ಅಳವಡಿಸಬಹುದು, ಯಾವುದು ಅಭಿವ್ಯಕ್ತಿಗೆ ಯೋಗ್ಯವಲ್ಲ ಎಂಬ ಮೂಲಭೂತ ವಿವೇಚನೆಗೆ ಅಥವಾ ಆಯ್ಕೆಗೆ ಒಳಪಡಿಸುವುದೇ ಕಲೆಗಾರನ ವೈಶಿಷ್ಟ್ಯವಾಗಿದೆ. ಅನಂತರ ಅಭಿವ್ಯಕ್ತಿಗೆ ತಕ್ಕ ಅನುಭವಗಳಿಗೆ ಒಂದು ಆಕಾರ ಕೊಡುವ ಕಸುಬಿನಲ್ಲಿ ಕವಿ, ಕಲಾವಿದ ತೊಡಗುತ್ತಾನೆ. ಆದರೆ ಹೀಗೆ ಅನುಭವಕ್ಕೆ ಆಕಾರ ಕೊಡುವಾಗ, ಬಂದಂಥ ಅನುಭವಗಳನ್ನು ಯಥಾವತ್ತಾಗಿ ಬಿಡುಗಡೆ ಮಾಡುವ ಒಂದು ಮಾಧ್ಯಮವಾಗುವುದಿಲ್ಲ ಕವಿ; ಅದರ ಬದಲು ಅನುಭವಗಳನ್ನು ಪುನರನುಭವಿಸುವ ಅತ್ಯಂತ ಮುಖ್ಯವಾದ ಒಂದು ಕಾರ್ಯ ನಡೆಯುತ್ತದೆ ಅವನ ಮನಸ್ಸಿನಲ್ಲಿ. ಇದನ್ನೆ ಸೃಜನ ಪ್ರಕ್ರಿಯೆ ಎಂದು ಕರೆಯಬಹುದು. ಈ ದೃಷ್ಟಿಯಿಂದ ಸಾಹಿತ್ಯದ ಮೂಲ ದ್ರವ್ಯ ಅನುಭವಗಳೇ ಆದರೂ ಸಾಹಿತ್ಯಾಭಿವ್ಯಕ್ತಿ ಎನ್ನುವುದು ಕೇವಲ ಅನುಭವಗಳ ಅಭಿವ್ಯಕ್ತಿ ಅಲ್ಲ. ಇದು ಅನುಭವಗಳ ಪುನರನುಭವಿಗಳ ಪರಿಣಾಮ. ಹೀಗೆ ಲೋಕಾನುಭವಗಳನ್ನು ಕಾವ್ಯಾನುಭವವಾಗಿ ಪರಿವರ್ತಿಸುವ ಕ್ರಿಯೆ ನಡೆಯದ ಹೊರತು ಅಲ್ಲಿ ಸಾಹಿತ್ಯವೆಂಬುದು ಸಂಭವಿಸುವುದಿಲ್ಲ.

ಹಾಗಾದರೆ ಕವಿ ತನಗಾಗುವ ಅನುಭವಗಳನ್ನು ಯಾಕೆ ಅಭಿವ್ಯಕ್ತಿಸದೆ ಸುಮ್ಮನಿರುವುದಿಲ್ಲ; ತನ್ನ ಅನುಭವಗಳನ್ನು ಅವರಿವರೊಡನೆ ಹಂಚಿಕೊಳ್ಳುವುದಷ್ಟೇ ಇದರ ಹಿಂದಿರುವ ಪ್ರೇರಣೆಯೇ? ಅಥವಾ ಅದಕ್ಕಿಂತ ಮೂಲಭೂತವಾದದ್ದು ಬೇರೆ ಏನಾದರೂ ಇದೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ನಮಗೆ ತೋರುವ ಮಟ್ಟಿಗೆ, ಮನುಷ್ಯನಿಗೆ ಕಾಲವನ್ನು ಕುರಿತ ಭಯ ಮತ್ತು ಅದರಿಂದ ಪಾರಾಗುವ ಪ್ರಯತ್ನಗಳೇ ಕಲಾನಿರ್ಮಿತಿಯ ಹಿಂದಿರುವ ಮೂಲ ಪ್ರೇರಣೆಯಾಗಿದೆ. ಕಾಲ ಎಂಬುದೊಂದು ನಿರಂತರ ಪ್ರವಾಹ. ನಾವು ಕಾಣುವ ಬದುಕು ನೋಡು ನೋಡುತ್ತಲೇ ಈ ಕಾಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದೆ; ಅದರ ನಿಷ್ಠುರ ಸೆಳೆತಕ್ಕೆ ಯಾವುದೂ ಹೊರತಲ್ಲ, ಕಾಲಗರ್ಭದ ಅಗಸ್ತ್ಯ ಜೀರ್ಣಾಗ್ನಿಯಲ್ಲಿ ಶತಶತಮಾನಗಳ ನಾಗರೀಕತೆ, ಸಂಸ್ಕೃತಿಗಳು ಕರಗಿ ಹೋಗಿವೆ. ಕ್ಷಣಕ್ಷಣವೂ ನಾವು ಹಳಬರಾಗುತ್ತಾ, ಗೋರಿಯ ದಾರಿಯಲ್ಲಿ ಸಾಗುತ್ತಿದ್ದೇವೆ. ಕಣ್ಣೆದುರು ಕಂಡದ್ದು, ಮನಸ್ಸು ಉಂಡದ್ದು ಎಲ್ಲವೂ ಹೀಗೆ ಈ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವಾಗ ನಾವು ಕಂಡದ್ದನ್ನು ನಮಗೆ ಅನಿಸಿದ್ದನ್ನು ಒಟ್ಟಿನಲ್ಲಿ ನಮ್ಮ ವ್ಯಕ್ತಿತ್ವದ ಒಂದಷ್ಟು ಭಾಗವನ್ನಾದರೂ ಈ ಕಾಲದ ಉಪಹತಿಯಿಂದ ಉಳಿಸಿ, ನಿಲ್ಲಿಸಲು ಸಾಧ್ಯವಿಲ್ಲವೆ ? ಸಾಧ್ಯವಾಗುವುದಾದರೆ ದಾರಿ ಯಾವುದು ? ಈ ಅನ್ವೇಷಣೆಯು ಸಾಹಸದ ಪರಿಣಾಮದ ಕನಸುಗಳೇ ನಿರ್ಮಿಸಿವೆ ಸ್ವರ್ಗಲೋಕದ ಕಲ್ಪನೆಯನ್ನು ; ಕ್ಷೀರಸಾಗರ ಮಂಥನದಿಂದ ಅಮೃತವನ್ನು ಪಡೆದು ಅಮರರಾದ ನಿರ್ಜರರ ಕತೆಯನ್ನು ; ಕಳೆದು ಹೋಗುವ ಯೌವನವನ್ನು, ತನ್ನ ಮಗನಿಂದ ಪಡೆದುಕೊಂಡ ಯಯಾತಿಯ ವೃತ್ತಾಂತವನ್ನು, ಈ ಪ್ರಯತ್ನವೇ ಸೃಜಿಸಿದ ಸಾಹಿತ್ಯ ಎಂಬ ಸಾಧನವನ್ನು, ಇಂದು ಇದ್ದು ನಾಳೆ ಕಾಲವಶವಾಗುವ ಕವಿ ಎಂಬ ವ್ಯಕ್ತಿಯ ಅಂತರಂಗದ ಕ್ರಿಯೆ–ಪ್ರತಿಕ್ರಿಯೆಗಳನ್ನು, ಭಾವ–ಭಾವನೆಗಳನ್ನು, ಅನಿಸಿಕೆ–ಆಲೋಚನೆಗಳನ್ನು, ಕಲಾತ್ಮಕ ಅಭಿವ್ಯಕ್ತಿಗಳ ಮೂಲಕ, ಕಾಲದ ಉಪಹತಿಯಿಂದ ಪಾರುಮಾಡಿ, ಅನಂತ ಕಾಲದ ಆಸ್ವಾದದ ಸಾಮಗ್ರಿಯನ್ನಾಗಿ ಮಾಡುವುದು, ಸಾಹಿತ್ಯ, ಕಲೆಗಳ ಮೂಲಕ ಸಾಧ್ಯವಾಗಿದೆ. ವ್ಯಾಸ–ವಾಲ್ಮೀಕಿಗಳಾಗಲಿ, ಕಾಳಿದಾಸ–ಪಂಪರಾಗಲಿ ಇವತ್ತು ಇಲ್ಲ ; ಅವರು ಬಾಳಿಬದುಕಿದ ಪರಿಸರವಾಗಲಿ, ಅವರು ಚಿತ್ರಿಸಿದ ವ್ಯಕ್ತಿಗಳಾಗಲಿ ಇವತ್ತು ಇಲ್ಲ. ಆದರೆ ಅವರ ಕೃತಿಗಳ ಮೂಲಕ, ಅಂದು ಅವರು ಕಂಡು ಉಂಡ ಬದುಕು, ಅವರ ಅನುಭವಗಳು ಎಲ್ಲ ಕಾಲದ ಓದುಗರ ಅನುಭವಗಳಲ್ಲಿ ಮತ್ತೆ ಹೊಸಹೊಸದಾಗಿ ಮೂಡಿ ನಿಲ್ಲುವ ನಿರಂತರತೆಯನ್ನು ಪಡೆದುಕೊಂಡಿವೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ, ಕಾಲದ ಉಪಹತಿಯಿಂದ ಪಾರಾಗಿ, ಕಾಲಾತೀತದ ನೆಲೆಗೆ, ತಮ್ಮ ಅನುಭವಗಳನ್ನು ನಿಲ್ಲಿಸುವ ಸಾಮರ್ಥ್ಯ ಅವರಿಗೆ ಸಿದ್ಧಿಸಿದೆ. ಈ ಅರ್ಥದಲ್ಲಿ ಸಾಹಿತ್ಯ ಕಾಲವನ್ನು ಗೆದ್ದು ನಿಲ್ಲುವ ಒಂದು ಮುಖ್ಯವಾದ ಪ್ರಯತ್ನವಾಗಿದೆ. ●



## ಡಾ. ಪುರಾಣಿಕರ ಬಾಳಿನ ಹಾದಿಯಲ್ಲಿ

| | |
|---|---|
| ೧೮-೮-೧೯೧೮ | ಜನನ, ರಾಯಚೂರು ಜಿಲ್ಲೆಯ ಯಲಬುರಗಿ ತಾಲೂಕಿನ ದ್ಯಾಂಪುರದಲ್ಲಿ. |
| | ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು |
| ೫-೧೨-೧೯೪೩ | ವಿವಾಹ, ಗಿರಿಜಾದೇವಿಯವರೊಡನೆ |
| ೨-೮-೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೨೨-೮-೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲ್ಬರ್ಗ |
| ೧೪-೮-೧೯೪೮ | ಅಸಿಸ್ಟೆಂಟ್ ಕಮೀಷನರ್, (ಜಾಗೀರಾತ್) |
| ೨೫-೯-೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೭-೨-೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೮-೧-೧೯೫೩ | ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ |
| ೯-೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರು |
| ೫-೬-೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೨೯-೩-೧೯೫೮ | ಭಾರತೀಯ ನಾಗರೀಕ ಸೇವೆ (ಐ.ಎ.ಎಸ್) |
| ೩೦-೩-೧೯೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೬-೭-೧೯೬೨ | ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖಾ ಕಾರ್ಯದರ್ಶಿ |
| ೧೮-೨-೧೯೬೪ | ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿಗಳು |
| ೩-೭-೧೯೬೫ | ಡೆಪ್ಯೂಟಿ ಕಮೀಷನರ್, ಮಡಿಕೇರಿ |
| ೫-೫-೧೯೬೭ | ಸಾರಿಗೆ ಕಮೀಷನರ್, ಬೆಂಗಳೂರು |
| ೨೮-೯-೧೯೭೦ | ಡೆಪ್ಯೂಟಿ ಕಮೀಷನರ್, ಬೆಳಗಾವಿ |
| ೧-೧೨-೧೯೭೨ | ಲೇಬರ್ ಕಮೀಷನರ್, ಬೆಳಗಾವಿ |
| ೧೯೭೬ | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ |
| ೩೦-೬-೧೯೭೬ | ನಿವೃತ್ತಿ ಹಾಗೂ ವಿಶ್ರಾಂತ ಜೀವನ |
| ೧೯೭೮ | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ೧೯೮೦ | ಭಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು ಕಲ್ಕತ್ತಾ) |
| ೧೯೮೧ | ಮಾಳವಾಡ ಪ್ರಶಸ್ತಿ |

## ಡಾ. ಸಿದ್ದಯ್ಯ ಪುರಾಣಿಕರ ಸಾಹಿತ್ಯ ಸಂತಾನ

| | | | |
|---|---|---|---|
| ೧. | ಸುಬೋಧಸಾರ | ಸಂಪಾದಿತ ಕೃತಿ (ಹರ್ಡೇಕರ ಮಂಜಪ್ಪನವರೊಡನೆ | ೧೯೩೯ |
| ೨. | ಆತ್ಮಾರ್ಪಣ | ೩ ಅಂಕದ ರಂಗನಾಟಕ | ೧೯೪೨ |
| ೩. | ಶ್ರೀಕಾರ ಹಾಗೂ ಪ್ರಬಂಧ ಮಾಲೆ | ಸಂಪಾದಿತ ಕೃತಿ (ಶ್ರೀ ಇಟಗಿ ರಾಘವೇಂದ್ರ ಅವರೊಡನೆ) | ೧೯೫೩ |
| ೪. | ಜಲಪಾತ | ಕವನ ಸಂಕಲನ | ೧೯೫೨ |
| ೫. | ವಿಕಾಸವಾಣಿ | ವಿಕಾಸಯೋಜನೆಗೆ ಸಂಬಂಧಿಸಿದ ಹಾಡುಗಳು | ೧೯೫೪ |
| ೬. | ಕರುಣಾಶ್ರಾವಣ | ಕವನ ಸಂಕಲನ | ೧೯೫೫ |
| ೭. | ತುಷಾರ ಹಾರ | ಕಿರುಗೀತೆಗಳು | ೧೯೫೭ |
| ೮. | ಪದ್ಯ ರತ್ನಾಕರ | ಸಂಪಾದನೆ (ನರಸಿಂಗರಾವ್ ಮಾನ್ವಿ ಮತ್ತು ಎಫ್. ಜಿ. ಮಠದ ಇವರೊಡನೆ) | ೧೯೫೭ |
| ೯. | ಮಾನಸ ಸರೋವರ | ಕವನ ಸಂಕಲನ | ೧೯೫೯ |
| ೧೦. | ಭಾರತವೀರ | ೩ ಅಂಕದ ರಂಗನಾಟಕ | ೧೯೬೩ |
| ೧೧. | ಶರಣ ಚರಿತಾಮೃತ | ಜೀವನ ಚರಿತ್ರೆ | ೧೯೬೪ |
| ೧೨. | ಮಹಾತ್ಮ ಕನಕದಾಸ ಪ್ರಶಸ್ತಿ | ಸಂಪಾದಕ ಸಮಿತಿಯ ಅಧ್ಯಕ್ಷರಾಗಿ | ೧೯೬೫ |
| ೧೩. | ರಜತ ರೇಖೆ | ಪ್ರಸಾರ ನಾಟಕಗಳು | ೧೯೬೫ |
| ೧೪. | ಕಲ್ಲೋಲ ಮಾಲೆ | ಅನುಭಾವ ಗೀತೆಗಳು | ೧೯೬೮ |
| ೧೫. | ಶರಣ ಪ್ರಸಾದ | ಸಂಪಾದಿತ ಕೃತಿ (ಬಿ. ಎ. ಸನದಿಯವರೊಂದಿಗೆ) | ೧೯೬೯ |
| ೧೬. | ಮೊದಲು ಮಾನವನಾಗು | ಕವನ ಸಂಗ್ರಹ | ೧೯೬೯ |
| ೧೭. | ತುಪ್ಪಾ ರೊಟ್ಟಿ ಗೀ ಗೀ ಗೀ | ಮಕ್ಕಳ ಪದಗಳು | ೧೯೭೩ |
| ೧೮. | ಸಿದ್ಧರಾಮ | ಜೀವನ ಚರಿತ್ರೆ | ೧೯೭೪ |
| ೧೯. | ನಿರ್ಬಂಧನ | ೨ ಏಕಾಂಕ ನಾಟಕಗಳು | ೧೯೭೪ |
| ೨೦. | ತ್ರಿಭುವನ ಮಲ್ಲ | ಐತಿಹಾಸಿಕ ಕಾದಂಬರಿ | ೧೯೭೪ |
| ೨೧. | ಬಸವಣ್ಣನವರ ಜೀವನ ಹಾಗೂ ಸಂದೇಶ | ಉಪನ್ಯಾಸ | ೧೯೭೭ |
| ೨೨. | ವಚನೋದ್ಯಾನ | ವಚನಗಳು | ೧೯೭೭ |
| ೨೩. | ನಜೀರ್ ಅಕಬರಾಬಾದಿ | ಜೀವನ ಚರಿತ್ರೆ | ೧೯೭೮ |
| ೨೪. | ಗಿಲ್ ಗಿಲ್ ಗಿಲಗಚ್ಚಿ | ಮಕ್ಕಳ ಪದಗಳು | ೧೯೭೮ |
| ೨೫. | ಹರ್ಡೇಕರ್ ಮಂಜಪ್ಪನವರು | ಜೀವನ ಚರಿತ್ರೆ | ೧೯೭೮ |
| ೨೬. | ಮಿರ್ಜಾ ಗಾಲಿಬ್ | ಜೀವನ ಚರಿತ್ರೆ | |

**ಬರಲಿರುವ ಕೃತಿಗಳು :**

೧. ಮರುಳಸಿದ್ಧನ ಕಂತೆ
೨. ವಚನೋದ್ಯಾನ-ಸಂಪುಟ ೨
೩. ತುಷಾರ ಹಾರ_ವಿಸ್ತೃತ ದ್ವಿತೀಯ ಆವೃತ್ತಿ
೪. ಕವನ ಸಂಗ್ರಹ
೫. ಲೇಖನಗಳು ಮತ್ತು ಭಾಷಣಗಳು
೬. ರೇಡಿಯೋ ರೂಪಕಗಳ ಸಂಗ್ರಹ

# ಡಾ. ಸಿದ್ಧಯ್ಯ ಪುರಾಣಿಕರ ಜೀವನದ ಪ್ರಮುಖ ಘಟನೆಗಳು

| | |
|---|---|
| ೧೮_೮_೧೯೧೮ | ಜನನ, ರಾಯಚೂರು ಜಿಲ್ಲೆಯ ಯಲಬುರಗಿ ತಾಲ್ಲೂಕಿನ ದ್ಯಾಂಪುರದಲ್ಲಿ<br>ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು |
| ೧೯೩೭ | ಆಲಮಟ್ಟಿಯಲ್ಲಿ ಹರ್ಡೇಕರ ಮಂಜಪ್ಪನವರೊಂದಿಗೆ ಆಶ್ರಮವಾಸ |
| ೮೯೪೩ | ತಹಸಿಲ್ದಾರರಾಗಿ ಉದ್ಯೋಗ ಆರಂಭ |
| ೫-೧೨-೧೯೪೩ | ವಿವಾಹ, ಗಿರಿಜಾದೇವಿಯವರೊಡನೆ |
| ೨_೮_೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೨೨_೮-೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲ್ಬರ್ಗ |
| ೧೪_೮_೧೯೪೮ | ಅಸಿಸ್ಟೆಂಟ್ ಕಮೀಷನರ್ (ಜಾಹೀರಾತ್) |
| ೨೫_೯-೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೭_೨_೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೮_೧_೧೯೫೩ | ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರು |
| ೫_೬-೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೨೯-೩_೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.) |
| ೩೦-೩-೧೯೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೬_೭_೧೯೬೨ | ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು |
| ೧೮_೨_೧೯೬೪ | ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ |
| ೩-೭-೧೯೬೫ | ಡೆಪ್ಯೂಟಿ ಕಮೀಷನರ್, ಮಡಿಕೇರಿ |
| ೫_೫-೧೯೬೭ | ಸಾರಿಗೆ ಕಮೀಷನರ್, ಬೆಂಗಳೂರು |
| ೨೮-೯_೧೯೭೪ | ಡೆಪ್ಯೂಟಿ ಕಮೀಷನರ್, ಬೆಳಗಾವಿ |
| ೧-೧೨-೧೯೭೨ | ಲೇಬರ್ ಕಮೀಷನರ್, ಬೆಂಗಳೂರು |
| ೩೦-೧೨-೧೯೭೪ | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ೨೫_೧೦-೧೯೭೫ | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ |
| ೩೦-೬_೧೯೭೬ | ನಿವೃತ್ತಿ ಹಾಗೂ ವಿಶ್ರಾಂತ ಜೀವನ |
| ೧೯೭೮ | ವಚನೋದ್ಯಾನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ<br>ಅತ್ಯುತ್ತಮ ಪುಸ್ತಕ ಪುರಸ್ಕಾರ |
| ೧೯೭೯ | ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ :<br>ಬಸವ ಪಥ (ಕನ್ನಡ, ಮಾಸಿಕ), ಬಸವ ಜರ್ನಲ್ (ಇಂಗ್ಲಿಷ್, ತ್ರೈಮಾಸಿಕ)<br>ಪತ್ರಿಕೆಗಳ ಪ್ರಧಾನ ಸಂಪಾದಕ |
| ೧೯೮೦ | ಭಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) |
| ೧೯೮೧ | ಮಾಳವಾಡ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯ |
| ೨೧_೬_೧೯೮೧ | ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ : ಅಭಿನಂದನ ಗ್ರಂಥ<br>ಹಾಗೂ ನಿಧಿ ಸಮರ್ಪಣೆ |